ಅಧ್ಯಯನಾಂಗ

ಹಂಪಿ ವಿಶ್ವವಿದ್ಯಾಲಯಕ್ಕೆ ಸಲ್ಲಿಸಿದ ಎಂ. ಫಿಲ್. ಪದವಿಯ ಸಂಪ್ರಬಂಧ

"ಕರ್ನಾಟಕದ ತಿಗಳರ ವಿವಾಹ ಮತ್ತು ನ್ಯಾಯ ಪದ್ಧತಿ": ಒಂದು ಸಾಂಸ್ಕೃತಿಕ ಅಧ್ಯಯನ

ಸಂಶೋಧನಾ ವಿದ್ಯಾರ್ಥಿ
ನೋಂದಣಿ ಸಂಖ್ಯೆ : 140701430078

2014–15

1240

[illegible]

ಹಂಪಿ ವಿಶ್ವವಿದ್ಯಾಲಯಕ್ಕೆ ಸಲ್ಲಿಸಿದ ಎಂ. ಫಿಲ್. ಪದವಿಯ ಸಂಪ್ರಬಂಧ

"ಕರ್ನಾಟಕದ ತಿಗಳರ ವಿವಾಹ ಮತ್ತು ನ್ಯಾಯ ಪದ್ಧತಿ": ಒಂದು ಸಾಂಸ್ಕೃತಿಕ ಅಧ್ಯಯನ

ಸಂಶೋಧಕರು

ಅಶ್ವಥ. ಕೆ

ಮಾರ್ಗದರ್ಶಕರು

ಡಾ॥ ಬಿ. ಎ. ಅನ್ನದಾನೇಶ್

ಪ್ರಾಧ್ಯಾಪಕರು, ಮುಖ್ಯಸ್ಥರು

ಕನ್ನಡ ಪಿ. ಜಿ. ಸೆಂಟರ್

ಮಹಾರಾಣಿ ಲಕ್ಷ್ಮೀ ಅಮ್ಮಣ್ಣಿ ಮಹಿಳಾ ವಿದ್ಯಾಲಯ,

18ನೇ ಅಡ್ಡರಸ್ತೆ, ಮಲ್ಲೇಶ್ವರ, ಬೆಂಗಳೂರು – 560012.

ಬಿ. ಎಂ. ಶ್ರೀ. ಸ್ಮಾರಕ ಪ್ರತಿಷ್ಠಾನ



ಎಂ. ವಿ.ಸೀ. ಸ್ನಾತಕೋತ್ತರ ಕೇಂದ್ರ

ಬಿ.ಎಂ. ಶ್ರೀ ಸ್ಮಾರಕ ಪ್ರತಿಷ್ಠಾನ

ಬೆಂಗಳೂರು

2014–15

ಮಾರ್ಗದರ್ಶಕರ ದೃಢೀಕರಣ ಪತ್ರ

ಬಿ.ಎಂ.ಶ್ರೀ ಸ್ಮಾರಕ ಪ್ರತಿಷ್ಠಾನ ಬೆಂಗಳೂರು, ಎಂ.ವಿ.ಸೀ. ಸ್ನಾತಕೋತ್ತರ ಸಂಶೋಧನ ಕೇಂದ್ರದ ಮೂಲಕ ಹಂಪಿ ಕನ್ನಡ ವಿಶ್ವವಿದ್ಯಾಲಯಕ್ಕೆ 2014–15ರ ಸಾಲೀನ ಎಂ. ಫಿಲ್. ಪದವಿಗಾಗಿ "ಕರ್ನಾಟಕದ ತಿಗಳರ ವಿವಾಹ ಮತ್ತು ನ್ಯಾಯ ಪದ್ಧತಿ: ಒಂದು ಸಾಂಸ್ಕೃತಿಕ ಅಧ್ಯಯನ" ಎಂಬ ಸಂಪ್ರಬಂಧವನ್ನು ಅಶ್ವಥ. ಕೆ ಅವರು ನನ್ನ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿದ್ದಾರೆ.

ಈ ಸಂಪ್ರಬಂಧ ವಿದ್ಯಾರ್ಥಿಯ ಸ್ವಂತ ಬರವಣಿಗೆಯಾಗಿದ್ದು ಇದರ ಯಾವುದೇ ಭಾಗವನ್ನು ಈವರೆಗೂ ಬೇರೆಲ್ಲೂ ಪ್ರಕಟಪಡಿಸಿಲ್ಲ ಮತ್ತು ಬೇರೆ ಯಾವುದೇ ಪದವಿಗಾಗಿ ಸಲ್ಲಿಸಿಲ್ಲ ಎಂದು ಈ ಮೂಲಕ ದೃಢೀಕರಿಸುತ್ತೇನೆ.

ದಿನಾಂಕ: 29.07.15

ಸ್ಥಳ : ಬೆಂಗಳೂರು

B. A. Annadanesha.

ಡಾ॥ ಬಿ. ಎ. ಅನ್ನದಾನೇಶ್

ಪ್ರಾಧ್ಯಾಪಕರು, ಮುಖ್ಯಸ್ಥರು

ಕನ್ನಡ ಪಿ. ಜಿ. ಸೆಂಟರ್

ಮಹಾರಾಣಿ ಲಕ್ಷ್ಮೀ ಅಮ್ಮಣ್ಣಿ ಮಹಿಳಾ ವಿದ್ಯಾಲಯ,

18ನೇ ಅಡ್ಡರಸ್ತೆ, ಮಲ್ಲೇಶ್ವರ, ಬೆಂಗಳೂರು – 560012.

ಡಾ. ಬಿ.ಎ. ಅನ್ನದಾನೇಶ್

ಮುಖ್ಯಸ್ಥರು, ಕನ್ನಡ ವಿಭಾಗ

ಮಹಾರಾಣಿ ಲಕ್ಷ್ಮೀಅಮ್ಮಣ್ಣಿ ಮಹಿಳಾ ಪದವಿ ಕಾಲೇಜು

ಮಲ್ಲೇಶ್ವರಂ, ಬೆಂಗಳೂರು – 560 012

ಸಂಶೋಧಕರ ಪ್ರಮಾಣ ಪತ್ರ

ಬಿ.ಎಂ.ಶ್ರೀ ಸ್ಮಾರಕ ಪ್ರತಿಷ್ಠಾನ ಬೆಂಗಳೂರು, ಎಂ.ವಿ.ಸೀ. ಸ್ನಾತಕೋತ್ತರ ಸಂಶೋಧನ ಕೇಂದ್ರದ ಮೂಲಕ ಹಂಪಿ ಕನ್ನಡ ವಿಶ್ವವಿದ್ಯಾಲಯಕ್ಕೆ 2014–15ರ ಸಾಲೀನ ಎಂ. ಫಿಲ್. ಪದವಿಗಾಗಿ "ಕರ್ನಾಟಕದ ತಿಗಳರ ವಿವಾಹ ಮತ್ತು ನ್ಯಾಯ ಪದ್ಧತಿ: ಒಂದು ಸಾಂಸ್ಕೃತಿಕ ಅಧ್ಯಯನ" ಎಂಬ ಸಂಪ್ರಬಂಧವನ್ನು ಡಾ॥ ಅನ್ನದಾನೇಶ್ ಅವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿರುತ್ತೇನೆ.

ಈ ಸಂಪ್ರಬಂಧ ನನ್ನ ಸ್ವಂತ ಬರವಣಿಗೆಯಾಗಿದ್ದು ಇದರ ಯಾವುದೇ ಭಾಗವನ್ನು ಈವರೆಗೂ ಬೇರೆಲ್ಲೂ ಪ್ರಕಟಪಡಿಸಿಲ್ಲ ಮತ್ತು ಬೇರೆ ಯಾವುದೇ ಪದವಿಗಾಗಿ ಸಲ್ಲಿಸಿಲ್ಲ ಎಂದು ಈ ಮೂಲಕ ದೃಢೀಕರಿಸುತ್ತೇನೆ.

ದಿನಾಂಕ: 29.07.15
ಸ್ಥಳ : ಬೆಂಗಳೂರು

ಅಶ್ವಥ. ಕೆ
ಬಿ.ಎಂ.ಶ್ರೀ ಸ್ಮಾರಕ ಪ್ರತಿಷ್ಠಾನ
ಎಂ.ವಿ.ಸೀ. ಸ್ನಾತಕೋತ್ರರ
ಸಂಶೋಧನ ಕೇಂದ್ರ.
ಬೆಂಗಳೂರು

ಕೃತಜ್ಞತೆಗಳು

ಹಂಪಿ ವಿಶ್ವವಿದ್ಯಾಲಯಕ್ಕೆ ನನ್ನ ಎಂ. ಫಿಲ್ ಪದವಿಗಾಗಿ ಸಲ್ಲಿಸುತ್ತಿರುವ "ಕರ್ನಾಟಕದ ತಿಗಳರ ವಿವಾಹ ಮತ್ತು ನ್ಯಾಯ ಪದ್ಧತಿ: ಒಂದು ಸಾಂಸ್ಕೃತಿಕ ಅಧ್ಯಯನ" ಎಂಬ ಸಂಪ್ರಬಂಧವನ್ನು ಸಿದ್ಧ ಪಡಿಸಲು ಮಾರ್ಗದರ್ಶಕರಾಗಿ ಎಲ್ಲಾ ರೀತಿಯ ಸಲಹೆ-ಸಹಕಾರಗಳನ್ನು ನೀಡಿದ ಡಾ॥ ಬಿ.ಎ.ಅನ್ನದಾನೇಶ್ ಪ್ರಾಧ್ಯಾಪಕರು, ಮುಖ್ಯಸ್ಥರು ಕನ್ನಡ ಪಿ.ಜಿ ಸೆಂಟರ್ ಮಹಾರಾಣಿ ಲಕ್ಷ್ಮೀ ಅಮ್ಮಣ್ಣಿ ಮಹಿಳಾ ವಿದ್ಯಾಲಯ ಇವರಿಗೆ ತುಂಬು ಹೃದಯದ ಕೃತಜ್ಞತೆಗಳನ್ನು ಸಲ್ಲಿಸುತ್ತಿದ್ದೇನೆ.

ಈ ಸಂಪ್ರಬಂಧವನ್ನು ರಚಿಸಲು ಸಹಕಾರ ಮತ್ತು ಪ್ರೋತ್ಸಾಹ ನೀಡಿದ ಬಿ.ಎಂ.ಶ್ರೀ ಸ್ಮಾರಕ ಪ್ರತಿಷ್ಠಾನದ ಅಧ್ಯಕ್ಷರಾದ ಪಿ.ವಿ.ನಾರಾಯಣ್ ರವರಿಗೆ ಮತ್ತು ಎಂ. ಫಿಲ್. ಸಂಶೋಧನ ವಿಭಾಗದ ಮುಖ್ಯಸ್ಥರಾದ ಶ್ರೀಮತಿ ವಿಜಯ ಸುಬ್ಬರಾಜ್ ರವರಿಗೆ ಹಾಗೂ ಸಂಶೋಧನಾ ಕೇಂದ್ರದ ಎಲ್ಲಾ ಅಧ್ಯಾಪಕರುಗಳಿಗೆ ತುಂಬು ಹೃದಯದ ಕೃತಜ್ಞತೆಗಳು.

ನನ್ನ ವಿದ್ಯಾಭ್ಯಾಸಕ್ಕೆ ಸಹಕಾರ ಸ್ಫೂರ್ತಿ ನೀಡಿದ ನನ್ನ ತಾಯಿಯವರಾದ ಶ್ರೀಮತಿ ಸಿದ್ದಲಿಂಗಮ್ಮ, ತಂದೆಯವರಾದ ಕನ್ನಿಗಯ್ಯ, ನನ್ನ ಅತ್ತಿಗೆಯಾದ ಶ್ರೀಮತಿ ಶೀಲಾ ಮತ್ತು ನನ್ನ ಪ್ರೀತಿ ಅಣ್ಣ ಕೆ.ನಾಗರಾಜ್ ಹಾಗೂ ನನ್ನ ಚಿನ್ನುಬಂಗಾರಳಿಗೂ ಭಕ್ತಿ ಪೂರ್ವಕವಾದ ವಂದನೆಗಳು.

ಈ ಸಂಪ್ರಬಂಧ ಸಂಗ್ರಹ ಕಾರ್ಯದಲ್ಲಿ ಅನೇಕ ತೊಂದರೆಗಳನ್ನು ಅನುಭವಿಸಿ, ನನ್ನ ಆತ್ಮ ವಿಶ್ವಾಸ ಬತ್ತದಂತೆ ನೋಡಿಕೊಂಡ ಗೆಳೆಯರೆಲ್ಲರಿಗೂ ತುಂಬು ಹೃದಯದ ವಂದನೆಗಳು.

ಈ ಸಂಪ್ರಬಂಧ ಕ್ಷೇತ್ರ ಕಾರ್ಯದಲ್ಲಿ ನನಗೆ ಸಹಾಯ ಮಾಡಿದ ಶ್ರೀಕಂಠಯ್ಯ ನವರು ಪ್ರಾಂಶುಪಾಲರು ರಾಜಾಜಿನಗರ ಪದವಿಪೂರ್ವ ಕಾಲೇಜು ಮತ್ತು ಕೆ.ವಿ.ಲಕ್ಷ್ಮಣ್‌ರವರು, ಗೆಳೆಯ ರಮೇಶ್.ಕೆ.ವಿ ಹಾಗೂ ಕೆ.ಟಿ.ಎಸ್.ವಿ ಸಂಘ-ಸಂಸ್ಥೆಯ ಎಲ್ಲ ಪದಾಧಿಕಾರಿಗಳಿಗೂ ತುಂಬು ಹೃದಯದ ಧನ್ಯವಾದಗಳು.

ಸಂಶೋಧಕರು

ಅಶ್ವಥ. ಕೆ

ಕರ್ನಾಟಕದ ತಿಗಳರ ವಿವಾಹ ಮತ್ತು ನ್ಯಾಯ ಪದ್ಧತಿ: ಒಂದು ಸಾಂಸ್ಕೃತಿಕ ಅಧ್ಯಯನ

ಪರಿವಿಡಿ

ಅಧ್ಯಾಯ ೦೧

ಪೀಠಿಕೆ

ಅಧ್ಯಾಯ – 01

ಪೀಠಿಕೆ

ಜಗತ್ತಿನ ಪ್ರತಿಯೊಂದಕ್ಕೂ ತನ್ನದೇ ಆದ ನಿರ್ದಿಷ್ಟ ಚರಿತ್ರೆಯಿರುತ್ತದೆ. ಮನುಷ್ಯ ಪ್ರಾಣಿಜೀವನದಿಂದ ವಿಕಸನಗೊಂಡು ಬರುಬರುತ್ತಲೇ ನೂರಾರು ಜನಾಂಗಗಳನ್ನು, ಸಂಸ್ಕೃತಿಗಳನ್ನು ಬೆಳೆಸಿಕೊಂಡು ಪೋಷಿಸಿಕೊಂಡು ಬಂದನು ಇವುಗಳನ್ನು ತಿಳಿಯಲು ಜನಾಂಗೀಯ ಅಧ್ಯಯನಗಳು ಅವಶ್ಯಕವೆಂದು ತಿಳಿದಾಗ ಅಧ್ಯಯನಕ್ಕೆ ತೊಡಗಿದನು. ಈ ಅಧ್ಯಯನಗಳನ್ನು ಒಂದು ಸೀಮಿತ ಶಾಸ್ತ್ರದವರು ಮಾತ್ರ ಅಧ್ಯಯನಕ್ಕೆ ಒಳಗು ಮಾಡಿಕೊಂಡು ಅದರಿಂದ ಹೊರಬಂದ ಮಾಹಿತಿಗಳೇ ಅಂತಿಮ ಎನ್ನುವಂತಹ ಕಾಲವೊಂದಿತ್ತು. ಆದರೆ ಇಂದು ಹೊಸ ಆಲೋಚನಾ ಕ್ರಮ, ನವನವೀನ ಅಧ್ಯಯನ ಶಿಸ್ತುಗಳ ಹಿನ್ನಲೆಯಲ್ಲಿ ಹಳೆಯ ಅಧ್ಯಯನದ ಮನೋಭಾವವು ಬದಲಾವಣೆಗೊಂಡಿದೆ. ಆದ್ದರಿಂದ ಇಂದು ಯಾವುದೇ ವಿಚಾರದ ಬಗಗೆ ಅಧ್ಯಯನಕ್ಕೆ ತೊಡಗಿದಾಗ ಅದು ತಲಸ್ಪರ್ಶಿಯಾದ ಅಧ್ಯಯನವಾಗಿರಬೇಕೆಂದು ವಿದ್ವಾಂಸರು ಬಯಸುತ್ತಾರೆ. ಹಾಗೆಯೇ ಅಧ್ಯಯನಗಳು ಅಂತರ್ ಶಾಸ್ತ್ರೀಯ ಅಧ್ಯಯನಕ್ಕೆ ಒತ್ತು ಕೊಡುತ್ತಾ ಹಿಂದಿನ ಸಂಶೋಧನಾ ಮನೋಭಾವವನ್ನು ಇಂದಿನ ಸಂಶೋಧನಾಕಾರರಲ್ಲಿ ತೊಡೆದು ಹಾಕುತ್ತಾ ಸತ್ಯವನ್ನು ಶೋಧಿಸಲು ಗಟ್ಟಿತನ, ಹೊಳಪನ್ನು ಹೊರಹಾಕಲು ರಹದಾರಿಯನ್ನು ಸೃಷ್ಠಿಸಲಾಗಿದೆ.

ಭಾರತದಲ್ಲಿ ಜಾತಿ ವ್ಯವಸ್ಥೆಯ ಪ್ರಾಚೀನ ಕಾಲದಿಂದಲೂ ಉಳಿದು ಬಂದಿರುವ ಪದ್ದತಿ ಒಂದೊಂದು ಗ್ರಾಮ ಪ್ರತ್ಯೇಕ ಜೀವನ ಪದ್ಧತಿಯನ್ನು ರೂಢಿಸಿಕೊಂಡು ಬಂದಿದೆ. ಹೀಗೆ ಜಾತಿಗಳ ಒಂದೆಡೆ ಬದುಕುವಾಗ ಸಮಾನ ಸಂಸ್ಕೃತಿಗಳನ್ನು ರೂಢಿಸಿಕೊಂಡಿರುವಂತೆ ಪ್ರತಿಯೊಂದು ಜಾತಿಯು ತನ್ನದೇ ಆದ ಪದ್ಧತಿ ಆಚರಣೆಗಳನ್ನು ರೂಢಿಸಿಕೊಂಡು ಅನುಸರಿಸುತ್ತ ಬಂದಿದೆ. ಈ ಆಚರಣೆಗಳು ಹಿಂದೆ ಲೌಖಿಕ ಮತ್ತು ಅಲೌಖಿಕ ಒತ್ತಡಗಳು ಕಾರ್ಯನಿರ್ವಹಿಸುತ್ತವೆಂಬುದು ಎಲ್ಲರಿಗೂ ತಿಳಿದ ವಿಷಯ. ಅಂತಹ ಆಚರಣೆಗಳ

ಸತ್ಯಾಸತ್ಯತೆಗಳನ್ನು ಅರಿಯುವುದು ಮುಖ್ಯ ಉದ್ದೇಶವಾದಾಗ ಮಾತ್ರ ಪ್ರಾದೇಶಿಕ ರಾಜಕೀಯ, ಆರ್ಥಿಕ ಸ್ಥಿತಿಗತಿಗಳನ್ನು ತಿಳಿಯಲು ಸಾಧ್ಯ ಆದ್ದರಿಂದ ಇಂದು ಬಹುತೇಕ ಆಚರಣೆಗಳು ಸಂಸ್ಕೃತಿಕರಣಗೊಂಡು ಜನಪದ ಮೂಲವಾದ ಆಚರಣೆಗಳು ಸಂಸ್ಕೃತಿವನ್ನು ಅಥವಾ ಮೇಲ್ವರ್ಗದ ಜನರ ಪೂಜಾ ಪದ್ದತಿಯನ್ನು ಅನುಸರಿಸುತ್ತಾ ಪರಿವರ್ತನೆ ಹೊಂದುತ್ತಿವೆ.

ಈ ರೀತಿಯ ಆಚರಣೆಗಳಲ್ಲಿ ವಿವಾಹ ಮತ್ತು ನ್ಯಾಯ ಪದ್ಧತಿಗಳು ಒಂದಾಗಿದ್ದು ಇವುಗಳನ್ನು ತಿಳಿಯಲು ವಿವಿಧ ಜನಾಂಗಗಳಲ್ಲಿ ''ತಿಗಳ ಜನಾಂಗದ ಮದುವೆ ಆಚರಣೆಗಳು ಮತ್ತು ನ್ಯಾಯ ವ್ಯವಸ್ಥೆ'' ಎಂಬ ವಿಷಯವನ್ನು ಅಧ್ಯನದ ಕ್ಷೇತ್ರವಾಗಿ ಆಯ್ಕೆ ಮಾಡಿಕೊಳ್ಳಲಾಗಿದೆ.

ಅಧ್ಯಾಯ ೦೨

ಅಧ್ಯಯನದ ಉದ್ದೇಶ ಮತ್ತು ವ್ಯಾಪ್ತಿ

ಅಧ್ಯಾಯ – 02

ಅಧ್ಯಯನದ ಉದ್ದೇಶ ಮತ್ತು ವ್ಯಾಪ್ತಿ

ಸಂಸ್ಕೃತಿ ಎಂಬುದು ನಿಂತ ನೀರಲ್ಲ, ಅದು ಸದಾ ಹರಿಯುತ್ತಿರುವಂತಹ ಪ್ರವಾಹವಿದ್ದಂತೆ ಅದು ಸದಾ ಚಲನಶೀಲವಾದದ್ದು, ಮನುಷ್ಯನು ನಾಗರೀಕನಾದಂತೆ ಸಂಸ್ಕೃತಿಯೂ ಕೂಡ ವಿಭಿನ್ನ ವ್ಯತ್ಯಾಸದೊಂದಿಗೆ ಬದಲಾಗುತ್ತದೆ ಸಂಸ್ಕೃತಿಯೆಂಬುದು ಒಂದು ಸೀಮಿತ ಜನಾಂಗ ಮತ್ತು ಜಾತಿಗೂ ಕೂಡ ಭಿನ್ನವಾಗಿರುತ್ತದೆ.

ಭಾರತ ದೇಶ ಬಹು ಸಂಸ್ಕೃತಿಗಳನ್ನೊಳಗೊಂಡ ಜಾತ್ಯಾತೀತ ರಾಷ್ಟ್ರ ಇಲ್ಲಿನ ಪ್ರತಿಯೊಂದು ಜನಾಂಗವು ಕೂಡ ತಮ್ಮದೇಯಾದಂತಹ ಆಚಾರ– ವಿಚಾರ ರೂಢಿ ಸಂಪ್ರದಾಯಗಳನ್ನು, ನಂಬಿಕೆ, ಆಚರಣೆಗಳು, ಹಬ್ಬಗಳು, ದೇವತಾ – ಆರಾಧನೆಗಳು, ಉಡುಗೆ – ತೊಡುಗೆ ಜೀವನ ಕ್ರಮಗಳು ಎಲ್ಲವೂ ಧರ್ಮ – ಜಾತಿಗೆ ಅನುಗುಣವಾಗಿ ಪರಸ್ಪರ ವಿಭಿನ್ನವಾಗಿರುತ್ತದೆ. ಜನಾಂಗೀಯ ಅಧ್ಯಯನ ನಡೆಸಿದ ನಂತರವೇ ವಿಭಿನ್ನ ಸಂಸ್ಕೃತಿಯ ಸ್ವರೂಪ ಹಾಗು ವಿಶಿಷ್ಟತೆಯನ್ನು ಸ್ಪಷ್ಟವಾಗಿ ಅರಿಯಲು ಸಾಧ್ಯವಾಗುತ್ತದೆ.

ಡಿ.ವಿ.ಜಿಯವರ ಅಭಿಪ್ರಾಯದಲ್ಲಿ ಹೇಳುವುದಾದರೆ “ಕೊಳಗೇರಿಯಲ್ಲಿ ವಾಸಿಸುವ ಅಥವಾ ಹಳ್ಳಿಯಲ್ಲಿರುವ ಮನುಷ್ಯರಲ್ಲಿ ಸಾಮಾಜಿನ – ಆರ್ಥಿಕ ಶಕ್ತಿ ನಿರೀಕ್ಷೆಯ ನಯ, ವಿನಯ, ಸೊಬಗು ಸಿಗದೆ ಇರಬಹುದು. ಅಂದ ಕೂಡಲೇ ಅವರಲ್ಲಿ ಸಂಸ್ಕೃತಿ ಇಲ್ಲ ಎಂದು ತೀರ್ಮಾನಿಸಲಾಗದು ಅವರಿಗೆ ಅವರದೇ ಆದ ಸಂಸ್ಕೃತಿ ಇರುತ್ತದೆ ಎಂಬ ಮಾತು ಅಷ್ಟೇ ಸತ್ಯವಾದದ್ದು.”1

---

1) ಎರವರ ಸಂಸ್ಕೃತಿ : ಸಂ. ಡಾ. ಪಿ.ಎಸ್.ಹರೀಶ್, ಪು.ಸಂ. 23

ಇತ್ತೀಚಿನ ಜಾಗತೀಕರಣ ಹಾಗೂ ನಗರೀಕರಣದ ಪ್ರಭಾವದಿಂದಾಗಿ ಪ್ರಾಚೀನ ಮೌಲ್ಯಗಳ ಆಚಾರ ವಿಚಾರದಲ್ಲಿ ಬದಲಾವಣೆ ಕಂಡು ಬರುತ್ತಿದ್ದು ಪ್ರಾಚೀನ ಸಂಸ್ಕೃತಿ ಹಾಗೂ ಅದರ ಹಿಂದಿನ ವೈಜ್ಞಾನಿಕ ಸತ್ಯಗಳು ಕಣ್ಮರೆಯಾಗುತ್ತಿವೆ ಅಂದರೆ ಬಹುಕಾಲದಿಂದ ರೂಢಿಯಲ್ಲಿನ ವಿವಾಹ ಪದ್ಧತಿ, ನ್ಯಾಯ ಪದ್ಧತಿ ಅವುಗಳೊಂದಿಗೆ ಸಾಮಾಜಿಕ ಪದ್ಧತಿ, ಧಾರ್ಮಿಕ, ಆರ್ಥಿಕ, ರಾಜಕೀಯ ಪದ್ಧತಿ ಹಾಗೂ ಸಂಸ್ಕೃತಿ ಆಚಾರಣೆಗಳು ಇನ್ನು ಮುಂತಾದವುಗಳಲ್ಲಿ ಬದಲಾವಣೆಯಾಗಿರುವುದನ್ನು ಮತ್ತು ಇನ್ನೂ ಸಹ ಬದಲಾವಣೆಗಳು ನಿರಂತರವಾಗಿ ಸಾಗುತ್ತಿರುವುದನ್ನ ಕಾಣಬಹುದು.

ದೇಶದಲ್ಲಿ ಜಾತಿ ವ್ಯವಸ್ಥೆಗಳು ಮೂಡಿ ಬಂದ ಹಾದಿಯಲ್ಲೆ ಪ್ರತಿಯೊಂದು ಜಾತಿಗಳು ತನ್ನದೇಯಾದಂತಹ ಪ್ರದೇಶದಲ್ಲಿ ನೆಲೆನಿಂತು ತಮ್ಮದೇಯಾದ ಕುಲಕಸುಬುಗಳಲ್ಲಿ ತೊಡಗುತ್ತಾ ತಮ್ಮ ಜನಾಂಗದ ವ್ಯವಸ್ಥೆಗಳಿಗನುಗುಣವಾದಂತಹ ಕಾನೂನು ರೀತಿ ನೀತಿ ಆಚಾರ–ವಿಚಾರ ರೂಢಿಸಂಪ್ರದಾಯ ಎಲ್ಲಕ್ಕಿಂತಲೂ ಹೆಚ್ಚಿನದಾಗಿ ಕುಲದ ವ್ಯವಸ್ಥೆ, ರಾಜಕೀಯ ವ್ಯವಸ್ಥೆಗಳನ್ನ ವಿಭಿನ್ನವಾಗಿ ರೂಢಿಸಿಕೊಂಡಿದ್ದು ಅದರ ವ್ಯಾಪ್ತಿಯಲ್ಲೇ ಜೀವನ ನಡೆಸುತ್ತಿರುವುದನ್ನ ಇಂದಿಗೂ ಕಾಣಬಹುದಾಗಿದೆ. ಈ ಹಾದಿಯಲ್ಲೇ ತಿಗಳರು ಕೂಡ ತಮ್ಮ ಜಾತಿಯ ಚೌಕಟ್ಟಿನಲ್ಲಿ ಆಚಾರ–ವಿಚಾರ, ನ್ಯಾಯ ಪದ್ದತಿ ವಿಶಿಷ್ಟ ಸಾಂಸ್ಕೃತಿಕ ವೈಶಿಷ್ಟ್ಯತೆಯನ್ನು ಹೊಂದಿದ್ದು ಮಾನವ ಸಮಾಜದಲ್ಲಿ ತನ್ನದೆಯಾದ ಛಾಪು ಮೂಢಿಸಿದ್ದಾರೆ. ಕರ್ನಾಟಕದಾದ್ಯಂತ ತಿಗಳರು ವಾಸಿಸುತ್ತಿದ್ದರೂ ಕೂಡ ತುಮಕೂರು ಜಿಲ್ಲೆಯಲ್ಲಿ ಅತಿ ಹೆಚ್ಚು ಎಂದರೆ ಸುಮಾರು 25.000 – 30.000 ದಷ್ಟು ಜನ ವಾಸಿಸುತ್ತಿರುವುದನ್ನು ಕಾಣಬಹುದು ತುಮಕೂರನ್ನ ಒಳಗೊಂಡಂತೆ ಜಿಲ್ಲೆಯ ಎಲ್ಲಾ ಹನ್ನೊಂದು ತಾಲ್ಲೂಕುಗಳಲ್ಲಿಯೂ ಈ ಜನಾಂಗದವರು ತಮ್ಮದೇಯಾದಂತಹ ಸಾಂಸ್ಕೃತಿಕ ವೈಶಿಷ್ಟ್ಯತೆಯೊಂದಿಗೆ ವಾಸಿಸುತ್ತಿದ್ದಾರೆ ಪ್ರಸ್ತುತ ಕಿರು ಪ್ರಬಂಧವು ಕರ್ನಾಟಕದ ತಿಗಳರ ವಿವಾಹ ಮತ್ತು ನ್ಯಾಯ ಪದ್ಧತಿ: ಒಂದು ಸಾಂಸ್ಕೃತಿಕ ಅಧ್ಯಯನದ ವ್ಯಾಪ್ತಿಯನ್ನೊಳಗೊಂಡಿದೆ.

ಇಂದು ನಾಶದ ಅಂಚಿನಲ್ಲಿರುವ ಸಂಪ್ರದಾಯಗಳನ್ನ ಮತ್ತು ಸಂಪ್ರದಾಯದ ಹುಟ್ಟಿಗೆ ಕಾರಣವಾದ ಅದರ ಹಿಂದಿನ ಸತ್ಯವನ್ನ ಮತ್ತು ಒಂದು ಜನಾಂಗವು ಹಿಂದಿನಿಂದ ತಲೆ ತಲಾಂತರವಾಗಿ ಸಾಗಿ ಬಂದಂತಹ ಮೌಲ್ಯಯುತವಾದ ಆಚರಣೆಗಳು ಹೇಗೆ ಅಧುನಿಕತೆಯ ಗಾಳಿಯಲ್ಲಿ ತೂರಿ ಹೋಗಿ ಕಣ್ಮರೆಯಾಗುತ್ತಿರುವುದನ್ನ ಅರಿಯಲು "ಕರ್ನಾಟಕದ ತಿಗಳರ ವಿವಾಹ ಮತ್ತು ನ್ಯಾಯ ಪದ್ಧತಿ: ಒಂದು ಸಾಂಸ್ಕೃತಿಕ ಅಧ್ಯಯನ" ಎಂಬ ಕಿರು ಪ್ರಬಂಧದ ಮೂಲಕ ಕರ್ನಾಟಕದ ನಾನಾ ಭಾಗದಲ್ಲಿ ವಾಸಿಸುತ್ತಿರುವಂತಹ ಜಾತಿಗಳಲ್ಲೊಂದಾದ ತಿಗಳರ ಜೀವನ ಕ್ರಮಗಳು ವಿವಾಹ ವ್ಯವಸ್ಥೆ, ನ್ಯಾಯ ವ್ಯವಸ್ಥೆ, ಸಾಮಾಜಿ, ಆರ್ಥಿಕ, ರಾಜಕೀಯ ವ್ಯವಸ್ಥೆ ಮತ್ತು ವ್ಯವಸ್ಥಿತವಾದಂತಹ ಹಾಗೂ ಮಾದರಿಯುತವಾದಂತಹ ಅವರ ಕುಲದ ವ್ಯವಸ್ಥೆ, ಸಾಮಾಜಿಕ ವ್ಯವಸ್ಥೆಯ ವಿವಿಧ ಅಂಗಗಳಾದ ಆಹಾರ ಪದ್ಧತಿ, ಉಡುಗೆ-ತೊಡುಗೆ, ಕುಟುಂಬ ವ್ಯವಸ್ಥೆ, ಅಲ್ಲದೆ ಸಾಂಪ್ರದಾಯಿಕ ಆಚರಣೆಗಳಾದ ವಿವಾಹದ ಆಚರಣೆ ಕುರಿತಾದದಂತಹ ಧಾರ್ಮಿಕ ಮತ್ತು ಸಾಮಾಜಿಕ ನಂಬಿಕೆಗಳು ಮತ್ತು ಕೆಲವು ವೈಶಿಷ್ಟ್ಯತೆಗಳನ್ನು ಸಂಕ್ಷಿಪ್ತವಾಗಿ ಅಧ್ಯಯನಕ್ಕೆ ಒಳಪಡಿಸುವುದೇ ನನ್ನ ಈ ಅಧ್ಯಯನದ ಉದ್ದೇಶವಾಗಿದೆ.

ಅಧ್ಯಾಯ ೦೩

ಅಧ್ಯಯನದ ಉದ್ದೇಶ ಮತ್ತು ವ್ಯಾಪ್ತಿ

ಅಧ್ಯಾಯ - 03

ತಿಗಳರ ಇತಿಹಾಸ ಮತ್ತು ಪರಂಪರೆ

ಕರ್ನಾಟಕದಲ್ಲಿ ವ್ಯವಸಾಯ ಮತ್ತು ತೋಟಗಾರಿಕೆಯ ಸಂಸ್ಕೃತಿಯನ್ನು ಜೀವಂತವಾಗಿ ಉಳಿಸಿಕೊಂಡು ಬಂದ ಪ್ರಮುಖ ಜನವರ್ಗಗಳಲ್ಲಿ ತಿಗಳರು ಪ್ರಮುಖರಾಗಿದ್ದಾರೆ. ಇವರು ಪ್ರಮುಖವಾಗಿ ತೋಟಗಾರಿಕೆಯನ್ನು ಪ್ರಮುಖ ಕಸುಬಾಗಿ ಹೊಂದಿದ್ದಾರೆ. ಇವರು ಕರ್ನಾಟಕದಲ್ಲಿ ಹೆಚ್ಚಾಗಿ ತುಮಕೂರು, ಕೋಲಾರ, ಮಾಲೂರು, ಗುಬ್ಬಿ, ಕಡಬ, ತಿಪಟೂರು, ತುರುವೆಕೆರೆ, ಕುಣಿಗಲ್, ಪವಗಡ, ಮಧುಗಿರಿ, ಕೊರಟಗೆರೆ, ಮಡಕಶಿರ, ಬೆಂಗಳೂರು ಗ್ರಾಮಾಂತರ (ದೊಡ್ಡಬಳ್ಳಾಪುರ, ನೆಲಮಂಗಲ, ಆನೇಕಲ್, ಹೊಸಕೋಟೆ, ದೇವನಹಳ್ಳಿ), ಚಿಕ್ಕಬಳ್ಳಾಪುರ, ಹೆಸರುಘಟ್ಟ, ರಾಮನಗರ, ಚನ್ನಪಟ್ಟಣ, ಮಾಗಡಿ, ಮಂಡ್ಯ, ಮಳವಳ್ಳಿ, ಮದ್ದೂರು, ನಾಗಮಂಗಲ, ಕೆ.ಆರ್ ಪೇಟೆ, ಕೆ.ಆರ್. ನಗರ, ಹಾಸನ, ಬೇಲೂರು, ಚಿಕ್ಕಮಗಳೂರು, ಮೂಢಿಗೆರೆ, ಕಡೂರು, ಶಿವಮೊಗ್ಗ, ಭದ್ರಾವತಿ, ಬೆಂಗಳೂರು ನಗರ, ಬಳ್ಳಾರಿ, ಧಾರವಾಡ, ಬಿಜಾಪುರ, ಬಾಗಲಕೋಟೆ ಮುಂತಾದ ಪ್ರದೇಶಗಳಲ್ಲಿ ಹೆಚ್ಚಾಗಿ ವಾಸಿಸುತ್ತಾರೆ.

“ಇವರ ಮೂಲವನ್ನ ಹುಡುಕುವಾಗ ಕಂಡು ಬಂದಂತೆ ತಿಗಳರು ಕರ್ನಾಟಕದಲ್ಲಿ ಮಾತ್ರವಲ್ಲದೆ ಆಂಧ್ರಪ್ರದೇಶ, ತಮಿಳುನಾಡು, ಒರಿಸ್ಸಾ, ಹರಿಯಾಣ, ಮಹಾರಾಷ್ಟ್ರ ಪಶ್ಚಿಮಬಂಗಾಳ, ಛತ್ತೀಸ್‌ಘಡ, ಜಾರ್ಖಂಡ್, ಪುದುಚೇರಿ, ಮಣಿಪುರ, ಕೇರಳ, ಗುಜರಾತ್, ಬಿಹಾರ್, ಉತ್ತರಪ್ರದೇಶ ಮತ್ತು ರಾಜಸ್ತಾನ”(2) ಹೀಗೆ ಭಾರತದಾದ್ಯಂತ ವಾಸಿಸುತ್ತಿದ್ದಾರೆ. ಇವರು ಕರ್ನಾಟಕದಲ್ಲಿ ಸುಮಾತು 25–30 ಲಕ್ಷದಷ್ಟು ಜನರು ವಾಸಿಸುತ್ತಿದ್ದಾರೆ.

---

2) ಭಾರತದ ತಿಗಳ ಕ್ಷತ್ರಿಯ ವಂಶ ಮತ್ತು ಸಂಸ್ಕೃತಿ – ಪುಟ ಸಂ 73– 74 ಲೇಖಕರು ವಿ. ಹನುಮಂತರಾಯಪ್ಪ, ಎಂ.ಡಿ ಪ್ರಕಾಶ್

'ತಿಗಳ' ಪದದ ನಿರ್ವಚನ:

ತಿಗಳರು ಎಂಬ ಶಬ್ದ ಯಾವುದೇ ಅಲಂಕಾರವಿಲ್ಲದ ಪದ ಇದು ಸುಮಾರು ಎರಡು ಸಾವಿರ ವರ್ಷಗಳ ಇತಿಹಾಸವನ್ನ ಹೊಂದಿದೆ. ಸಂಬಳಕ್ಕಾಗಿ ಸ್ಥಳೀಯ ಪಾಳೆಗಾರರ, ರಾಜರ ಅಧೀನದಲ್ಲಿ ಯುದ್ದ ಮಾಡಲು ನೇಮಕಗೊಂಡು ರಾವುತರಾಗಿ ದೇಶದ ರಕ್ಷಣೆಗಾಗಿ

ಊರಿನಿಂದ ಹೊರಗೆ ನದಿ, ಹೊಳೆ, ಕೆರೆ ಕಟ್ಟೆಗಳಲ್ಲಿ ನೆಲೆಸಿ ಪರರ ಆಕ್ರಮಣ ಕಾಲದಲ್ಲಿ ಯುದ್ಧ ಮಾಡುತ್ತಿದ್ದಂತವರು ಉಳಿದ ಕಾಲದಲ್ಲಿ ವ್ಯವಸಾಯ - ಪಶು ಸಂಗೋಪನೆ, ತೋಟಗಾರಿಕೆಗೆ ಇಳಿದರು. ಈ ರೀತಿ ತೋಟಗಾರಿಕೆಯನ್ನು ಮಾಡುತ್ತಿದ್ದಂತಹ ತೋಟಗಾರರನ್ನು ತಿಗಳ, ತೋಟಗಾರ, ಪಳ್ಳಿಗರು ಎಂಬುದಾಗಿ ಕರೆಯುವುದು ರೂಢಿಯಲ್ಲಿರಬಹುದೆಂಬ ಅಂಶವೊಂದಿದೆ.

ಇವರಲ್ಲಿ ಶೈವ ಸಂಪ್ರದಾಯ, ವೈಷ್ಣವ ಸಂಪ್ರದಾಯ ಮತ್ತು ಬ್ರಹ್ಮಜ್ಞಾನವಾದ ಆತ್ಮ ಸಿದ್ಧಾಂತದ ಬಗ್ಗೆ ಅರಿವು ಮತ್ತು ಇವೆಲ್ಲವುಗಳ ಮಿಶ್ರಿತವಾದ ಸಂಸ್ಕೃತಿ ಇವರದಾಗಿದ್ದರಿಂದ ಇವರನ್ನು ತ್ರಿಗಣರು ಎಂದು ನಂತರ ರೂಢಿಯಲ್ಲಿ ತಿಗಳರು ಎಂಬುದಾಗಿ ಬಂದಿರಬಹುದೆಂದು ಕಾಣಬಹುದು.

ಅಲ್ಲದೆ ಇವರು ಕ್ಷತ್ರಿಯ ಪರಂಪರೆಯವರಾಗಿದ್ದು ಸೂರ್ಯ, ಚಂದ್ರ ಹಾಗೂ ಅಗ್ನಿ ದೇವತೆಗಳನ್ನು ತ್ರಿಕಾಲದಲ್ಲಿ ಆರಾಧಿಸುತ್ತಿದ್ದುದರಿಂದ ಇವರನ್ನು ತಿಗಳರು ಎಂದು ಕರೆದಿರಬಹುದೆಂದು ಭಾವಿಸಲಾಗಿದೆ. "ಜನಾಂಗದ ದೀರ್ಘ ಚರ್ಚೆ ಮತ್ತು ಅಧ್ಯಯನದ ಫಲವಾಗಿ ತಿಗಳರ ಪ್ರಮುಖ ಕುಲಗಳಾದ ವಹ್ನಿಕುಲ, ಅಗ್ನಿಕುಲ, ಶಂಭುಕುಲ ಇವೆಲ್ಲವುಗಳು ಆದಿ ಶಕ್ತಿಯನ್ನು ಪೂಜಿಸುವುದರಿಂದಲೂ ತಮ್ಮ ಮೂಲ ಪುರುಷನು ಯಜ್ಞಕುಂಡದ ಅಗ್ನಿ ಜ್ವಾಲೆಯಲ್ಲಿ ಜನಿಸಿದ ಮಹಾ ಪುರುಷರೆಂದು ನಂಬಿರುವುದರಿಂದ ದ್ರಾವಿಡ ಭಾಷೆಯಲ್ಲಿ 'ತಿ'

ಅಂದರೆ ಅಗ್ನಿ ಎಂಬರ್ಥವಿರುವುದರಿಂದ ತ್ರಿಗಣರು (ಬೆಂಕಿಯ ಪಂಗಡದವರು) ಎಂದು ಕರೆಯುವುದನ್ನ ಕಾಣಬಹುದು." (3)

ಇದು ಮುಂದೆ ತಿಗಳರು ಎಂದು ರೂಢಿಯಲ್ಲಿದೆ ಅಲ್ಲದೆ ತಮಿಳು ಕನ್ನಡ ಸಾರಸ್ವತ ಲೋಕಗಳೆರಡಲ್ಲೂ ಈ ಪದ ಬಳಕೆಯಾಗಿರುವುದು ಕಂಡು ಬರುತ್ತದೆ. ಇದೇ ಪರಂಪರೆಗೆ ಸೇರಿದ 'ತಿಗಳ', ತಿಗಟ', 'ತಿಗಳಾಣ್ಯ', 'ತಿಗುಳಾಣ್ಯ' ಈ ಮುಂತಾದ ಪದಗಳೂ ಕೂಡ ಅಲ್ಲಲ್ಲಿ ದೊರಕುತ್ತದೆ.

ಕರ್ನಾಟಕದಲ್ಲಿನ ತಿಗಳರನ್ನ ಕುರಿತಂತೆ, ಮತ್ತು ಅವರು ಬೆಳೆದು ಬಂದಂತಹ ಹಾದಿಯನ್ನು ಗಮನಿಸಿದಾಗ ಅವರು ಇತ್ತೀಚಿನವರಲ್ಲ ಅವರ ಮೂಲ ರಾಮಾಯಣ, ಮಹಾಭಾರತದ ಕಾಲಕ್ಕೆ ನಮನ್ನು ಕೊಂಡೊಯ್ಯುತ್ತದೆ. ಅವರ ಮೂಲನ್ನು ಅರಿಯುವಾಗ ಅವರಿಗೆ ಸಂಬಂಧಪಟ್ಟಂತಹ ಪೌರಾಣಿಕ ಮತ್ತು ಐತಿಹಾಸಿಕವಾದಂತಹ ಹಿನ್ನೆಲೆಯುಳ್ಳ ಐತಿಹ್ಯಗಳು ಅವರ ಮೂಲವನ್ನು ಸ್ಪಷ್ಟ ಪಡಿಸುತ್ತದೆ.

---

3) ತಿಗಳ ಜನಾಂಗದ ಇತಿಹಾಸ ಮತ್ತು ಕರಗ ಶಕ್ತ್ಯೋತ್ಸವ, ಲೇ.ಕೆ.ಲಕ್ಷ್ಮಣ, ಪು.ಸಂ.13

ಪೌರಾಣಿಕ ಹಿನ್ನಲೆ:

ಐತಿಹ್ಯ: ಒಂದು

ಅಸುರ ಸಂಹಾರಕ್ಕೆ ಕಾಮಾಕ್ಷಿ ಎಂಬ ಶಕ್ತಿಯನ್ನು ಅಗ್ನಿಯಿಂದ ಉದ್ಭವ ಮಾಡಿ ಅಗ್ನಿ ಜ್ವಾಲೆಯಿಂದ ವೀರ ವಹ್ನಿರಾಯಜನಿಸಿದ ಎಂಬುದು ತಿಳಿದು ಬರುತ್ತದೆ. ಈ ವಹ್ನಿವಂಶವನ್ನು ಕುರಿತು ಪುರಾಣಗಳಲ್ಲಿ ಹೇಳಿರುವ ವಹ್ನಿ, ಶಂಭು, ಸುಜಿ, ಪಾಂಡು, ಇವರುಗಳು ಭಾರತೀಯರಾಗಿ ಪ್ರಖ್ಯಾತಿ ಹೊಂದಿದರೆಂದು ವಹ್ನಿ ಎಂಬ ಅರಸನಾಗಿ ಅಗ್ನಿ ದೇವನೇ ಅವತಾರ ಮಾಡಿರುತ್ತಾನೆಂದು ಈ ವಂಶದಲ್ಲಿ ಬಂದವರೇ ಚೇರಾ, ಚೋಳ, ಪಾಂಡ್ಯ, ಪಲ್ಲವ ಮತ್ತು ಚಾಲುಕ್ಯರೆಂದು ಹೇಳಿರುವುದನ್ನು ಕಾಣಬಹುದು.

ಐತಿಹ್ಯ: ಎರಡು

ಅಂಬಿಕೆಯು ಶಿವನಿಗೆ ವಂದಿಸಿ ತಿರುವನಿಕಾಲದಲ್ಲಿ ಶಂಭು ಮಹಾಮುನಿಯನ್ನು ಕಂಡು ಅಸುರರನ್ನು ಸಂಹರಿಸಲು ಪುತ್ರಿಕಾ ಮೇಷ್ಟಿಯಜ್ಞವನ್ನು ಮಾಡಬೇಕೆಂದು ಹೇಳುತ್ತಾಳೆ. ಶಂಭು ಮಹಾಮುನಿಯು ನಡೆಸಿದ ಯಜ್ಞ ಜ್ವಾಲೆಯಿಂದ ಉತ್ತರ ನಕ್ಷತ್ರ ಪೌರ್ಣಮಿ ತಿಥಿ ಸೋಮವಾರದಂದು ಬಂಗಾರದಂತೆ ಪ್ರಾಜ್ವಲ್ಯಮಾನ್ಯ ಪ್ರಕಾಶಯುತವಾದ ಸರ್ವಾಲಂಕಾರ ಭೂಷಿತನು ಆದ ವೀರವಹ್ನಿ ಮಹಾರಾಜನು ಜನ್ಮತಾಳಿದನು. ಎಂತಲೂ ಆತ ಅಸುರರನ್ನು ಸೋಲಿಸಿ ದೇವತೆಗಳನ್ನು ರಕ್ಷಿಸಿದನು. ಆಗ ಈತನನ್ನು ಸಮುದ್ರದೇವಿ, ಇಂದ್ರಾಣಿ, ಗೋಪಾಲದೇವಿ, ಒಟ್ಟಿಗೆ ಸೇರಿ ಆಶೀರ್ವದಿಸಿ ಸಿಂಹಾಸನ ನೀಡಿ ಇಂದ್ರನ ಮಗಳಾದ ಮಂದಾರ ಮಾಲೆಯನ್ನು ಕೊಟ್ಟು ವಿವಾಹ ಮಾಡುತ್ತಾರೆ. ವೀರ ವಹ್ನಿರಾಯನೆ ಈ ಜನಾಂಗದ ಮೂಲ ಪುರುಷ ಎಂಬ ಪುರಾಣ ಕಥನವಿದೆ.

ಬ್ರಹ್ಮದೇವರಿಂದ ಮಾಡಲ್ಪಟ್ಟ ಯಾಗದಲ್ಲಿ ಉತ್ಪರಾದ ಮಹಾವೀರರಾದ ಮೂವರಲ್ಲಿ ಪರಮೇಶ್ವರನು ಅಂಗೀರಸನೆಂಬುವವನನ್ನು ಅಗ್ನಿಗೆ ಮಗನನ್ನಾಗಿ ಮಾಡಿದನು. ಈ

ಅಂಗೀರಸನು ಅಗ್ನಿಗೆ ಪುತ್ರನಾದ್ದರಿಂದ ಈ ಸಂತತಿಯವರೇ ಅಗ್ನಿ ವಂಶ ಕ್ಷತ್ರಿಯ ವಂಶದವರಾದರೆಂದು (ಅಗ್ನಿಯರ್) ಎಂದು ಹೇಳುತ್ತಾರೆ.

ಐಹಿಹ್ಯ – ಮೂರು

ತಿಗಳ ಜನಾಂಗದ ಮೂಲವು ಪೌರಾಣಿಕ ಹಿನ್ನೆಲೆಯಲ್ಲಿ ದ್ವಾಪರಯುಗದವರೆವಿಗೂ ಕೊಂಡೊಯ್ಯುತ್ತದೆ. ಈ ಜನಾಂಗದವರು ದ್ರೌಪದಿ ಮತ್ತು ಪಾಂಡವರ ಆರಾಧಕರು ಇವರು ನ್ಯಾಯ, ಧರ್ಮ, ಸತ್ಯದ ಪ್ರತಿರೂಪವಾದ ಪಾಂಡವರ ಧರ್ಮರಾಯನನ್ನ ಭಕ್ತಿಯಿಂದ ಆರಾಧಿಸುವಂತಹ ಆರಾಧಕರು ದ್ರೌಪದಿಯು ತಿಗುಳ ಜನಾಂಗದ ಆರಾಧನೆಯ ಪ್ರಮುಖ ದೇವತೆ ಅವಳು ಅಗ್ನಿ ಸಂಭೂತೆಯಾಗಿದ್ದಳು.

ಪಾಂಚಾಲ ದೇಶದ ಧೃಪದನಿಗೆ ಸಂತಾನ ಭಾಗ್ಯವಿರಲಿಲ್ಲ. ಯಾಜನೆಂಬ ಮಹರ್ಷಿಯು ಪುತ್ರಕಾಮೇಷ್ಟಿ ಯಾಗವನ್ನು ಮಾಡಲು ಸೂಚಿಸಿದನು. ನಂತರ ಯಾಗವು ಮುನಿಯ ಸಮ್ಮುಖದಲ್ಲಿಯೇ ಸುಸೂತ್ರವಾಗಿ ನೆರವೇರಿತು. ಹೋತೃಗಳು ಅಧ್ವರ್ಯಗಳು ಸೇರಿದಂತಹ ಸಭೆಯಲ್ಲಿ ಯಾಜನು – ಧೃಪದನ ರಾಣಿಗೆ ಹವಿಸ್ಸನ್ನು ಸ್ವೀಕರಿಸಲು ಬಾ ಎಂದು ಕರೆದಾಗ ಆ ಮಾತಿಗೆ ರಾಣಿಯು ನನ್ನ ಮುಖವು ತಾಂಬೂಲದಿಂದಲೂ, ಶರೀರವು ಸುಗಂಧಮುಕ್ತವಾದ ಅಂಗರಾಗಗಳಿಂದ ಲೇಪಿತವಾಗಿದೆ. ಆದ್ದರಿಂದ ಸ್ನಾನ ಮಾಡದೆ ಮಡಿ ಮಾಡದೇ ಪವಿತ್ರವಾದ ಹವಿಸ್ಸನ್ನು ಮುಟ್ಟಲಾರೆ ಎಂದು ಸ್ವಲ್ಪ ಕಾಲಾವಕಾಶವನ್ನು ಕೇಳಿದಳು. ಆದರೆ ಯಾಜನು ಅದಕ್ಕೆ ಒಪ್ಪಲಿಲ್ಲ, ಆದರೂ ಕಾಲಾವಕಾಶಕ್ಕಾಗಿ ಬೇಡಿದಳು.

ಹವಿಸ್ಸು ಸ್ವೀಕರಿಸಲು ರಾಣಿ ಸ್ನಾನ ಮಾಡಿ ಬರಲು ಹೊರಟಳು. ಸಕಾಲದಲ್ಲಿ ಬರಲಿಲ್ಲ ವೇಳೆ ಮುಗಿದ ಕ್ಷಣ ಯಾಜನು ರಾಣಿಗೆಂದು ಸಿದ್ದ ಪಡಿಸಿದ ಹವಿಸ್ಸನ್ನು ಯಜ್ಞೇಶ್ವರನಿಗೆ ಸುರಿದನು. ಕೂಡಲೇ ಪ್ರಕಾಶಮಾನವಾದ ವ್ಯಕ್ತಿಯೋರ್ವನು ಅಗ್ನಿ ಕೊಂಡದಿಂದ ಮೇಲೆದ್ದನು. ನಂತರ ಶರೀರವು ಕಪ್ಪಾದರು ಮನೋಹರವಾದ ಕುಮಾರಿಯೋರ್ವಳು ಜನಿಸಿದಳು. ಹೀಗೆ

ಅಗ್ನಿ ಸಂಭೂತೆಯಾಗಿ ಹುಟ್ಟಿದ ಹೆಣ್ಣು ಮಗಳು ಋಷಿ ಕನ್ಯೆಯಾಗಿ ಧೃಪದ ರಾಜಕುಮಾರನಿಗೆ ಮಗಳಾಗಿ, ದ್ರೌಪದಿಯೆಂದೆನಿಸಿದ್ದಳು. ಮುಂದೆ ಅರ್ಜುನನನ್ನು ವರಿಸಿಕುಂತಿದೇವಿಯ ಮಾತಿನಂತೆ ಪಾಂಡವರ ಮಡದಿಯಾದಳು. ಈ ದ್ರೌಪದಿಯಂತೆಯೇ ತಿಗಳರ ಮೂಲ ಪುರುಷನು ಕೂಡ ಅಗ್ನಿ ಸಂಭೂತನಾಗಿದ್ದುದರಿಂದ ಈಕೆ ತಿಗಳರ ಮನೆ ಮಗಳಾಗಿ ಪೂಜ್ಯ ದೇವತೆಯಾದಳು.

ಅವಳ ಗಂಡಂದಿರಾದ ಪಾಂಡವರಿಗೂ ಸಹ ಇದೇ ಸ್ಥಾನಮಾನವಿತ್ತಾದರೂ ಪಾಂಡವರಲ್ಲಿ ಹಿರಿಯನಾದ ನ್ಯಾಯ, ಧರ್ಮ, ಸತ್ಯಗಳ ಪ್ರತಿರೂಪವೆನಿಸಿದ, ಧರ್ಮರಾಯನನ್ನು ಭಕ್ತಿಯಿಂದ ಆರಾಧಿಸುತ್ತಾರೆ ಪಾಂಡರ ಪಟ್ಟ ಮಹಿಷಿ ಯದ್ಧದಿಂದ ಧರ್ಮರಾಯನನ್ನು ತಿಗಳರ 'ಕುಲಸ್ವಾಮಿ' ಎಂದು ಒಪ್ಪಿಕೊಂಡರು.

ಐಹಿಹ್ಯ: ನಾಲ್ಕು

ಪ್ರಚಲಿತವಾಗಿರುವ ಹದಿನೆಂಟು ಪುರಾಣಗಳಲ್ಲಿ ವಹ್ನಿ ಪುರಾಣವು ಒಂದು ಇದು ಸ್ಕಂದ ಪುರಾಣದ ನಂತರ ಬರುತ್ತದೆ. ಸಂಸ್ಕೃತದಲ್ಲಿ ವಹ್ನಿ ಎಂದರೆ ಅಗ್ನಿ ಎಂಬರ್ಥವಿದೆ. ವಹ್ನಿ ಪುರಾಣವು ಹೇಳುವಂತೆ ಭೂಲೋಕದಲ್ಲಿ ದೇವತೆಗಳಿಗೂ ಮತ್ತು ಅಸುರರಿಗೂ ಯುದ್ಧಗಳು ನಡೆಯುತ್ತಿರುತ್ತದೆ. ವಾತಾಪಿಯೆಂಬ ರಾಕ್ಷಸನು ತನ್ನ ತಪಃ ಶಕ್ತಿಯಿಂದದೇವತೆಗಳಿಂದಲೂ ಯೋನಿಜನ್ಯವಾದ ಯಾವುದೇ ಪ್ರಾಣಿಯಿಂದಲೂ ಸಾವು ಇರದಂತೆ ವರ ಪಡೆದಿರುತ್ತಾನೆ. ಈ ರಾಕ್ಷಸನ ಉಪಟಳವನ್ನು ತಾಳಲಾರದೇ ಋಷಿಗಳು ದೇವತೆಗಳ ಮೊರೆ ಹೋಗುತ್ತಾರೆ. ಆಗ ದೇವತೆಗಳೆಲ್ಲರೂ ಸೇರಿ ಅಗ್ನಿ ದೇವರನ್ನು ಕುರಿತು ಯಜ್ಞ ಮಾಡುವಂತೆ ಶುಂಭು ಮಹರ್ಷಿಯನ್ನು ಕೇಳಿಕೊಳ್ಳುತ್ತಾರೆ. ಹಿಂದೆ ಷಣ್ಮುಖನು ಸುರಪದ್ಮ ಎಂಬ ರಾಕ್ಷಸನೊಡನೆ ಯುದ್ಧ ಮಾಡುತ್ತಿರಬೇಕಾದರೆ. ರಾಕ್ಷಸನು ಷಣ್ಮುಖನನ್ನು ಗುಹೆಯೊಂದರಲ್ಲಿ ಬಂಧಿಸಿಟ್ಟಿರುತ್ತಾನೆ. ಆತ ತನ್ನ ತಾಯಿಯನ್ನು ಕೂಗಿದಾಗ ಆ ಕೂಗು

ನಭೋಮಂಡಲವನ್ನು ಭೇದಿಸಿ ಕೈಲಾಸದಲ್ಲಿದ್ದ ಶಿವ ಪಾರ್ವತಿಯರಿಗೆ ಮುಟ್ಟುತ್ತದೆ. ಆಗ ಶಿವ ಕೋಪಗೊಂಡ ತನ್ನ ಮೂರನೇ ಕಣ್ಣನ್ನು ತೆರೆದಾಗ ಪ್ರಭೇದ್ಯವಾದ ಅಗ್ನಿ ಕಿರಣಗಳು ಹೊರಹೊಮ್ಮಿ ಬಂಡೆಯನ್ನು ಛೇದಿಸುತ್ತವೆ. ಆ ಸಮಯದಲ್ಲಿ ಆ ಕಿರಣದಿಂದ ಅಸುರನನ್ನು ಕೊಲ್ಲಲು ಷಣ್ಮುಖನಿಗೆ ನೆರವಾಗುತ್ತಾರೆ. ಇವರೇ ಮುಂದೆ ವೀರವಹ್ನಿ ಮಹಾರಾಜನ ಹುಟ್ಟಿಗೆ ಕಾರಣವಾದಂತಹ ಯಜ್ಞ ನಡೆಸಿದ ಮಹಾ ಪುರುಷನಾದ ಜಂಬು ಮಹಾಮುನಿ.

ಜಂಬು ಮಹರ್ಷಿಯು ಅಸುರರ ಸಂಹಾರಕ್ಕಾಗಿ ನಡೆಸಿದ ಯಜ್ಞವು ಬ್ರಹ್ಮಾಂಡವನ್ನೆ ವೈಭವೀಕರಿಸಿದಂತೆ ಪ್ರಾಜ್ವಲ್ಯಮಾನವಾಗಿ ಬೆಳಗುವಂತಾಗಿ ಎಲ್ಲೆಲ್ಲೂ ಹೊಂಗಿರಣ ಮಾಡತೊಡಗಿತು. ಇದರ ಮಧ್ಯೆ ಅಗ್ನಿಜ್ವಾಲೆಯಿಂದ ರತ್ನ ಖಚಿತವಾದ ಬಂಗಾರದ ಕೀರಿಟಧಾರಿಯು ಬಲಗೈಯಲ್ಲಿ ಖಡ್ಗ, ಗುರಾಣಿಗಳನ್ನು ಹಿಡಿದವನಾಗಿ, ಬಿಲ್ಲು ಬತ್ತಳಿಕೆಗಳನ್ನು ಧರಿಸಿದವನಾಗಿಯೂ, ಜನಿವಾರವವನ್ನು ತೊಟ್ಟವನಾಗಿಯೂ, ಸೊಂಟದಲ್ಲಿ ಸಿಂಹಮುಖದ ಕಠಾರಿಯನ್ನು ತೊಟ್ಟವನಾಗಿಯೂ ಹಣೆಯಲ್ಲಿ ತ್ರಿಪುಂಡರವನ್ನು ಧರಿಸಿದವನಾಗಿಯೂ, ಕೊರಳಲ್ಲಿ ವಜ್ರಾಭರಣವನ್ನು ತೊಟ್ಟವನಾಗಿಯೂ, ಪೀತಾಂಬರದ ಕಜ್ಜೆಯನ್ನು, ಸೊಂಟಕ್ಕೆ ಕೆಂಪು ಬಟ್ಟೆಯ ಪಟ್ಟಿಯನ್ನು ಕಟ್ಟಿದವನಾಗಿಯೂ, ಕೈಗೆ ದುಂಡು ಕಡಗಗಳನ್ನು, ಪದ್ಮದೋಪಾದಿಯಲ್ಲಿ ಇದ್ದ ಕಾಲುಗಳಿಗೆ ವೀರಾಗಂಟಾಮಣಿಯನ್ನು ಕಿವಿಯಲ್ಲಿ ಮಕರ ಮಂಡಲಗಳನ್ನು ಧರಿಸಿ, ಸೂರ್ಯವರ್ಣದ ಪ್ರತಿಭೆಯುಳ್ಳವನಾದ ವೀರವಹ್ನಿ ಮಹಾರಾಜನು, ಕಾರ್ಮೋಡಗಳ ಮಧ್ಯೆ ಹೊರಹೊಮ್ಮುವ ಸೂರ್ಯನಂತೆ ಬಂದನೆಂದು ವಹ್ನಿ ಪುರಾದಲ್ಲಿ ತಿಳಿಸಿರುತ್ತಾರೆ.

ಈ ಮೇಲಿನ ಪೌರಾಣಿಕ ಹಿನ್ನಲೆಯನ್ನು ಗಮನಿಸಿದಾಗ ಅಸುರರ ಸಂಹಾರಕ್ಕಾಗಿ ಜಗತ್ತಿನಲ್ಲಿ ಶಾಂತಿಯನ್ನು ಕಾಪಾಡಲು ವೀರಕ್ಷತ್ರಿಯನೊಬ್ಬನು ಅಗ್ನಿ ಜ್ವಾಲೆಯಿಂದ ಜನ್ಮ ತಳೆದಿರುವುದು ಸಿದ್ಧ ಪಡಿಸುತ್ತದೆ. ಈತನೇ ತಮ್ಮ ಮೂಲ ಪುರಷನೆಂದು ಈ ಜನಾಂಗವು

ಧೃಡವಾಗಿ ನಂಬಿದೆ. ವಹ್ನಿ ಕುಲದವರು ವಹ್ನಿ ರಾಯನೆಂದೂ, ಅಗ್ನಿ ಕುಲದವರು ಅಗ್ನಿ ಬನ್ನಿರಾಯನೆಂದು ಎರಡು ಪದಗಳೂ ಕೂಡ ಅಗ್ನಿಯನ್ನೇ ಸಂಭೋದಿಸುತ್ತವೆ.

ಒಟ್ಟಿನಲ್ಲಿ ಎಲ್ಲಾ ಪುರಾಣ ಕಥನಗಳಲ್ಲಿ ಈ ಜನಾಂಗದ ಮುಖ ಪುರುಷನು ಲೋಕ ಕಂಟಕವನ್ನು ಸಂಹಾರ ಮಾಡಿ ನಾಡಿಗೆ ಶಾಂತಿ ತರಲು ಅಗ್ನಿಯಿಂದ ಅವತರಿಸಿದ ವೀರ ಮಹಾ ಪುರುಷನು ಎಂಬುದು ನಿಸ್ಸಂದೇಹವಾಗಿದೆ.

ತಿಗಳರ ಮೂಲವನ್ನು ತಿಳಿಯಲು ಪೌರಾಣಿಕ ಹಿನ್ನಲೆಯುಳ್ಳ ಐತಿಹ್ಯಗಳ ಜೊತೆಗೆ ಅನೇಕ ಐತಿಹಾಸಿಕ ಹಿನ್ನೆಲೆಗಳನ್ನು ಕೂಡ ಕಾಣಬಹುದು. ಇದು ಅವರು ವಾಸಿಸಿದ್ದ ಕಾಲಮಾನ ಮತ್ತು ಅವರ ಪ್ರಾಚೀನತೆಯನ್ನು ಮತ್ತು ಅವರ ಮೂಲ ಪುರುಷರ ಬಗ್ಗೆ ಮಾಹಿತಿಯನ್ನ ಒದಗಿಸುತ್ತದೆ.

ಐತಿಹಾಸಿಕ ಹಿನ್ನಲೆ:

ಐತಿಹ್ಯ: ಒಂದು

ಈ ಜನಾಂಗದ ಮೂಲ ಇತಿಹಾಸವನ್ನು ನೋಡುವುದಾದರೆ ಇವರು ಮೂಲತಃ ಭಾರತೀಯ ದ್ರಾವಿಡರು ಎಂಬುದು ತಿಳಿದು ಬರುತ್ತದೆ. ಉತ್ತರ ಭಾರತದಲ್ಲಿ ಇವರ ಇತಿಹಾಸವನ್ನ ಅಧ್ಯಯನ ಮಾಡಿರುವುದಿವಾದರೂ ದಕ್ಷಿಣ ಭಾರತಕ್ಕೆ ಸಂಬಂಧ ಪಟ್ಟಂತೆ ಚೇರ, ಚೋಳ, ಪಾಂಡ್ಯ, ಪಲ್ಲವ ಮತ್ತು ಚಾಲುಕ್ಯರು ಈ ಜನಾಂಗದ ಹೆಸರಾಂತ ರಾಜವಂಶಗಳು ಎಂದು ತಿಳಿದು ಬಂದಿದೆ. ಕರ್ನಲ್‌ಡಾಟ್‌ರವರ ರಾಜ ಪುತ್ರ ಚರಿತ್ರೆಯಲ್ಲಿ ಹೇಳಿರುವಂತೆ ವೇದ ವಿರೋಧಿಗಳಾದ ರಾಕ್ಷಸರನ್ನು ನಾಶಪಡಿಸಲು ಋಷಿಗಳು ಅಬು ಪರ್ವತ ಕ್ಷೇತ್ರ ಶಿಖರದಲ್ಲಿ ಯಜ್ಞ ಕುಂಡಗಳನ್ನೇರ್ಪಡಿಸಿ ದರ್ಭೆಯಲ್ಲಿ ತ್ರಿಮೂರ್ತಿಗಳ ಆಕಾರವನ್ನು ಮಾಡಿ, ಅಗ್ನಿಕುಂಡದಲ್ಲಿಟ್ಟು ಸಂಜೀವಿನಿ ಮಂತ್ರವನ್ನು ಪಠಿಸಿದ್ದರಿಂದ ಬ್ರಹ್ಮದೇವಕಿ ಅಂಶದಿಂದ ಉದ್ಭವಿಸಿದ ಚೋಳಾ ಅಥವಾ ಚಾಲುಕ್ಯ ಲೋಕಕಲ್ಯಾಣ ಗೈದನೆಂದು ಇವರ

ವಂಶಸ್ಥರು ದಕ್ಷಿಣ ಭಾರತದಲ್ಲಿ ರಾಜ್ಯಭಾರ ಮಾಡಿರುವುದಾಗಿಯೂ ಇವರನ್ನು ವಹ್ನಿ ವಂಶಸ್ಥರೆಂಬುದಾಗಿಯೂ ತಿಳಿಸಿದ್ದಾರೆ.

ಐತಿಹ್ಯ: ಎರಡು

ತಿಗಳರ ಇತಿಹಾಸವು ನಮಗೆ ಕನ್ನಡದ ಖ್ಯಾತ ವೈಯ್ಯಾಕರಣಿಯಾದ 'ಕೇಶಿರಾಜನ' ಶಬ್ದಮಣಿ ದರ್ಪಣದ 178 ನೆಯ ಸೂತ್ರದಲ್ಲಿ ತಿಗಲ ಪದವನ್ನು ಕಾಣಬಹುದು. ಅವನೇ ಹೇಳುವಂತೆ "ಕಾವೇರಿಯ ಕಾಲನಾ ತಿಗುಳನೆಂ ಕಡಗೊಂಡನೋ ಬಡ್ಡಿಗೊಂಡನೋ"(4) ಎಂದು ತಿಗಳ ಪದವನ್ನು ಉದಾಹರಣೆಯಾಗಿ ಬಳಸಿದ್ದಾನೆ. ಹಾಗೆಯೇ ಕುಮಾರ ವ್ಯಾಸನ ಕರ್ಣಾಟ ಭಾರಣ ಕಥಾ ಮಂಜರಿಯಲ್ಲಿ –

"ಆಳವನರಿಯನೆ ಕೊಕಿತಹ ಮುಂ
ಕೊಳನೆ ಕದನವ ಕೊಂಡ ಕೈಯುವ
ರಳವಿಗೊಟ್ಟರೆ ನೋಡಿ ಸಿಡಿಮಿಡಿಗೊಂಡು ಕೆಲ ಸಿಡಿವ
ಗೆಲಿದರುತ್ಸಾಹಿಸುವ ಸಿಲುಕಿದ
ರಳುವ ಕೆಟ್ಟೋಡಿದರೆ ಪುರದಲಿ
ನಿಲುವ ನಿರುಪಮ ವೀರರೊದಗಿತು ತಿಗುಳರಾವುತರು" ಎಂದಿದೆ.(5)

ಅಂದರೆ ಅಷ್ಟು ಹಿಂದೆಯೇ ಪ್ರಚಾರದಲ್ಲಿದ್ದರೆಂದು ಮತ್ತು "ಸಾಂಗತ್ಯ ಕವಿಯಾದ ರತ್ನಕರವರ್ಣಿಯ ಭರತೇಶ ವೈಭವದಲ್ಲಿ ಕಥಾನಾಯಕನಿಗೆ ತಿಗುಳರ ಅರಸರು ನಮಸ್ಕರಿಸಿದ ಪರಿಯ ವರ್ಣನೆಯನ್ನು ವರ್ಣಿಸಿದ್ದಾರೆ.

---

4) ಕನ್ನಡ ನಿಘಂಟು, ಕನ್ನಡ ಸಾಹಿತ್ಯ ಪರಿಷತ್ತು, ಪು. ಸಂ. 3471

5) ಕುವೆಂಪು ಮತ್ತು ಮಾಸ್ತಿ ವೆಂಕಟೇಶ್ ಅಯ್ಯಂಗಾರ್ (ಸಂ) ಕರ್ನಾಟಕ ಭಾರತ ಕಥಾಮಂಜರಿ, ಭೀಷ್ಮ ಪರ್ವ, ಪು. ಸಂ. 465

"ನಗೆ ಮೊಗದರಸಗೆ ಕೈ ಮುಗಿದೊಲೆದನು ತಿಗಳರರಸನೊಂದು ಕಡೆಗೆ" (6)

ಐಹಿತ್ಯ: ಮೂರು

ತಿಗಳರು ಯಾರು ಕರ್ನಾಟಕ ಮೂಲದವರೇ? ಅಥವಾ ವಲಸಿಗರೇ? ತಿಗಳರ ಚಾರಿತ್ರಿಕ ವಿವರಗಳನ್ನು ಪರಿಶೀಲಿಸಲಾಗಿದೆ. "ತಿಗಳ ಜನಾಂಗದ ಪೌರಾಣಿಕ ಮತ್ತು ಚಾರಿತ್ರಿಕ ಹಿನ್ನಲೆ" ಎಂಬ ಹೊತ್ತಿಗೆಯಲ್ಲಿ ಸಿಕ್ಕ ಮಾಹಿತಿ. ಕ್ರಿ. ಶ. 1007ರ ಶಾಸನವೊಂದರಲ್ಲಿ "ತಿಗುಳ ಮಾರಿ ಶ್ರೀಮತ್ ಸತ್ಯಾಶ್ರಯ ದೇವಂ" ಕನ್ನಡ ನಾಡಿನ ದೊರೆ ಸತ್ಯಾಶ್ರಯನಿಗೆ ತಿಗುಳ ಮಾರಿ ಎಂಬ ಬಿರುದಿತ್ತು. ಕ್ರಿ.ಶ. 1134ರಲ್ಲಿ ತುಮಕೂರು ಜಿಲ್ಲೆಯಲ್ಲಿ ದೊರೆತ ಗುಬ್ಬಿ ಶಾಸನವೊಂದರಲ್ಲಿ "ತಳಕಾಡಂ ಕೊಂಡಂ ಗಂಡಂ ತಿಗುಳರ ಪಡೆಯಕೊಡೆ ಬೆಂಕೊಂಡ ಗಂಡಂ" ಎಂದಿದೆ. ಬೇಲೂರಿನಲ್ಲಿ ದೊರೆತ ಶಾಸನವೊಂದರಲ್ಲಿ "ಕನ್ನಡಿಗಳಿಗೆ 10 ತಿಗುಳರು ತುರ್ತು ವರ್ಗ 65" ಉಲ್ಲೇಖಿಸಲಾಗಿದೆ. ಈ ಶಾಸನದ ಕಾಲ ಕ್ರಿ.ಶ. 1278 ಎಂದಿದೆ. ಕ್ರಿ.ಶ> 1446ರ ಶಾಸನವೊಂದರಲ್ಲಿ ಬಟುಕಳದೊಳಗೆ ಮಂಡಳಿಯ ಗ್ರಾಮದ ತಿಗಳನಾಗಮನೆಯ ವಾಮನ ಉಪಾಧ್ಯಾಯರ ಮಗ "ಎಂದಿದೆ" (7). ಕರ್ನಾಟಕದಲ್ಲಿ ಹೆಚ್ಚು ಕಾಲ ಆಳ್ವಿಕೆಯನ್ನು ಮಾಡಿದಂತಹ ಗಂಗರ ಇತಿಹಾಸವನ್ನು ತಿಳಿಯಬೇಕು. ಏಕೆಂದರೆ ಹಲವರು ಹೇಳುವಂತೆ ಗಂಗರ ಆಡಳಿತದ ವ್ಯವಸ್ಥೆಗೂ ದೊರೆಗಳ ಧಾರ್ಮಿಕವಾಗಿಯು, ಆಡಳಿತ ಪದ್ದತಿಯಲ್ಲಿಯು, ತಿಗಳರ ಜೀವನ ಕ್ರಮಕ್ಕೂ ತುಂಬಾ ಹತ್ತಿರವಾದಂತಹ ಹೋಲಿಕೆಯನ್ನು ಕಾಣಬಹುದಾಗಿದೆ. ಅಲ್ಲದೆ ಗಂಗರ ರಾಜಕೀಯ ವ್ಯವಸ್ಥೆಗೂ ಮತ್ತು ತಿಗಳ ನ್ಯಾಯವ್ಯವಸ್ಥೆಗೂ ಅವಿನಾಭಾವ

---

6) ಕರ್ನಾಟಕದ ತಿಗಳರು: ಲೇ. ಕವಿತಾ ಕೃಷ್ಣ, ಪು.ಸಂ. 4 (ರತ್ನಾಕರವರ್ಣಿಯ ಭರತೇಶ ವೈಭವದಿಂದ ಸಂಗ್ರಹಸಿದ್ದು)

7) ಕನ್ನಡ ನಿಘಂಟು: ಕನ್ನಡ ಸಾಹಿತ್ಯ ಪರಿಷತ್ತು, ಪು. ಸಂ 3471

ಸಂಬಂಧವನ್ನು ಕಾಣಬಹುದಾಗಿದೆ. ಅಲ್ಲದೆ ಗಂಗರ ನೆಲೆಗಳಿದ ಮಣ್ಣೆ (ಈಗಿನ ನೆಲಮಂಗಲ), ಕೋಲಾರ, ಬೆಂಗಳೂರು ಮತ್ತು ತಲಕಾಡು ಮುಂತಾದ ಪ್ರದೇಶಗಳಲ್ಲಿ ಇತ್ತೀಚಿನವರೆಗೂ ಪಾಳೇಗಾರರು ಮತ್ತು ಊರ ಮುಖ್ಯಸ್ಥರು. ತಿಗಳಜನಾಂಗದವರೇ ಆಗಿರುತ್ತಾರೆ. ಆದ್ದರಿಂದ ಇವರ ಇತಿಹಾಸ ಗಂಗರ ಕಾಲವನ್ನು ಸೂಚಿಸುತ್ತದೆ.

ಐತಿಹ್ಯ: ನಾಲ್ಕು

ತಿಗಳರ ಇತಿಹಾಸವು ತಮಿಳು ನಾಡಿಗೆ ಅಥವಾ ತಮಿಳು ನಾಡಿನಿಂದ ಕರ್ನಾಟಕಕ್ಕೆ ಬಂದವರು ಎಂದು ಹೇಳುತ್ತಾರೆ. ಆದರೆ ನಿರ್ದಿಷ್ಟವಾಗಿ ಹೇಳಲು ಆಗುವುದಿಲ್ಲ. ಕಾರಣ ಅಂತಹ ಆಧಾರಗಳಾವು ಉಪಲಬ್ದವಾಗಿಲ್ಲ. ಆದರೂ ಕನ್ನಡ ನಾಡಿನ ಮತ್ತು ತಮಿಳು ನಾಡಿನ ನಡುವೆ ರಾಜಕೀಯ ಹೋರಾಟಗಳು ನಡೆದಿರುವುದರಿಂದ ಸೋಲು ಗೆಲುವುಗಳಿಂದ ವಲಸೆ ನಡೆದಿರುವುದು ಸಹಜವೇ ಆಗಿದೆ. ತಮಿಳು ನಾಡು ಹಲವು ಬಾರಿ ಕನ್ನಡಿಗರ

ಆಳ್ವಿಕೆಗೆ ಒಳಪಟ್ಟಂತೆ, ಕನ್ನಡ ನಾಡು ಸಹ ತಮಿಳರು ಆಳ್ವಿಕೆಗೆ ಒಳಪಟ್ಟಿತ್ತು. ಇದರಿಂದ ಕನ್ನಡಿಗರು ಹೋಗಿ ತಮಿಳು ನಾಡಿನಲ್ಲಿ ನಲೆಸಿದಂತೆ ತಮಿಳರು ಬಂದು ಕನ್ನಡ ನಾಡಿನಲ್ಲಿ ನಲೆಸಿದ್ದರು. ಹೀಗೆ ಬಂದವರಲ್ಲಿ ತಿಗಳ ಜನಾಂಗದವರು ಕೂಟ ಓರ್ವರಿರಬಹುದು ಕನ್ನಡ ತಿಗುಳ ಸಂಸ್ಕೃತಿ ನಾಗರೀಕತೆಗಳನ್ನು ನೋಡಿದಾಗ ಈ ಮಾತು ಸತ್ಯವೆನಿಸುತ್ತದೆ.

ಕರ್ನಾಟಕದಲ್ಲಿರುವ ತಿಗುಳರು ವೆಲ್ಲಾಳದ ಗುಂಪಿಗೆ ಸೇರುವ ಸಾಧ್ಯತೆಗಳೇ ಹೆಚ್ಚು ವೇಲ್ಲಾಳರಲ್ಲಿ ಪದಯಾದಿ (ಕಾಲಾಳು)ಗಳು ಆಗಿದ್ದರು. ಇವರೆಲ್ಲರು ಖಡ್ಗಗಳನ್ನು ಹಿಡಿದು

ದೇಶವನ್ನು ರಕ್ಷಿಸುವ ಹೊಣೆಗಾರಿಕೆಯನ್ನು ಹೋತ್ತಿದ್ದರು ಇವರೆಲ್ಲರು ಅಗ್ನಿಕುಲದವರೆ ಆಗಿದ್ದಾರೆ ಅಗ್ನಿವಂಶದಲ್ಲಿ ಹುಟ್ಟಿ ದೇಶವನ್ನು ರಕ್ಷಿಸುವ ಕ್ಷತ್ರಿಯರಾದುದರಿಂದ ಇವರಿಗೆ ಅಗ್ನಿವಂಶ ಕ್ಷತ್ರಿಯರೆಂಬ ಹೆಸರು ಬಂದಿರಬೇಕು. 'ಅಗ್ನಿ' ಎಂಬ ಪದಕ್ಕೆ 'ವಹ್ನಿ' ಮತ್ತೊಂದು ಸಂಸ್ಕೃತ ಪದವು ಪರ್ಯಾಯವಕಾಗಿರುವುದರಿಂದ ಇವರಿಗೆ ವಹ್ನಿ ಪದವು ಅಗ್ನಿ ಕುಲ

ಕ್ಷತ್ರಿಯರೆಂಬ ಹೆಸರು ಬಂದಿದೆಯಷ್ಟೆ ಮಹಾ ಬಲಿಪುರದಲ್ಲಿ ಕಲ್ಲುಬಂಡೆ ಕಲೆಯಾಗಿ ಅರಳಿರುವ ದ್ರಾವಿಡ ಶೈಲಿಯ ಕೆತ್ತನೆ ನಮ್ಮನ್ನು ಕೌತುಕದ ಕಡಲಲ್ಲಿ ಮುಳುಗಿಸುತ್ತದೆ. ಅಲ್ಲಿನ ದ್ರೌಪದಿ ದೇವಿಯ ರಥ. ಮೂರು ಅಂತಸ್ತು ಉಳ್ಳರಾಜಧರ್ಮರಾಜನ ರಥಗಾಡಿ ಕಮಾನಿನ ಆಕಾರದ ಭೀಮರಥ, ಗಜ ಪುಷ್ಪಾಕಾರದ ನಕುಲ ಸಹದೇವರ ರಥ ನಮ್ಮನ್ನು ಬಹುವಾಗಿ ಆಕರ್ಷಿಸಿದವು. ಅಲ್ಲಿ ಏಕತಲ ವಿಮಾನ ಉಳ್ಳ ವಿಷ್ಣು ಗೃಹ ಇರುವುದು ಒಂದು ವೈಶಿಷ್ಟ್ಯವಾಗಿದೆ. ಕೃಷ್ಣೆಯಾದ ದ್ರೌಪದಿಯ ಅಣ್ಣ ನೆನೆಸಿದ ಕೃಷ್ಣನಿಗೆ ಸ್ಥಾನ ಇರಬಾರದೆ? ಕೃಷ್ಣ ದ್ರೌಪದಿಯ ಮಾನ ರಕ್ಷಕ ಅಷ್ಟೇ ಅಲ್ಲ ಪಾಂಡವರಪ್ರಾಣ ಹೀಗಾಗಿ ಮಹಾಬಲಿಪುರ ಪಾಂಡವರ ಮತ್ತು ಕೃಷ್ಣ, ಕೃಷ್ಣೆಯರ ತವರೂರಾಗಿದೆ. ಪಲ್ಲವ ದೊರೆಗಳು ಪಾಂಡವರ ಆರಾಧಕರಾದುದ್ದರಿಂದ ಇವರು ಸಹ ಕರ್ನಾಟಕದಲ್ಲಿರುವ ತಿಗಳ ಜನಾಂಗದವರ ಮನೆತನದವರೆಂದು ಹೇಳಬಹುದು.

ಮೈಸೂರು ವಿಶ್ವ ವಿದ್ಯಾನಿಲಯವು ಪ್ರಕಟಿಸಿರುವ ವಿಶ್ವ ಕೋಶದಲ್ಲಿ ತಿಗಳರ ಆಗಮನದ ಬಗ್ಗೆ ಬೆಳಕನ್ನು ಚೆಲ್ಲಿದೆ. ಕ್ರಿ.ಶ 18 ನೇ ಶತಮಾನದ ಮಧ್ಯ ಭಾಗದಲ್ಲಿ ಹೈದರಾಲಿಯು ಮೈಸೂರಿನ ನವಾಬನಾಗಿದ್ದನು. ಆತ ತಿರುಚನಾಪಳ್ಳಿ ಮತ್ತು ಆರ್ಕಾಟ್ ಪ್ರಾಂತ್ಯಗಳನ್ನು ಗೆದ್ದು ತನ್ನದಾಗಿಸಿಕೊಂಡಿದ್ದನು. ಹೀಗೆ ಹೋರಾಟಕ್ಕೆ ಹೋದ ಹೈದರಾಲಿಯು ವಿಜಯಶಾಲಿಯಾಗಿ ಹಿಂದಿರುಗುವಾಗ ಸುಂದರವಾಗಿ ತೋಟಗಾರಿಕೆ ಮಾಡುತ್ತಿದ್ದ ತಿಗುಳಜನಾಂಗದ ಕುಟಂಬಗಳನ್ನು ಕರೆತಂದನು. ಅವರಿಂದ ಬೆಂಗಳೂರು ಕೆಂಪುತೋಟ, ಶ್ರೀರಂಗಪಟ್ಟಣದ ದರಿಯಾದೌಲತ್ ಉದ್ಯಾನಗಳನ್ನು ಬೆಳೆಸಿದನು. ಈ ಪ್ರಕಾರವಾಗಿ ತಿಗಳರು ಕರ್ನಾಟಕಕ್ಕೆ ಬಂದು ಸುಮಾರು 250 ವರ್ಷಗಳೇ ಆಗಿರಬೇಕು. ಎಂದು ಅಲ್ಲದೆ ತಿಳಗರು ಅಚ್ಚಗನ್ನಡಿಗರಾಗಿ ಇಲ್ಲಿನ ಸಂಸ್ಕೃತಿ ನಾಗರೀಕತೆಗಳಿಗೆ ಹೊಂದಿಕೊಂಡಿರುವುದು ನೋಡಿದರೆ ತಿಗುಳರು ಇಲ್ಲಿಗೆ ಎಂಟ್ಹತ್ತು ಶತಮಾನಗಳಿಗೂ ಹಿಂದೆಯೇ ಬಂದಿರಬೇಕು ಎಂದು ಹೇಳಬಹುದು.

ಅಲ್ಲದೆ ವಿಜಯನಗರದ ದಸರಾ ಉತ್ಸವಗಳಲ್ಲಿ 'ಕರಗ'ದ ಶಕ್ತಿ ಉತ್ಸವ ವೀರಕುಮಾರರ ಸೇವೆ ಮುಂತಾದವುಗಳ ಉಲ್ಲೇಖವಿದೆ.

ಕರಗ ಉತ್ಸವವು ತಿಗಳರ ಪ್ರಸಿದ್ಧವಾದ ಒಂದು ಹಬ್ಬದ ಉತ್ಸವವಾಗಿರುವುದರಿಂದ ಈ ಉತ್ಸವಗಳು ವಿಜಯನಗರದ ರಾಜರ ಕಾಲದಲ್ಲಿ ಆಚರಣೆಯಲ್ಲಿದ್ದವು ಎಂದಾಗ ಈ ಜನಾಂಗದ ಇತಿಹಾಸ ಇದಕ್ಕೂ ಹಿಂದಿನದು ಎಂದು ನಂಬಬಹುದಾಗಿದೆ.

ತಿಗಳರ ಇತಿಹಾಸವನ್ನ ತಿಳಿಯಲು ಕೇವಲ ಕರ್ನಾಟಕದಲ್ಲಿನ ತಿಗಳರಿಂದ ಅರಿಯಲು ಸಾಧ್ಯವಿಲ್ಲ ತಿಗಳರು ಇಡೀ ಭಾರತದಾದ್ಯತಂತ ಎಲ್ಲಾ ರಾಜ್ಯಗಳಲ್ಲಿಯೂ ವಾಸಿಸುತ್ತಿದ್ದಾರೆ. ಅಂದರೆ ಪ್ರತಿಯೊಂದು ರಾಜ್ಯಗಳಲ್ಲಿಯೂ ಕೂಡ ಪ್ರತ್ಯೇಕವಾದಂತಹ ಹೆಸರುಗಳಿಂದ ಅವರನ್ನ ಗುರ್ತಿಸುವುದನ್ನ ಕಾಣಬಹುದಾಗಿದೆ.

"ತಮಿಳುನಾಡಿನಲ್ಲಿ ಮಹ್ನಿಯಾರ್, ವಹ್ನಿ, ಪಳ್ಳಿ, ಗೌಂಡರ್, ಪಡೆಯಾಚಿ, ನಾಯಕರ್, ಕುರುವನ್, ಪುಲಿಕುತ್ತಿವನ್, ವಡನಾಯಕತ್, ಮುಂತಾದ ಉಪಜಾತಿಗಳು ಕಂಡುಬರುತ್ತವೆ. ಕೇರಳದಲ್ಲಿ ತೀಯ ಎಂಬುದಾಗಿ ಕಂಡು ಬರುತ್ತಾರೆ

ಧರ್ಮರಾಜಕಾಪು, ತೋಟರೆಡ್ಡಿ, ವಹ್ನಿರೆಡ್ಡಿ ಎಂದು ಆಂಧ್ರಪ್ರದೇಶದಲ್ಲಿ ಕಂಡು ಬರುತ್ತದೆ.

ದೀಪಕುಲಕ್ಷತ್ರಿಯ ಎಂದು ಗುಜರಾತ್‌ನಲ್ಲಿ ಕಂಡಂತೆ, ಇಂದ್ರಕುಲ ಎಂದು ಬಿಹಾರ್ ರಾಜ್ಯದಲ್ಲಿ ಕಂಡು ಬರುತ್ತದೆ.

ಉತ್ತರ ಪ್ರದೇಶ ಮತ್ತು ರಾಜಸ್ಥಾನದಲ್ಲಿ ಸೂರ್ಯ ಕುಲ ಕ್ಷತ್ರಿಯ ಎಂದು ಕಂಡು ಬರುತ್ತದೆ. ಕರ್ನಾಟಕದಲ್ಲಿ ಅಗ್ನಿಕುಲಕ್ಷತ್ರಿಯ ಮತ್ತು ವಹ್ನಿಕುಲಕ್ಷತ್ರಿಯ ಹಾಗೂ

ಶಂಭುಕುಲಕ್ಷತ್ರಿಯ, ತಿಗಳ ಎಂಬುದಾಗಿ ಕಂಡು ಬರುತ್ತಾರೆ. ಇವರುಗಳನ್ನ ಅವರು ಆಡುವ ಭಾಷೆಯ ಆಧಾರದ ಮೇಲೆ

ಕನ್ನಡ ತಿಗಳರು	ತಮಿಳು ತಿಗಳರು	ತೆಲುಗು ತಿಗಳರು
ಹುರಳಿ ತಿಗಳರು	ಗೌಂಡರ್	ಅರವು ರೆಡ್ಡಿ
ಎಲೆತಿಗಳರು	ಪಡಿಯಚ್ಚಿ	ಅಗ್ನಿ ಕಾಪು ರೆಡ್ಡಿ
ತೋಟದ ಗೌಡ್ರು	ನಾಯ್ಕರ್	ಪಳ್ಳಿ ಕಾಪು ರೆಡ್ಡಿ
ಪಂಡವ ಒಕ್ಕಲಿಗರು	ಕಂದರ್	ವನ್ನೆ ರೆಡ್ಡಿ
ತಿಗಳ ಗೌಡ್ರು	ರಾಜುಲು	ಅಗ್ನಿ ಕುಲ ಕ್ಷತ್ರಿಯರು

ಎಂದು ವಿಂಗಡಿಸಬಹುದು. ಆದರೂ ಅವರೆಲ್ಲರೂ ಕೂಡ ತಿಗಳರುಗಳೇ ಆಗಿರುತ್ತಾರೆಂದು ತಿಳಿಯಬಹುದಾಗಿದೆ.'' (8)

ಕರ್ನಾಟಕದಲ್ಲಿ ಕಂಡುಬರುವಂತಹ ಮುಖ್ಯವಾದಂತಹ ಉಪವಿಭಾಗಗಳಾದ ವಹ್ನಿಕುಲ, ಅಗ್ನಿಕುಲ, ಶಂಭುಕುಲವೆಂದು ವಿಭಾಗಿಸಿದರೂ ಕೂಡ ಮೂಲತಃ ಇವೆಲ್ಲ ಒಂದೇ ರೀತಿಯಾಗಿರುತ್ತದೆ. ಅಂದರೆ ವಹ್ನಿ–ಅಗ್ನಿ, ಶಂಭು ಮೂರು ಪದಗಳ ಅರ್ಥವೂ ಬೆಂಕಿಯೇ ಆಗಿರುವುದರಿಂದ ತಮ್ಮ ಮೂಲ ಪುರುಷ ಬೆಂಕಿಯಿಂದ ಜನಿಸಿದವನೆಂದು ಮತ್ತು ಅಗ್ನಿ ಬನ್ನಿರಾಯನೇ ತಮ್ಮ ಮೂಲ ಪುರುಷನೆಂದು ನಂಬಿರುವುದನ್ನು ಕಾಣಬಹುದಾಗಿದೆ.

---

8) ತಿಗಳ ಜನಾಂಗದ ಇತಿಹಾಸ ಮತ್ತು ಕರಗ ಶಕ್ತ್ಯೋತ್ಸವ, ಲೇ. ಕೆ.ಲಕ್ಷ್ಮಣ್,ಪು.ಸಂ. 15

ತಿಗಳರ ಮೂಲವನ್ನು ತಿಳಿಯಲು ನಾವು ಇಂತಿಷ್ಟೇ ಎಂದು ನಿರ್ಧಿಷ್ಟವಾಗಿ ತಿಳಿಸಲು ಸಾಧ್ಯವಿಲ್ಲ. ಕಾರಣ ಇಂದು ಸಹ ಇನ್ನೂ ಅನೇಕ ಸಂಶೋಧನೆಗಳು ಇವುಗಳ ಬಗ್ಗೆ ನಡೆಯುತ್ತಿವೆ. ಮತ್ತು ಇವರು ಭಾರತದಾದ್ಯಂತ ಎಲ್ಲಾ ರಾಜ್ಯಗಳಲ್ಲಿಯೂ ಇರುವುದರಿಂದ ಪರಸ್ಪರ ಹೋಲಿಕೆಗಳಿಗನುಗುಣವಾಗಿ ಪತ್ತೆ ಹಚ್ಚುವಂತಹ ಕಾರ್ಯ ನಡೆಯುತ್ತಿರುವುದನ್ನ ಕಾಣಬಹುದಾಗಿದೆ. ಆದ್ದರಿಂದ ಇದುವರೆವಿಗೂ ನಡೆದಿರುವ ಸಂಶೋಧನೆಗಳನ್ನ ಮತ್ತು ನೀಡಿರುವ ಐತಿಹ್ಯಗಳನ್ನ ಆಧಾರವಾಗಿಟ್ಟುಕೊಂಡು (ಪೌರಾಣಿಕ ಐತಿಹ್ಯಗಳು, ಐತಿಹಾಸಿಕ ಐತಿಹ್ಯಗಳು) ಮೂಲವನ್ನ ತಿಳಿಯುವ ಹಾದಿಯಲ್ಲಿ ಸಾಗಬಹುದೇ ವಿನಹ ಸಂಪೂರ್ಣವಾಗಿ ಮೂಲವನ್ನು ತಿಳಿದಿಲ್ಲ. ಆದ್ದರಿಂದ ಈದಿಸೆಯಲ್ಲಿ ಇನ್ನೂ ಅಧ್ಯಯನಗಳ ನಡೆಯಬೇಕಾಗಿದೆ.

ಅಧ್ಯಾಯ ೦೪

ತಿಗಳರ ಇತಿಹಾಸ ಮತ್ತು ಪರಂಪರೆ

ಅಧ್ಯಾಯ – 04

ತಿಗಳರ ನ್ಯಾಯ ಪದ್ಧತಿ (ಜೀವನ ವಿಧಾನ):

ತಿಗಳರು ಬೇರೆ ಬೇರೆ ಜಾತಿಗಳಂತೆ ಇವರು ಕೂಡ ವಿಭಿನ್ನವಾದಂತಹ ಆಚರಣೆಗಳನ್ನೊಳಗೊಂಡಂತೆ ವಿಶಿಷ್ಟ ರೀತಿಯಲ್ಲಿ ಜೀವನವನ್ನು ನಡೆಸುತ್ತಿರುವುದನ್ನ ಕಾಣಬಹುದಾಗಿದೆ. ಇತ್ತೀಚೆಗೆ ನಗರ ಪ್ರದೇಶದಲ್ಲಿ ವಾಸಿಸುತ್ತಿರುವವರನ್ನ ಬಿಟ್ಟರೆ ಗ್ರಾಮಾಂತರದಲ್ಲಿ ವಾಸಿಸುವಂತಹ ಜನರು ವ್ಯವಸಾಯಕ್ಕೆ ಅನುಕೂಲವಾಗುವಂತೆ ಕೆರೆ, ಹೊಳೆ, ನದಿ, ಕಟ್ಟೆಗಳ ಬಳಿಯಲ್ಲಿನ ತಮ್ಮ-ತಮ್ಮ ಹೊಲಗದ್ದೆ, ತೋಟಗಳಲ್ಲೇ ವಾಸಿಸುವುದನ್ನು ಕಾಣಬಹುದು. ಅಲ್ಲದೆ ಇವರು ಮೂಲ ವೃತ್ತಿಯಾಗಿ ಕೃಷಿಯನ್ನ ಅವಲಂಬಿಸಿರುವುದರಿಂದ ಜನಸಂಪರ್ಕದಿಂದ ದೂರವಾಗಿ ತಮ್ಮ-ತಮ್ಮ ಹೊಲಗದ್ದೆ, ತೋಟಗಳಲ್ಲಿ ವಾಸಿಸುವುದನ್ನು ಕಾಣಬಹುದಾಗಿದೆ. ಶ್ರಮ ಜೀವಿಗಳಾದ ಇವರು ದವಸ ಧಾನ್ಯವನ್ನು ಹೇರಳವಾಗಿ ಬೆಳೆಯುತ್ತಾರೆ.

ಇವರಲ್ಲಿ ಮುಖ್ಯವಾಗಿ ಬುಡಕಟ್ಟು ಪದ್ಧತಿಯನ್ನ ಕಾಣಬಹುದಾಗಿದೆ. ಅವರು ಮನೆದೇವರು, ಕುಲದೇವರುಗಳನ್ನ ಬಿಟ್ಟು ಆರಾಧಿಸುವ ಇತರೆ ಕ್ಷುದ್ರ ಅಥವಾ ಸಾತ್ವಿಕ ಪುರುಷ ದೇವರುಗಳ ಆಧಾರದ ಮೇಲೆ ತಿಗಳರ ಸಮುದಾಯ ಬುಡಕಟ್ಟುಗಳಾಗಿ ವಿಭಾಗ ಮಾಡಿಕೊಂಡಿದ್ದಾರೆ. ಬೇರೆ-ಬೇರೆ ಗೋತ್ರಗಳಂತೆ ಈ ಬುಡಕಟ್ಟುಗಳು ಅನ್ಯ ಜಾತಿಗಳವರಲ್ಲಿ ಸ್ವಗೋತ್ರದ ವಧು-ವರರ ನಡುವೆ ಮದುವೆ ಹೇಗೆ ನಿಶಿದ್ಧವೋ ಹಾಗೆಯೇ ಒಂದೇ ಬುಡಕಟ್ಟಿಗೆ ಸೇರಿದವರು ಸೋದರರಾದೆವೆಂದು ಪರಿಗಣಿಸಲ್ಪಟ್ಟಿದ್ದು ಆ ಬುಡಕಟ್ಟಿಗೆ ಸೇರಿದ ವಧು-ವರರ ನಡುವೆ ವಿವಾಹ ನಿಶಿದ್ಧವಾಗಿದೆ. ಇದರ ಮೂಲ ಉದ್ದೇಶ ಆರೋಗ್ಯಕರ ದಾಂಪತ್ಯ ನೀತಿ ಮತ್ತು ಉತ್ತಮ ಸಂತಾನ ದೃಷ್ಟಿಯಿಂದ ಈ ರೀತಿ ಬುಡಕಟ್ಟು. ಪದ್ಧತಿ ಅನಾದಿ ಕಾಲದಿಂದಲೂ ಸಾಗಿಬಂದಿದೆ. ಉದಾ: ಲಕ್ಷ್ಮಿ ದೇವರ ಬುಡಕಟ್ಟು, ಎಲ್ಲಮ್ಮ

ಬುಡಕಟ್ಟು, ಸಿದ್ದೇಶ್ವರಸ್ವಾಮಿ ಬುಡಕಟ್ಟು, ರೇವಣ್ಣ ಸಿದ್ದಪ್ಪನ ಬುಡಕಟ್ಟು, ನರಸಿಂಹ ಸ್ವಾಮಿಯ ಬುಡಕಟ್ಟು, ಇತ್ಯಾದಿ.

ತಿಗಳರು ಎಲ್ಲಾ ಜಾತಿ ಧರ್ಮದವರೊಡನೆ ಹೊಂದಿಕೊಂಡು ಬದುಕುತ್ತಾರೆ. ಎಲ್ಲಾ ಧರ್ಮ ಗುರುಗಳು ಮತ್ತು ದೇವರುಗಳನ್ನು ಆರಾಧಿಸುತ್ತಾರೆ. ಎಲ್ಲಾಹಿಂದೂ ಹಬ್ಬಗಳನ್ನು ಆಚರಿಸುತ್ತಾರೆ ಮತ್ತು ಅವರೊಂದಿಗೆ ಪರಸ್ಪರ ಬೆರೆಯುವಂತಹ ಮನಸ್ಥಿತಿಯನ್ನು ಹೊಂದಿಕೊಳ್ಳುವ ಮುಖಾಂತರ ತಮ್ಮ ಜಾತ್ಯಾತೀತ ಮನೋಭಾವವನ್ನು ಎತ್ತಿ ತೋರಿದ್ದಾರೆ. ತಿಗಳರಲ್ಲಿ ಊರಿನ ಯಜಮಾನನೇ ಧರ್ಮಗುರು, ಕುಲಸ್ವಾಮಿ, ಆತ ಅಗ್ನಿಬನ್ನಿರಾಯ (ಕುಲದೇವತೆ)ನ ಸಂಕೇತ ಆತನ ನಾಯಕತ್ವದಲ್ಲಿ ಕುಲಸಂಬಂಧಿಯಾದ ಎಲ್ಲ ವಿಧಿಗಳು ನೆರವೇರಲ್ಪಡುತ್ತವೆ. ಇತ್ತೀಚೆಗೆ ಈ ಪದ್ಧತಿಯಲ್ಲಿ ಬದಲಾವಣೆಯಾಗಿ ಧರ್ಮಗುರು ಪೀಠ, ಸ್ವಾಮಿಗಳನ್ನ ನೇಮಕ ಮಾಡಿಕೊಂಡಿರುವುದನ್ನ ಕಾಣಬಹುದಾಗಿದೆ.

ತಿಗಳರು ನಗರವನ್ನು ಬಿಟ್ಟರೆ ಹಳ್ಳಿಗಳಲ್ಲಿ ತಾವು ಒಂದೆಡೆ ವಾಸ ಮಾಡುವುದನ್ನು ಕಾಣಬಹುದು. ಅಂದರೆ ಅವರು ಇತರ ಜನರ ಸಂಪರ್ಕದಿಂದ ದೂರವಾಗಿ ತಮ್ಮ-ತಮ್ಮ ಕೆಲಸ ಕಾರ್ಯಗಳಿಗೆ ಸಹಾಯ ಮತ್ತು ಅನುಕೂಲವಾಗುವ ರೀತಿಯಲ್ಲಿ ತಮ್ಮ ವಾಸಸ್ಥಳಗಳನ್ನು ಹೊಲ ಗದ್ದೆ ತೋಟಗಳಲ್ಲೇ ನಿರ್ಮಾಣ ಮಾಡಿಕೊಂಡಿರುತ್ತಾರೆ. ತಾವು ವಾಸ ಮಾಡಲು ಬೇಕಾದಂತಹ ಮನೆಗಳನ್ನ ಬಹಳ ನಾಜುಕಿನಿಂದ ಮತ್ತು ತಾವು ಬೆಳೆದ ಬೆಳೆಗಳನ್ನ ಶೇಖರಿಸಲು ಮತ್ತು ಒಣಗಿಸಲು ಅನುಕೂಲವಾಗುವಂತೆ ಮನೆಗಳನ್ನು ನಿರ್ಮಿಸಿಕೊಳ್ಳುತ್ತಿದ್ದರು. ಅಂದರೆ ಹಿಂದೆ ಇವರು ಹೆಚ್ಚು-ಹೆಚ್ಚು ಗುಡಿಸಲಿಗಿಂತ ಬದಲಾಗಿ ಮಾಳಿಗೆ ಮನೆಗಳನ್ನು ನಿರ್ಮಾಣ ಮಾಡಿಕೊಳ್ಳುತ್ತಿದ್ದರು ಅಂದರೆ ನಾಲ್ಕು ಗೋಡೆಗಳ ಮೇಲೆ ಕಟ್ಟಿಗೆಯನ್ನು ಜೋಡಿಸಿ ಅದರ ಮೇಲೆ ಮಣ್ಣಿನ ಹೊದಿಕೆಯನ್ನು ಹಾಕುತ್ತಿದ್ದರು. ಇದರಿಂದ ಅವರು ಈ ಮಾಳಿಗೆಯ ಮೇಲೆ ಆಹಾರ ಧಾನ್ಯಗಳನ್ನು ಒಣಗಿಸಬಹುದಾಗಿತ್ತು ಇದರ ಜೊತೆಗೆ ಮನೆಗಳನ್ನು ಎತ್ತರಕ್ಕೆ ಕಟ್ಟಿ ಮೇಲಕ್ಕೆ ತೆಂಗಿನ ಗರಿ ಅಥವಾ ಹೆಂಚುಗಳನ್ನು

ಹಾಕುತ್ತಿದ್ದರು. ಈ ಗರಿ ಅಥವಾ ಹೆಂಚಿನ ಕೆಳಭಾಗದಲ್ಲಿ ಎತ್ತರಕ್ಕೆ ಅಟ್ಟವನ್ನು ನಿರ್ಮಾಣ ಮಾಡಿಕೊಂಡು ಸೌಧೆ, ಕಾಯಿ ಇನ್ನಿತರ ಆಹಾರ ಧಾನ್ಯಗಳನ್ನ ಇಲ್ಲಿ ಶೇಖರಿಸಿಡುತ್ತಿದ್ದರು ಹಾಕುತ್ತಿದ್ದರು. ಇಂತಹ ಮನೆಗಳನ್ನು ಮಾಡಿ ಮನೆಗಳು ಎಂದು ಕರೆಯುತ್ತಿದ್ದನ್ನು ಕಾಣಬಹುದಾಗಿದೆ.

ಇವರ ವಾಸಸ್ಥಾನದ ಮತ್ತೊಂದು ವಿಶೇಷವೆಂದರೆ ಸಾಮಾನ್ಯವಾಗಿ ಇವರು ವಾಸ ಮಾಡುವಂತಹ ಸ್ಥಳದಲ್ಲಿ ರಾಮಮಂದಿರಗಳನ್ನ ಕಾಣಬಹುದಾಗಿದೆ. ಇವರು ರಾಮಾಯಣ, ಮಹಾಭಾರತ ಮುಂತಾದ ಮಹಾಕಾವ್ಯಗಳ ಕಾವ್ಯ ಪುರುಷರ ಪ್ರಭಾವ ಇವರ ಮೇಲೆ ಆದಿಯಿಂದಲೂ ಮಹಾ ಕಾವ್ಯಗಳ ಕಾವ್ಯ ಪುರುಷರ ಪ್ರಭಾವ ಇವರ ಮೇಲೆ ಆದಿಯಿಂದಲೂ ಅತಿಯಾಗಿದೆ. ನಿಮಿತ್ತ ಕಾವ್ಯದ ನಾಯಕರ ಹೆಸರುಗಳನ್ನು ಇಟ್ಟುಕೊಂಡಿದ್ದಾರೆ. ಇವರು ನೆಲೆಗೊಂಡ ಕಡೆ ಒಂದು ರಾಮಮಂದಿರ ಅಥವಾ ಭಜನಾ ಮಂದಿರಗಳನ್ನ ಕಾಣಬಹುದಾಗಿದೆ. ಇವು ಸರ್ವ ಧರ್ಮ, ಸರ್ವ ದೇವರುಗಳ ಸಂಗಮ ಸ್ಥಾನದಂತಿದೆ.

ತಿಗಳರಲ್ಲಿ ಕುಟುಂಬ ವ್ಯವಸ್ಥೆಯು ಒಂದು ಪುಟ್ಟ ಊರಿನನಿಂತೆ ಕಂಡು ಬರುವುದನ್ನ ಕಾಣಬಹುದಾಗಿದೆ. ಅಂದರೆ ಅವರಲ್ಲಿ ಮುಖ್ಯವಾಗಿ ನಾವು ತಾತ, ಅಜ್ಜಿಯನ್ನೊಳಗೊಂಡಂತೆ ಮೂರು ತಲೆಮಾರಿನವರೆಗೆ ಒಂದೇ ಸೂರಿನಲ್ಲಿ ವಾಸಮಾಡುವಂತಹ ಅವಿಭಕ್ತಕುಟುಂಬಗಳನ್ನು ಕಾಣಬಹುದಾಗಿದೆ. ಅಂದರೆ ಇದು ಅವರ ಸಾಮರಸ್ಯ ಮತ್ತು ಸಹಬಾಳ್ವೆಗೆ ಹಿಡಿದಂತಹ ಕನ್ನಡಿಯಾಗಿದೆ ಎಂದು ಹೇಳಬಹುದಾಗಿದೆ.

ಇವರಲ್ಲಿ ಪಿತೃ ಪ್ರಧಾನವಾದಂತಹ ಕುಟುಂಬಗಳನ್ನ ಕಾಣಬಹುದಾಗಿದೆ. ಅಂದರೆ ಸಂಸಾರದ ಆಡಳಿತದ ನಿರ್ವಹಣೆಯು ತಂದೆಯಿಂದ ಕುಟುಂಬದ ಹಿರಿಯ ಮಗನಿಗೆ ವಂಶ ಪಾರಂಪರ್ಯವಾಗಿ ಸಾಗಿ ಬರುವುದನ್ನ ನಾವು ಕಾಣಬಹುದಾಗಿದೆ. ಅಂದರೆ ಆತನ

ಸಹಾನುಗುಣವಾಗಿ ಎಲ್ಲರೂ ನಡೆಯುತ್ತಿದ್ದು ಪರಸ್ಪರ ಎಲ್ಲರೂ ಸಹಾಯ ಸಹಕಾರವನ್ನು ನೀಡುತ್ತಿದ್ದರು ಮತ್ತು ಅನ್ಯೋನ್ಯವಾಗಿ ಜೀವನ ನಡೆಸುತ್ತಿದ್ದರು.

ತಿಗಳರ ಕುಲಕನ್ಯೆ ದ್ರೌಪದಿಯಾಗಿದ್ದರಿಂದ, ಪಿತೃ ಪ್ರಧಾನ ಕುಟುಂಬವಾದರೂ ಕೂಡ ಸ್ತ್ರೀಯರಿಗೆ ವಿಶೇಷವಾದಂತಹ ಗೌರವ ಮತ್ತು ಪೂಜನೀಯವಾದಂತಹ ಸ್ಥಾನಮಾನವನ್ನ ನೀಡಿದ್ದನ್ನು ಕಾಣಬಹುದಾಗಿದೆ. ಅಂದರೆ ಮನೆಯಲ್ಲಿ ಅವರಿಗೆ ವಿಶೇಷವಾದಂತಹ ಸ್ಥಾನಮಾನವನ್ನ ನೀಡಲಾಗಿತ್ತು, ಜೊತೆಗೆ ಅವರ ಮಾರ್ಗದರ್ಶನವನ್ನು ಕೂಡ ಪಡೆಯುತ್ತಿದ್ದರು. ಆದರೂ ಕೂಡ ಶಿಕ್ಷಣವನ್ನು ಮಾತ್ರ ಸಾಮಾನ್ಯವಾಗಿ ಸ್ತ್ರೀಯರಿಗೆ ಕಲಿಸುತ್ತಿರಲಿಲ್ಲ. ಬದಲಿಗೆ ಪುರುಷರು ಇದರ ಪ್ರಯೋಜನವನ್ನು ಪಡೆದಿದ್ದರು. ಮತ್ತು ಗಂಡು ಮಕ್ಕಳಿಗೆ ಹೆಚ್ಚು ಮನ್ನಣೆಯನ್ನು ಮತ್ತು ಗಂಡನ್ನ ಉಳ್ಳಂತವರು ಶ್ರೇಷ್ಟರೆಂಬಂತೆ ಗಂಡು ಮಕ್ಕಳು ಜನನವನ್ನು ಬಯಸುತ್ತಿದ್ದರು.

"ವಿವಾಹದಂತಹ ಕಾರ್ಯಗಳು ಮುಖ್ಯವಾಗಿ ಬುಡಕಟ್ಟುಗಳ ಹೊರಗೆ ನಡೆದರೂ ಕೂಡ ರಕ್ತ ಸಂಬಂಧದಲ್ಲಿಯೇ ವಿವಾಹ ನಡೆಯಲು ಹೆಚ್ಚಾಗಿ ಪ್ರೋತ್ಸಾಹವನ್ನು ನೀಡುತ್ತಿದ್ದರು ಇದಕ್ಕೆ ಕಾರಣವೆಂದರೆ ನಮ್ಮ ಕುಟುಂಬ ವ್ಯವಸ್ಥೆಯ ಬಲವರ್ಧನೆಯೇ ಇರಬೇಕೆನ್ನಬಹುದಾಗಿದೆ ಎಂಬುದು ಕೆಲವರ ಅಭಿಪ್ರಾಯವಾಗಿದೆ."(9)

ಕುಟುಂಬದಲ್ಲಿ ಸಂಸಾರದ ನಿರ್ವಹಣೆಯಲ್ಲಿ ಸ್ತ್ರೀಯರೂ ಕೂಡ ಪುರುಷರಷ್ಟೇ ಮಹತ್ವದ ಪಾತ್ರವನ್ನು ವಹಿಸಿದರು. ಪುರುಷ ಮನೆಯ ಹೊರಗೆ ದುಡಿದರೆ, ಸ್ತ್ರೀಯು ಮನೆಯೊಳಗೆ ದುಡಿಯುವುದರ ಜೊತೆಗೆ ತನ್ನ ಜೊತೆಗಾರನಿಗೆ ಪರಸ್ಪರ ಸಹಕಾರವನ್ನು

---

9) ಕ್ಷೇತ್ರ ಕಾರ್ಯ – ವಕ್ತೃವಿನ ಹೆಸರು: ಎಂ. ಆಂನೇಯ ನಿ. ಪ್ರಾಧ್ಯಾಪಕರು

ನೀಡುತ್ತಿದ್ದಳು. ಅವರು ಮನೆಗೆಲಸದ ಜೊತೆಗೆ ತೋಟಗಾರಿಕೆಯಂತಹ ಕೆಲಸದಲ್ಲಿಯೂ ಕೂಡ ತಮ್ಮನ್ನ ತಾವು ತೊಡಗಿಸಿಕೊಂಡಿದ್ದರು.

ಆದರೆ ಇತ್ತೀಚೆಗೆ ತಮ್ಮ ಸುಖ ಜೀವನದ ಬಯಕೆಯಿಂದ ಮತ್ತು ಆಧುನಿಕತೆಯ ಪ್ರಭಾವದಿಂದಾಗಿ ಕುಟುಂಬವು ತನ್ನ ತನವನ್ನೇ ಕಳೆದುಕೊಳ್ಳುತ್ತಿದೆ. ಅಂದರೆ ಅವಿಭಕ್ತ ಕುಟುಂಬವೆಲ್ಲವೂ ಹೊಡೆದು ಚೂರು-ಚೂರಾಗಿ ಚಿಕ್ಕಿ-ಚಿಕ್ಕ ಕುಟುಂಬಗಳಾಗಿವೆ. ಇದು ಒಂದು ರೀತಿಯಾದಂತಹ ಸಂಸ್ಕೃತಿ ನಾಶವೇ ಎಂದು ಹೇಳಬಹುದಾಗಿದೆ.

ತಿಗಳರು ಮಾಂಸಹಾರ ಮತ್ತು ಸಸ್ಯಹಾರಗಳನ್ನು ಯಾವುದೇ ಬಡವ ಬಲ್ಲಿಗರೆಂಬ ಬೇಧಭಾವವಿಲ್ಲದೆ ತಿನ್ನುತ್ತಾರೆ. ಅಂದರೆ ಅವರ ಆಹಾರ ವ್ಯವಸ್ಥೆಯು ಯಾವುದೇ ಬೇಧ-ಭಾವವಿಲ್ಲದೆ ಒಂದೇಯಾಗಿದೆ ಎಂದು ಹೇಳಬಹುದು. ಅವರು ಅಕ್ಕಿ, ರಾಗಿ, ಜೋಳ, ಗೋಧಿ, ತರಕಾರಿಗಳು, ನವಣೆ, ಸಜ್ಜೆ, ಭತ್ತ, ಕೊರಲೆ, ಹಾರಕ ಮುಂತಾದ ಬೆಳೆಗಳನ್ನು ಬೆಳೆಯುತ್ತಾರೆ. ಸಸ್ಯಹಾರದಲ್ಲಿ ರಾಗಿಮುದ್ದೆ, ರಾಗಿರೊಟ್ಟಿ, ಜೋಳದರೊಟ್ಟಿ, ಅನ್ನ, ಅಕ್ಕಿರೊಟ್ಟಿ, ಚಪಾತಿ, ಚಟ್ನಿ, ಖಾರ, ರಾಗಿ, ರವೆ ಉಪ್ಪಿಟ್ಟು, ಬೇಳೆ ಸಾರು, ಬಸ್ಸಾರು, ಉಪ್ಸಾರು, ಸಪ್ಪೆತೋಗೆ, ಮಸಪ್ಪು, ಹಲವು ಸೊಪ್ಪಿನ ಸಾರು, ತರಕಾರಿಗಳ ಹುಳಿಸಾರು ಪಲ್ಯಗಳು ಬಜ್ಜಿ ಬೋಂಡಗಳು ಮುಖ್ಯವಾದವಾಗಿರುತ್ತವೆ. ಅಡವಿಯಲ್ಲಿ ಸಿಗುವ ಅನೇಕ ರೀತಿಯ ಸೊಪ್ಪುಗಳನ್ನು ತಂದು ಸಾಂಬಾರು ಮಾಡಿಕೊಂಡು ತಿನ್ನುತ್ತಾರೆ. ಅಲೆ ಸೊಪ್ಪು, ಕಿರುಕಸಲೆ, ಅನ್ನೆ ಮುಂತಾದವುಗಳ್ಳು ಮುಖ್ಯವಾಗಿವೆ. ಮಾಂಸ ಆಹಾರದಲ್ಲಿ ಇವರು ತಾವೇ ಸಾಕಿದ ಕುರಿ, ಮೇಕೆ, ಕೋಳಿ, ಏಡಿ, ಮೀನು ಮತ್ತು ಅನೇಕ ಕಾಡಿನ ಪಕ್ಷಿಪ್ರಾಣಿಗಳನ್ನು ಭೇಟೆಯಾಡಿಯು ಸಹ ಉಪಯೋಗಿಸುತ್ತಾರೆ.

ವಿಶೇಷ ಆಹಾರದಲ್ಲಿ ಬೇಳೆ ಒಬ್ಬಟ್ಟು, ಕಾಯಿ ಒಬ್ಬಟ್ಟು, ಹಾಲೊಬ್ಬಟ್ಟು ಕಡುಬು, ಕರಿದ ಕಡುಬು, ಪಾಯಸ, ಸಾವಿಗೆ, ತಂಬಿಟ್ಟು ಮುಂತಾದ ಸಿಹಿ ತಿಂಡಿಗಳನ್ನ ವಿಶೇಷವಾಗಿ ಹಬ್ಬಗಳಲ್ಲಿ ಹಾಗೂ ವಿಶೇಷ ಸಂದರ್ಭದಲ್ಲಿ ಮಾಡಿ ತಿನ್ನವುದನ್ನ ಕಾಣಬಹುದು.

ಬಿಡುವಿನ ವೇಳೆಯಲ್ಲಿ ಮತ್ತು ಕೆಲಸದ ಒತ್ತಡದಿಂದ ಬೇಗ ಸಾರು ತಯಾರಿಸಲು ಸಾಧ್ಯವಿಲ್ಲದ್ದಿದಾಗ ಚಟ್ನಿಯೊಂದಿಗೆ ತಿನ್ನಲು ಮಳೆಗಾಲದಂತಹ ಚಳಿಯ ಸಂದರ್ಭದಲ್ಲಿ ತಿನ್ನಲು ಹಲಸಂಥೆ, ಹುರುಳಿ, ಕಡಲೆ, ಹೆಸರು, ಅವರೆ, ಗೋಧಿ, ಕಡಲೇ ಬೀಜ ಮುಂತಾದವನ್ನು ಹುರಿದು ಉಪ್ಪು, ಖಾರ ಹಾಕಿ ಡಬ್ಬಿಯಲ್ಲಿ ಶೇಖರಿಸುತ್ತಾರೆ. ಅತ್ಯಂತ ಕಷ್ಟ ಜೀವಿಗಳಾದ ಇವರು ಬೇಸರಕ್ಕಾಗಿ ಮತ್ತು ಹವ್ಯಾಸವಾಗಿಯೂ ಅಡಕೆ ಎಲೆಯನ್ನು ಜಿಗಿಯುವುದನ್ನು ರೂಢಿಸಿಕೊಂಡಿದ್ದಾರೆ. ಅಲ್ಲದೆ ವಿಶೇಷವಾಗಿ ಅಣಬೆ ಸಾರನ್ನು ಮಾಡಿಕೊಂಡು ಉಪಯೋಗಿಸುತ್ತಾರೆ ಮತ್ತು ಇವರು ತೋಟಗಾರಿಕೆಯನ್ನು ಹೆಚ್ಚಾಗಿ ಮಾಡುವುದರಿಂದ ತಾವೇ ತಮ್ಮ ಶ್ರಮ ಶಕ್ತಿಯಿಂದಲೇ ಬೇಕಾದಂತಹ ತರಕಾರಿಗಳನ್ನ ಬೆಳೆದುಕೊಂಡು ಶುಚಿ ಮತ್ತು ರುಚಿಯಾದ ಆಹಾರಗಳನ್ನು ತಯಾಸಿಸಿಕೊಂಡು ತಿನ್ನುತ್ತಾರೆ ಮತ್ತು ಬಹಳ ಕಾಲದ ಹಿಂದೆ ಇವರು ಗೆಡ್ಡೆ ಗೆಣಸು ತಿಂದು ಬದುಕಿ ಬಂದಿದ್ದರಿಂದ ಇಂದೂ ಸಹ ತಿನ್ನಬೇಕೆಂಬ ಆಸೆಯಿಂದ ಕೆಲವು ವೇಳೆ ಗೆಡ್ಡೆ ಗೆಣಸುಗಳನ್ನು ತಂದು ತಿನ್ನುವುದನ್ನು ಕಾಣಬಹುದಾಗಿದೆ.

ತಿಗಳರು ತೊಡುತ್ತಿದ್ದಂತಹ ಉಡುಗೆಗಳು ಕೂಡ ಬೇರೆ ಜನ ಸಮುದಾಯಕ್ಕಿಂತ ಭಿನ್ನವಾಗಿದ್ದವು. ಅವರು ಬಹಳ ಕಷ್ಟ ಜೀವಿಗಳಾಗಿದ್ದು ತಮ್ಮ ತಮ್ಮದೇ ಆದಂತಹ ಚಟುವಟಿಕೆಯಲ್ಲಿ ಬಿಡುವಿಲ್ಲದೆ ತೊಡಗುತ್ತಿದ್ದರಿಂದ ಅವರು ಉಡುಗೆ–ತೊಡುಗೆಯಲ್ಲಿ ನವೀನ ರೀತಿಯ ನಯ–ನಾಜೂಕಿನ ವಸ್ತ್ರಗಳನ್ನು ಧರಿಸುತ್ತಿರಲಿಲ್ಲ. ಸಾಮಾನ್ಯವಾಗಿ ಅವರು ಕಚ್ಚೆ ಪಂಚೆ, ಮತ್ತು ಹೊಲಿದ ಬಾಡಿಯನ್ನ ಪುರುಷರು ಧರಿಸುತ್ತಿದ್ದರು. ಅವರು ಧರಿಸುತ್ತಿದ್ದಂತಹ ಹೊಲಿಸಿದ ಬಾಡಿಯಲ್ಲಿ ಹೊಟ್ಟೆ ಭಾಗದಲ್ಲಿ ಜೇಬನ್ನು ಉಳ್ಳಂತಹವುಗಳಾಗಿದ್ದವು. ಅಂದರೆ

ತಾವು ಬಿಡುವಿನ ವೇಳೆಯಲ್ಲಿ ತಮಗೆ ಬೇಕಾದಂತಹ ಎಲೆ, ಅಡಿಕೆ, ಬೀಡಿ ಇನ್ನಿತರ ವಸ್ತುಗಳನ್ನು ಅದರಲ್ಲಿ ಇಟ್ಟುಕೊಳ್ಳುತ್ತಿದ್ದರು.

ಮದುವೆಯಂತಹ ಮತ್ತು ವಿಶೇಷ ಕಾರ್ಯಗಳ ಸಂದರ್ಭದಲ್ಲಿ ಗಂಡಸರು ತಲೆಗೆ ಟೋಪಿ, ಬಿಳಿ ಅಂಗಿ, ಅದರ ಮೇಲೆ ಕಪ್ಪು ಕೋಟು, ಮೇಲೊಂದು ಕೆಂಪು ಅಥವಾ ಬಿಳಿ ಶಲ್ಯವನ್ನು ಹಾಕಿಕೊಳ್ಳುತ್ತಿದ್ದರು ಮತ್ತು ಕಡ್ಡಾಯವಾಗಿ ಬಿಳಿ ಬಣ್ಣದ ಪಂಚೆಯನ್ನು ತೊಡುತ್ತಿದ್ದರು. ಇತ್ತೀಚೆಗೆ ಆಧುನಿಕತೆಯ ಪ್ರಭಾವದಿಂದಾಗಿ ತಮ್ಮ ಉಡುಗೆಗಳಲ್ಲಿ ಬದಲಾವಣೆಯನ್ನ ಮಾಡಿಕೊಂಡಿರುವುದು ಕಂಡು ಬರುತ್ತದೆ. ಇತ್ತೀಚೆಗೆ ಲುಂಗಿ, ಪ್ಯಾಂಟು, ವಿಭಿನ್ನ ರೀತಿಯ ಒಳ ಉಡುವುಗಳ ಬಳಕೆಯನ್ನು ಕಾಣಬಹುದಾಗಿದೆ.

ಪುರುಷರು ಅಲಂಕಾರಿಕವಾಗಿ ಮತ್ತು ವಿಶೇಷವಾಗಿ ಬೆಳ್ಳಿಯ ಉಂಗುರವನ್ನು ಕಿವಿಗಳಿಗೆ ಮುರುಗಳನ್ನು (ಮುರವು ಕೂಡ ಬೆಳ್ಳಿಯದೆ) ಮದುವೆ ಸಂದರ್ಭದಲ್ಲಿ ಮುಂಗೈ ಬದ್ದು, ಬಲಗೈ ತೋಳಿಗೆ ಒಟ್ಟಿನ ಸಲಿಗೆ, ಕಿವಿಗಳಿಗೆ ಪಾಟಲಾಕು, ಕೊರಳಿಗೆ ಚೈನು, ಕಾಲಿಗೆ ಚಪ್ಪಲಿಗಳನ್ನು ಧರಿಸುತ್ತಿದ್ದರು.

ಪುರುಷರ ಉಡುಪಿನಲ್ಲಿ ಸಾಮಾನ್ಯವಾಗಿ ಅಂತಹ ವ್ಯತ್ಯಾಸವೇನು ಕಂಡು ಬರದಿದ್ದರು ಸ್ತ್ರೀಯರಲ್ಲಿ ಬಹಳ ವೈವಿದ್ಯತೆಯಿರುವುದನ್ನು ಕಾಣಬಹುದು. ಸ್ತ್ರೀಯರು ಸಾಮಾನ್ಯವಾಗಿ ಕಡ್ಲೆ ಪುಟಾಣಿ ಸೀರೆ ಎಂಬಂತಹ ಕೆಂಪಂಚಿನ ಸೀರೆಯನ್ನ ತೊಡುತ್ತಿದ್ದರು. ಮತ್ತು ಇವರು ರವಿಕೆಯನ್ನು ತೊಡುತ್ತಿರಲಿಲ್ಲ. ಬದಲಿಗೆ ಏಕ ವಸ್ತ್ರಧಾರಿಯಾಗಿದ್ದರೆನ್ನ ಬಹುದು. ಅವರು ಅವರು ರವಿಕೆ ತೊಡದಿದ್ದಕ್ಕೆ ಕಾರಣವನ್ನ ಹುಡುಕುತ್ತಾ ಹೋದರೆ ಸಂಶೋಧಕರು ತಿಗಳ ಮೂಲವನ್ನು ಕೃತ ಯುಗಕ್ಕೆ ಕರೆದೊಯ್ಯುತ್ತದೆ. ಇವರ ಮೂಲ ಪುರುಷ ಪುರಾಣಗಳಲ್ಲಿ ಬರುವ ಅಂಗೀರಸ, ತಿಗಳರು ಅಂಗೀರಸ ಗೋತ್ರದವರು, ಅಂದರೆ ತಿಗಳರು ಅತೀ ಪುರಾತನ ಜನಾಂಗದವರು ನಾಗರೀಕತೆಯ ಮುನ್ನಾ ದಿನಗಳಲ್ಲಿ ರವಿಕೆ ಸಂಸ್ಕೃತಿ

ಆರಂಭವಾಗಿರಲಿಲ್ಲ ಎನಿಸುತ್ತದೆ. ತಿಗಳ ಮಹಿಳೆ ಏಕ ವಸ್ತ್ರಧಾರಣೆಯಾಗಿದ್ದರು 1950 ರವರೆಗೆ ಕೂಡ ಯಾವ ಕಾರಣಕ್ಕೆ ರವಿಕೆ ತೊಡುತ್ತಿರಲಿಲ್ಲವೆಂಬುದು ಇನ್ನೂ ನಿಗೂಢವಾಗಿದೆ. ರವಿಕೆ ತೊಡದಿರಲು ಏಕವಸ್ತ್ರವನ್ನು ಸೀರೆಯಂತೆ ಉಟ್ಟು ಅದನ್ನೇ ಉತ್ತರಿಯಂತೆ ಹೊದೆಯುವ ಪದ್ಧತಿಯು ಮಲೆನಾಡಿನ ನಾಮಧಾರಿ ಗೌಡರ ಸ್ತ್ರೀಯರು ಮತ್ತು ಕೆಳವರ್ಗದ ಸ್ತ್ರೀಯರಲ್ಲಿ ಈಗಲೂ ಕೂಡ ಚಾಲ್ತಿಯಲ್ಲಿದೆ. ಆದರೆ ನಂತರ 6ನೇ ದಶಕದಲ್ಲಿ ಸುಧಾರಕರು ರವಿಕೆ ತೊಡುವ ಪದ್ದತಿಯನ್ನು ಜಾರಿಗೆ ತಂದು ಇತರರಂತೆ ನಾಗರೀಕತೆಯನ್ನು ಹೊದ್ದುಕೊಂಡತು.

ಈಗಲೂ ರವಿಕೆ ತೊಟ್ಟರೆ ಕೇಡು ಬರುತ್ತದೆಂದು ಭಾವಿಸಿ ಅಲ್ಲಲ್ಲಿ ರವಿಕೆ ತೊಡದಿರುವವರನ್ನ ಕಾಣಬಹುದಾಗಿದೆ.

ಮದುವೆಯಂತಹ ಸಂದರ್ಭದಲ್ಲಿ ಮಹಿಳೆಯರು ರೇಷ್ಮೆಸೀರೆಯನ್ನು ತೊಡುತ್ತಾರೆ ಮತ್ತು ಅಲಂಕಾರಿಕವಾಗಿ ತಲೆಗೆ ಬಣ್ಣ-ಬಣ್ಣದ ಟೇಪು, ತಲೆಗೆ ತಲೆ ಪಿನ್ನು, ತಲೆಗೆ ಚೆಕ್ಕು ಮತ್ತು ಹಲವು ರೀತಿಯಲ್ಲಿ ಕೇಶಲಂಕಾರವನ್ನು ಮಾಡಿಕೊಳ್ಳುತ್ತಿದ್ದರು. ನಂತರ ಅವರು ಅನೇಕ ಅಲಂಕಾರಿಕವಾದಂತಹ ಆಭರಣಗಳನ್ನು ತೊಡುತ್ತಾ ಆಭರಣ ಪ್ರಿಯರಾದಿದ್ದರೆಂದೇ ಹೇಳಬಹುದು.

ಅವರು ಮುಖ್ಯವಾಗಿ ಕಿವಿಗೆ, ಮೇಟಿ ಕೊಳಪೆ, ಬಾಬ್ಳಿ ಮುರ, ಬುಗುಡಿವಾಲೆ, ಬೆಂಡೊಲೆ, ಕೋಲ್‌ಕೂಸ್ಸು, ಕುತ್ತಿಗಗೆ ಚಿಂತಾಕ, ಕಾಸಿನ ಸರ, ದೊಡ್ಡ ಗುಂಡಿನ ಸರ, ಹವಳದ ಸರ, ಕರೆಮಣಿ ಸರ, (ಮಾಂಗಲ್ಯದೊಂದಿಗೆ) ಸೊಂಟಕ್ಕೆಡಾಬು, ಗೆಜ್ಜೆ ಡಾಬು, ಸಾದಾ ಡಾಬು, ಕೈಗಳಿಗೆ ಬದ್ದು, ಬೆಳ್ಳಿ ಮುರ, ಬೆಳ್ಳಿ ಬಳೆ, (ಇವನ್ನು ಮದುವೆ ನಂತರ ಅಥವಾ ಗಂಡ ಸತ್ತನಂತರ ಬೆಳ್ಳಿಯ ಬಳೆಯನ್ನು ತೊಡುತ್ತಿದ್ದರು.) ಕಾಲಿಗೆ ಗಟ್ಟಿ ಕಾಲಂದಿಗೆ, ಚೈನು, ಕಾಲುಂಗರ ಮತ್ತು ತೋಳಿಗೆ ತೋಲ ಬಂದಿಯನ್ನ ತೊಡುತ್ತಿದ್ದರು. ತಿಗಳರ ಮಹಿಳೆಯರ ವಿಶೇಷವೆಂದರೆ ಮೂಗುತಿಯನ್ನು ಧರಿಸುತ್ತಿರಲಿಲ್ಲ. ಇದರಿಂದ ಮುಖ ನೋಡಿದ

ಕೂಡಲೇ ಇವರನ್ನು ಸುಲಭವಾಗಿ ಪತ್ತೆ ಹಚ್ಚಬಹುದು. ಮೂಗುತಿಯನ್ನು ಹಾಕದಿರುವುದಕ್ಕೆ ಕಾರಣ ಹುಡುಕುತ್ತಾ ಹೋದರೆ ಅಜಂತ ಮತ್ತು ಎಲ್ಲೋರ ಗುಹಾಂತರ ದೇವಾಲಯಗಳ ಗೋಡೆಗಳ ಮೇಲೆ ಬಿಡಿಸಿರುವ ಮಹಿಳಾ ಚಿತ್ರಗಳಲ್ಲಿನ ಮಹಿಳೆಯರಿಗೆ ಮೂಗುತ್ತಿ ಇಲ್ಲ ಅಂದಿನ ಸಂಸ್ಕೃತಿಗೆ ಇಂದಿನ ಸಂಸ್ಕೃತಿಗೂ ಇರುವ ಸಂಬಂಧ ಹುಡುಕಾಟ ನಡೆದಿದೆ.

ಮತ್ತೊಂದು ಹೇಳಿಕೆಯಂತೆ ತಿಗಳ ಪುರುಷ ಎಲ್ಲ ಸ್ತ್ರೀಯರಿಗಿಂತ ಚೆನ್ನಾಗಿ ಕಾಣಲೆಂದು ದೊಡ್ಡ ಮೂಗುತಿಯನ್ನು ತರಲು ಹೋಗಿ ತಂದು ಅದನ್ನ ಮೊದಲಿಗೆ ಕತ್ತೆಯ ಮೂಗಿಗೆ ಇಟ್ಟಾಗ ಮೂಗು ಹರಿದು ಬೀಳುತ್ತದೆ. ನಂತರ ಇದನ್ನ ಕಂಡಂತಹವನು ಕತ್ತೆ ಮೂಗು ಹರಿದಂತೆ ನನ್ನ ಹೆಂಡ್ತಿಯ ಮೂಗು ಹರಿಯುತ್ತದೆಂದು ಮೂಗುತಿ ಹಾಕಲಿಲ್ಲವೆಂದು ಒಂದು ಹೇಳಿಕೆ. ಮತ್ತೊಂದು ಹೇಳಿಕೆಯಂತೆ ಮೂಗುತಿ ತರಲು ಹೋದಂತಹ ಪುರುಷ ಹಿಂತಿರುಗಿ ಬರಲಿಲ್ಲವೆಂದು ಮೂಗುತಿಯನ್ನು ಧರಿಸುತ್ತಿಲ್ಲವೆಂದು ಕೆಲವರು ಹೇಳಿಕೆಯಾಗಿದೆ. ವೈಚಾರಿಕವಾಗಿ ಈ ಪದ್ಧತಿಯನ್ನು ನೋಡಿದಾಗ ಬಡವರಾದ ತಿಗಳರು ಸೂಕ್ಷ್ಮವಾದ ಕಿರು ಆಭರಣಗಳನ್ನು ಪಡೆದುಕೊಳ್ಳಲು ಅಶಕ್ತರಾದಿದ್ದರು. ಆ ಕಾಲದಲ್ಲಿ ಸೂಕ್ಷ್ಮವಾದ ಕಿರು ಆಭರಣಗಳು ಕಡಿಮೆ ವೆಚ್ಚದಲ್ಲಿ ತಯಾರಾಗದ ಕಾರಣ ಒರಟಾದ, ದೊಡ್ಡದಾದ ಮೂಗುತಿ ಧರಿಸಿ, ಮೂಗು ವಿರೂಪಗೊಂಡವರು ಇದ್ದರು, ಆ ಕಾರಣದಿಂದ ಮೂಗುತಿಯನ್ನು ಕೆಲವು ಸಮುದಾಯಗಳು ಧರಿಸುವುದಿಲ್ಲ ಎಂಬುದು ಸಂಶೋಧನೆಯಿಂದ ತಿಳಿದು ಬಂದ ನೈಜ ಸತ್ಯವಾಗಿದೆ. ಕೆಲವನ್ನು ಬಿಟ್ಟರೆ ಉಳಿದೆಲ್ಲ ಸಾಮಾನ್ಯ ಸ್ತ್ರೀಯರು ತೊಡುವಂತಹ ತೊಡುಗೆಯನ್ನೇ ತೊಡುತ್ತಾರೆ.

ಅವರ ಮತ್ತೊಂದು ವಿಶೇಷವೆಂದರೆ ಸಾಮಾನ್ಯವಾಗಿ ಎಲೆ ಅಡಿಕೆ ಚೀಲವನ್ನು ಸದಾ ತಮ್ಮ ಸೊಂಟದಲ್ಲಿ ಸಿಕ್ಕಿಸಿ ಕೊಂಡಿರುತ್ತಾರೆ. ಕಾರಣ ಅವರು ಎಲೆ ಅಡಿಕೆ ಪ್ರಿಯರಾಗಿದ್ದರೆಂದು ಮತ್ತು ತಾವೇ ಬೆಳೆದ ಎಲೆ ಅಡಿಕೆಯನ್ನು ಬಿಡುವಿನ ವೇಳೆಯಲ್ಲಿ ಮತ್ತು ಕೆಲಸದ ಒತ್ತಡವನ್ನ ಮರೆಯಲು ಜಗಿಯುತ್ತಿದ್ದರೆಂದು ತಿಳಿಯಬಹುದಾಗಿದೆ.

ಇವರು ಕೂಡ ಎಲ್ಲ ಸಮುದಾಯದ ಸ್ತ್ರೀಯಂತೆ ಗಂಡ ಸತ್ತ ನಂತರ ಉಡುಗೆಯಲ್ಲಿ ಯಾವುದೇ ಬದಲಾವಣೆಯನ್ನ ಮಾಡಿಕೊಳ್ಳುವುದಿಲ್ಲ. ಆದರೆ ಮುತ್ತೈದೆಯರ ಲಕ್ಷಣಗಳಾದಂತಹ ಹೂಮುಡಿಯುವಂತಹದ್ದನ್ನು, ಕುಂಕುಮ ಇಡುವುದನ್ನು ಬಿಡುತ್ತಾರೆ ಬದಲಿಗೆ ಹಣೆಗೆ ವಿಭೂತಿಯನ್ನು ಧರಿಸುತ್ತಾರೆ.

ತಿಗಳರ ಮಕ್ಕಳುಗಳು ಸಾಮಾನ್ಯವಾಗಿ ಗಂಡು ಮಕ್ಕಳು ಅಂಗಿ, ಬಾಡಿ, ಚಡ್ಡಿ, ಮತ್ತು ಲಂಗೋಟಿಗಳನ್ನು ಧರಿಸಿದರೆ ಹೆಣ್ಣು ಮಕ್ಕಳು ಬಾಡಿಲಂಗ, ನರಿಗೆಲಂಗ, ದಾವಣಿಲಂಗ, ವಯಸ್ಕರಾದಂತೆ ಸೀರೆ ಉಡುವುದನ್ನ ರೂಢಿಸಿಕೊಳ್ಳುತ್ತಾರೆ.

ಒಂದು ಜನಾಂಗದ ಅಭಿವೃದ್ಧಿಯು ಅವರ ಆರ್ಥಿಕತೆಯನ್ನೇ ಅವಲಂಬಿಸಿರುತ್ತದೆ. ಹಾಗೆಯೇ ಸಾಮಾಜಿಕ ಮತ್ತು ಸಂಸ್ಕೃತಿಯ ಜೊತೆಯಲ್ಲಿ ಆರ್ಥಿಕತೆಯು ಒಂದು ಜನರ ಜೀವನದ ಮೇಲೆ ಆರ್ಥಿಕತೆಯ ಪ್ರಭಾವ ಇರುವುದನ್ನು ಕಾಣಬಹುದು. ವ್ಯವಸಾಯ ಮತ್ತು ಪಶುಸಂಗೋಪನೆ. ತೋಟಗಾರಿಕೆ ಕಸುವಾಗಿ ಹೊಂದಿರುವ ತಿಗಳರು ಬೆವರು ಸುರಿಸಿ ದುಡಿದುಣ್ಣುವುದನ್ನೇ ಈಗಲೂ ಆಯ್ಕೆ ಮಾಡಿಕೊಳ್ಳುತ್ತಾನೆ. ಮಳೆ ಬೆಳೆ ಸರಿಯಾಗಿ ಆದಲ್ಲಿ ತಿಗಳರು ತಮ್ಮ ಹೊಲಗದ್ದೆ ತೋಟಗಳಲ್ಲಿ ಸಮೃದ್ಧ ಪಸಲನ್ನು ತೆಗೆಯುತ್ತಾರೆ. ಮೂಲತಃ ತೋಟಗಾರಿಕೆಯಲ್ಲಿದ್ದ ಇವರು ಕ್ರಮೇಣ ವ್ಯವಸಾಯ ಮತ್ತು ಪಶು ಸಂಗೋಪನೆಯನ್ನ ಪ್ರಧಾನವಾಗಿ ಅವಲಂಭಿಸಿದ್ದಾರೆ ತಮ್ಮ ವ್ಯವಸಾಯಕ್ಕೆ, ತೋಟಗಾರಿಕೆಗೆ ಅವಶ್ಯಕವಾಗಿ ಬೇಕಾಗಿರುವಂತಹ ದನಕರುಗಳನ್ನು ಹೆಚ್ಚು ಸಾಕುತ್ತಿದ್ದರು. ಮತ್ತು ಈಗ ಹೆಚ್ಚು ಸಾಕುವ ಅರಣ್ಯ ಮತ್ತು ಹುಲ್ಲುಗಾವಲುಗಳಲ್ಲಿ ಅವನ್ನು ಮೇಯಿಸಲು ಹೆಚ್ಚಿನ ಅವಕಾಶಗಳು ಇಲ್ಲವಾದ್ದರಿಂದ ಕ್ರಮೇಣ ಬದಲಾದ ದಿನಗಳಲ್ಲಿ ಈ ಹೊಸ ಬದುಕಿಗೆ ನಿರಾಯಾಸವಾಗಿ ಹೊಂದಿಕೊಂಡಿದ್ದಾರೆ. ಮಳೆಯ ಜೊತೆಗೆ ಅನೇಕ ನೀರಿನ ಮೂಲಗಳನ್ನು ನಂಬಿಕೊಂಡು ವ್ಯವಸಾಯ ಮತ್ತು ತೋಟಗಾರಿಕೆಯನ್ನು ಮಾಡುತ್ತಿದ್ದಾರೆ.

ವ್ಯವಸಾಯ ಮನೆ ಮಕ್ಕಳೆಲ್ಲ ಸಾಯ ಎಂಬಂತೆ ಕುಟುಂಬದ ಎಲ್ಲ ಸದಸ್ಯರುಗಳು ಕೂಡ ಸಕ್ರಿಯವಾಗಿ ವ್ಯವಸಾಯದಲ್ಲಿ ತೊಡಗುತ್ತಾರೆ. ಬೇಸಾಯಕ್ಕೆ ನೇಗಿಲು ಹೂಡುವುದನ್ನ ಇವರು ಹಾರು ಹೂಡುವುದು ಎಂದು ಕೆಲವು ಕಡೆ ಏರು ಕಟ್ಟುವುದೆಂದು ಕರೆಯುತ್ತಾರೆ. ಕೂರಿಗೆ, ಮೇಣ, ನೊಗ, ಈಸು, ಕುಂಟೆ, ಹಲಬೆ, ಗ್ವಾರೆ, ಅಂಡು ಮತ, ರೋಣುಕಲ್ಲು, ಜರಡಿ, ಮೊರ, ಗೊಡೆ, ಮುಚ್ಚಲ, ಹೆಡಿಗೆ, ಬಾರುಕೋಲು, ಗಾಡಿ, ಗುದ್ದಲಿ, ಸಲಿಕೆ, ಪಿಕಾಸಿ, ಹಾರೆ, ಕೊಡಲಿ, ಉಳಿ, ಬೈರಿಗೆ, ಕುರ್ಜಿಗೆ, ಗಸಗಸೆ, ಕುಡ್ಲು, ಬಾಳಚಿ ಮುಂತಾದ ಹಲವು ಹತ್ತು ಸಾಧನಗಳನ್ನು ವ್ಯವಸಾಯದಲ್ಲಿ ಕೆಲಸಗಳಿಗಾಗಿ ವಿವಿಧ ಘಟ್ಟಗಳಲ್ಲಿ ಬಳಸಲಾಗುತ್ತದೆ. ಇವರು ಸೋಮವಾರ ನೇಗಿಲು ಹೂಡುವುದಿಲ್ಲ. ಅಂದು ಬಸವಣ್ಣ ಹುಟ್ಟಿದ ವಾರವೆಂದು ನಂಬಿಕೆ, ಮತ್ತು ವಾರಕೊಮ್ಮೆಯಾದರೂ ಅವುಗಳಿಗೆ ವಿಶ್ರಾಂತಿ ದೊರೆಯಲೆಂದು ಅವರ ಭಾವನೆ. ವರ್ಷದ ಮೊದಲ ಮಳೆ ಬಿದ್ದಾಗ ಈ ವರ್ಷ ಬೆಳೆ ಯಾರ ಹೆಸರಿನಲ್ಲಿ ಚೆನ್ನಾಗಿ ಬರುತ್ತದೆಂದು ತಿಳಿದು ಅವರೊಂದಿಗೆ ಮೊದಲು ನೇಗಿಲನ್ನು ಹೂಡಿಸುತ್ತಾರೆ. ಬಿತ್ತನೆ ಕಾಲ ಆರಂಭವಾದಂತೆ ತಾವು ಶೇಖರಿಸಿ ಇಟ್ಟಿರುವ ಬೆಳೆ ಬೀಜಗಳನ್ನ ಒಂದು ಗೊಡೆಯಲ್ಲಿ ಹಾಕಿಕೊಂಡು ಆ ಗೊಡೆಗೆ ವಿಭೂತಿಯನ್ನ ಬಳಿದು ಸಗಣಿ ಮತ್ತು ಗರಿಕೆಯಿಂದ ವಿಘ್ನೇಶ್ವರನನ್ನ ಮಾಡಿ ಅದರಲ್ಲಿಟ್ಟು ಯಾವುದೇ ವಿಘ್ನ ಬರದಂತೆ ನಮ್ಮನ್ನು ಕಾಪಾಡೆಂದು ಮೊದಲಿಗೆ ಪೂಜೆಯ ಮಾಡಿ ನಂತರ ಅವುಗಳನ್ನು ಬಿತ್ತಲು ನೀಡುತ್ತಾರೆ. ಇದೇ ರೀತಿ ಕೊಯ್ಲುಮಾಡುವಾಗಲೂ ಕೂಡ ಪೂಜೆ ಸಲ್ಲಿಸಿಯೇ ಮಾಡುತ್ತಾರೆ. ದವಸ ಧಾನ್ಯಗಳನ್ನು ಶುಚಿಗೊಳಿಸಲು ಕಣಗಳನ್ನ ಮಾಡುತ್ತಾರೆ. ತಾವು ಬೆಳೆದ ಬೆಳೆಯನ್ನ ತೆನೆ ಸಮೇತ ತಂದು ಕಣದಲ್ಲಿ ಹಾಸಿ ರೋಣುಗಲ್ಲನ್ನ ಹೊಡೆಯುತ್ತಾರೆ. ಹುಲ್ಲು ಮತ್ತು ಧಾನ್ಯಗಳನ್ನ ವಿಂಗಡಿಸುವ ಕಣ ಪವಿತ್ರವಾದ ಸ್ಥಳವೆಂದು ಭಾವಿಸುತ್ತಾರೆ. ದಿನ ಬಳಕೆಯ ವಸ್ತುಗಳನ್ನು ಕಣದಲ್ಲಿ ಪ್ರತ್ಯೇಕ ಹೆಸರುಗಳಲ್ಲಿ ಭಕ್ತಿ ಪೂರ್ವಕವಾಗಿ ಕರೆಯುತ್ತಾರೆ.

ಈ ಬಗ್ಗೆ ಎಳ್ಳಷ್ಟು ಉದಾಸೀನ ಮಾಡುವುದಿಲ್ಲ. ಇಲ್ಲಿ ಜರಡಿ ಹಿಡಿಯುವಾಗ ಬಂದಂತಹ ಕಲ್ಲನ್ನು "ಬಸವ" ಎಂದು ಹಾಗೂ ಮಣ್ಣನ್ನು "ಗೌರಮ್ಮ" ಎಂದು ಹಾಗೆಯೇ ಮೊರವನ್ನ 'ಕೊಂಗ' ಎಂತಲೂ ತಾವು ಎತ್ತರಕ್ಕೆ ನಿಂತು ತೂರಲು ಹಾಕಿಕೊಳ್ಳುವಂತಹ ಎತ್ತರದ ಮಣೆ ಅಥವಾ ಹಲಗೆ ಕುದುರೆ ಎಂದು ಕರೆಯುತ್ತಾರೆ. ಗಾಳಿ ಬರದಿದ್ದಾಗ ಗೌರವ ಪೂರ್ವಕವಾಗಿ ಮತ್ತು ಭಕ್ತಿ ಪೂರ್ವಕವಾಗಿ ಹಾಡುತ್ತ ಓಲಿಗಸ್ವಾಮಿ ಓಲೀಗ ಎಂದು ವಾಯುದೇವನನ್ನ ಆಹ್ವಾನಿಸುತ್ತಾರೆ. ಕೊನೆಗೆ ಸಿದ್ದವಾದಂತಹ ದವಸ ಧಾನ್ಯಗಳನ್ನು ರಾಶಿ ಮಾಡಿಸಿ ಅದಕ್ಕೆ ಮಾವಿನ ಸೊಪ್ಪು, ಹೂವು ಪಿಳ್ಳಾರತಿ ಎಂಬಂತಹ ಸಗಣಿ ಗರಿಕೆಯಿಂದ ಕೂಡಿದ ವಿಘ್ನೇಶ್ವರನನ್ನು ಇಟ್ಟು ಪೂಜೆ ಸಲ್ಲಿಸುತ್ತ ಸಮಸ್ಕರಿಸಿ ಮನೆಗೆ ಕೊಂಡೊಯ್ಯುತ್ತಾರೆ. ಇವರು ಬೇಸಾಯದಲ್ಲಿ ಹಳೆಯ ಪದ್ಧತಿಯನ್ನೇ ಅನುಸರಿಸುವ ಇವರು ಹೊಲದಲ್ಲಿ ರಾಗಿ, ಜೋಳ, ಹಾರಕ, ಕೊರಲೆ, ಭತ್ತ, ಅವರೆ, ತೊಗರಿ, ಹೆಸರು, ಔಡಲ, ಹುಚ್ಚೆಳ್ಳು, ಸಜ್ಜೆ ಮುಂತಾದವುಗಳನ್ನು ಬೆಳೆಯುತ್ತಾರೆ. ಆರ್ಥಿಕ ಬೆಳೆಗಳಾದ ಸೂರ್ಯಕಾಂತಿ, ಹತ್ತಿ ರೇಷ್ಮೆ ಬೆಳೆಗಳನ್ನು ಸಹ ಬೆಳೆಯುತ್ತಾರೆ.

ಇವರು ಹಿಂದೆ ರಾಜರುಗಳ ಹತ್ತಿರ ರಾವುತರಾಗಿ ಅಂದರೆ ಸಂಬಳಕ್ಕೆ ಸ್ಥಳೀಯ ಪಾಳೆಯಗಾರ, ರಾಜರ ಅಧೀನದಲ್ಲಿ ಯುದ್ಧ ಮಾಡಲು ನೇಮಕಗೊಂಡರು. ಬೇರೆ ಬೇರೆ ರಾಜರನ್ನು ಇವರು ಆಶ್ರಯಿಸಿ ಊರಿನಿಂದ ಹೊರಗೆ ನಲೆ ನಿಂತು ರಕ್ಷಣಾ ಕಾರ್ಯದಲ್ಲಿ ಮೊದಲು ತೊಡಗಿದಂತಹ ಇವರು ಸಾಮಾನ್ಯವಾಗಿ ನದಿ, ಹೊಳೆ, ಕೆರೆಗಳ ದಡದಲ್ಲಿಯೇ ನಲೆಸಿ ಅಲ್ಲಿನ ನೀರು, ಮತ್ತು ಭೂಮಿಯನ್ನು ಉಪಯೋಗಿಸಿಕೊಂಡು ತೋಟಗಾರಿಕೆಯಲ್ಲಿ ತಮ್ಮನ್ನ ತೊಡಗಿಸಿಕೊಂಡರು. ಇವರು ಮುಖ್ಯವಾಗಿ ಅಡಿಕೆ, ತೆಂಗು ವಿಳ್ಳೆದೆಲೆ, ಬಾಳೆ, ಹೂವು ಮುಂತಾದ ಬೆಳೆಗಳನ್ನು ಹೆಚ್ಚಾಗಿ ಬೆಳೆಯುತ್ತಾರೆ. ಅದರಲ್ಲೂ ಇವರು ವಿಳ್ಳೆದೆಲೆಯನ್ನು ಬೆಳೆಯುವುದರಲ್ಲಿ ಎತ್ತಿದ ಕೈ, ವಿಳ್ಳೆದೆಲೆಯನ್ನು ನಾಗವಳತಾಯಿ, ಲಕ್ಷ್ಮಿ

ಎಂದು ಗೌರವಿಸುತ್ತಾರೆ. ಮತ್ತು ಯಾವುದೇ ಕಾರಣಕ್ಕೂ ವಿಳ್ಯೆದೆಲೆ ಇಲ್ಲದೆ ತಿಗುಳರಲ್ಲಿ ಯಾವುದೇ ಶುಭ ಕಾರ್ಯಗಳಿಲ್ಲ. ತಾಂಬೂಲ ವಿನಿಯೋಗವಿಲ್ಲದೆ ಪೂಜೆ ಪುನಸ್ಕಾರಗಳಿಲ್ಲ.

ಶ್ರಮ ಜೀವಿಗಳು, ಕಷ್ಟ ಜೀವಿಗಳು ಆದಂತಹ ತಿಗಳರು ತಮಗೆ ಅಗತ್ಯವಿರುವಂತಹ ಎಲ್ಲಾ ದಿನನಿತ್ಯದ ತರಕಾರಿಗಳನ್ನು ತಮ್ಮ ತೋಟದಲ್ಲಿ ಬೆಳೆದುಕೊಳ್ಳುತ್ತಾರೆ. ಮತ್ತು ಹೆಚ್ಚುವರಿಯನ್ನ ಮಾರುಕಟ್ಟೆಗಳಲ್ಲಿ ಮಾರಾಟ ಮಾಡುವುದನ್ನ ಕಾಣಬಹುದಾಗಿದೆ. ಅಂದರೆ ತರಕಾರಿ ಬೆಳೆದು ಮಾರಾಟ ಮಾಡುವುದೇ ಒಂದು ರೀತಿಯ ಉದ್ಯೋಗವನ್ನಾಗಿ ಮಾಡಿಕೊಂಡಿದ್ದಾರೆ.

ಆದಾಯವನ್ನು ಪಡೆಯುವ ಉದ್ದೇಶದಿಂದಲೇ ಪಶು ಸಂಗೋಪನೆಯನ್ನ ಮಾಡದಿದ್ದರೂ ಕೂಡ ಅವರು ತಮಗೆ ಅಗತ್ಯವಾಗಿ ಕೆಲಸಕ್ಕೆ ಬೇಕಾದಂತಹ ಧನಕರುಗಳನ್ನ ಮತ್ತು ಹಾಲು, ಮೊಸರಿಗಾಗಿ, ಮತ್ತು ಬೇಸಾಯಕ್ಕೆ, ತೋಟಗಾರಿಕೆಗೆ ಬೇಕಾದಂತಹ ಗೊಬ್ಬರದ ಅವಶ್ಯಕತೆಗಾಗಿಯು ಕೂಡ ಇವರು ಪಶು ಸಂಗೋಪನೆಯನ್ನ ಮಾಡುವುದನ್ನ ಕಾಣಬಹುದು.

ಇವರು ಆರ್ಥಿಕವಾಗಿ ಬಲಾಢ್ಯರಾಗಿರದಿದ್ದು ಇತ್ತೀಚೆಗೆ ಸ್ವಲ್ಪಮಟ್ಟಿನ ಚೇತರಿಕೆಯನ್ನು ಕಾಣಬಹುದು. ಇವರು ವ್ಯಾಪಾರವನ್ನು ಒಂದು ಹವ್ಯಾಸವನ್ನಾಗಿ ಮಾಡಿಕೊಂಡು ಆರ್ಥಿಕವಾಗಿ ಸ್ವಾವಲಂಬಿಗಳಾಗುವ ದೆಸೆಯಲ್ಲಿ ಸಾಗುತ್ತಿರುವುದನ್ನ ಕಾಣಬಹುದಾಗಿದೆ. ತಾವು ಬೆಳೆದಂತಹ ಬೆಳೆಯನ್ನ ತರಕಾರಿಗಳನ್ನ ಯಾವುದೇ ಭಯ, ನಾಚಿಕೆಯನ್ನ ಪಡದೆ ಧೈರ್ಯವಾಗಿ ಮಾರುಕಟ್ಟೆಯಲ್ಲಿ ಮಾರಾಟ ಮಾಡುವುದನ್ನ ಕಾಣಬಹುದು. ಇದರಿಂದ ಇವರು ಆರ್ಥಿಕವಾಗಿ ಇತ್ತೀಚಿನ ದಿನಗಳಲ್ಲಿ ಪ್ರಬಲರಾಗುತ್ತಿರುವುದನ್ನ ಕಾಣಬಹುದಾಗಿದೆ.

ರಾಜಕೀಯ ಮತ್ತು ನ್ಯಾಯ ವ್ಯವಸ್ಥೆ:

ತಿಗಳ ಜನಾಂಗದ ಹಿರಿಯರಲ್ಲಿ ಯಜಮಾನರು ಮತ್ತು ಗೌಡರ ಮನೆತನಗಳು ಇದ್ದು, ಗೌಡಿಕೆಯ ಸ್ಥಾನವು ವಂಶಪಾರಂಪರ್ಯವಾಗಿ ಈ ಮನೆತನಗಳಿಂದಲೇ ಬಂದಿರುತ್ತದೆ. ಯಜಮಾನರು ಮತ್ತು ಗೌಡರು ಜನಾಂಗದ ಎಲ್ಲಾ ಶುಭಕಾರ್ಯಗಳಲ್ಲಿಯೂ ತಾವು ಮುಂದೆ ನಿಂತು ನಡೆಸಿಕೊಡುವವರಾಗಿರುತ್ತಾರೆ. ಊರಿನ ನ್ಯಾಯ, ಅನ್ಯಾಯಗಳು, ರೀತಿನೀತಿಗಳನ್ನು ತಿದ್ದಿ ಹೇಳುವುದು, ನ್ಯಾಯ ದೊರಕಿಸಿ ಕೊಡಿಸುವುದು ಇವರದೇ ಅಧಿಕಾರವಾಣಿ.


ತಿಗಳರಲ್ಲಿ ಅತೀ ಮುಖ್ಯವಾದಂತಹ ವ್ಯವಸ್ಥೆಯೆಂದರೆ ನ್ಯಾಯ ವ್ಯವಸ್ಥೆ ಇವರಲ್ಲಿ ತಮ್ಮದೇಯಾದಂತಹ ಸಾಂಪ್ರದಾಯಿಕ ನ್ಯಾಯಾಂಗ ವ್ಯವಸ್ಥೆ. ಇದು ಸ್ವಾತಂತ್ರ್ಯ ಭಾರತದ ನ್ಯಾಯಾಂಗ ವ್ಯವಸ್ಥೆಯನ್ನೇ ಹೋಲುತ್ತದೆ. ಈ ಪದ್ದತಿಗೆ ಸುಮಾರು 5 ಸಾವಿರ ವರ್ಷಗಳ ಇತಿಹಾಸವಿದೆ. ಅಂದರೆ ಸ್ವತಂತ್ರ ಭಾರತದ ನ್ಯಾಯ ವ್ಯವಸ್ಥೆಯು ಇತ್ತೀಚೆಗೆ ದೇಶ ಸ್ವತಂತ್ರ ಪಡೆದನಂತರ ರಚನೆಯಾದಂತಹುದು ಆದರೆ ಇವರದ್ದು 5 ಸಾವಿರ ವರ್ಷದ ಇತಿಹಾಸವಿರುವುದರಿಂದಾಗಿ ಇವರ ನ್ಯಾಯಾಂಗ ಪದ್ದತಿಯನ್ನೇ ಸರ್ಕಾರ ಅನುಸರಿಸಿದೆ ಎಂಬುದು ಕೆಲವರ ಅಭಿಮತವಾಗಿದೆ.

ಇವರು ಏಕತೆ, ಸಮಗ್ರತೆ, ಮತ್ತು ಆಡಳಿತಾತ್ಮಕ ದೃಷ್ಠಿಯಿಂದ ತಿಗಳರ ಸಮುದಾಯದವು 4 ಕಟ್ಟೆ, 4ದೇಶ, 80 ಗಡಿಗಳಾಗಿ ಹಳೇ ಮೈಸೂರು ಪ್ರಾಂತ್ಯವನ್ನು ವಿಂಗಡಿಸಿಕೊಂಡಿದ್ದಾರೆ. ಇಲ್ಲಿನ ಕಟ್ಟೆಯೆಂಬುದು ಈಗಿನ ರಾಜ್ಯಕ್ಕೆ ಸಮನಾಗಿರುತ್ತದೆ. ಅದೇ ರೀತಿ ದೇಶವೆಂಬುದು ರಾಜಧಾನಿಗೆ ಸಮನಾಗಿರುತ್ತದೆ. ಇವರು ವಿಂಗಡಿಸಿಕೊಂಡಿರುವ ಕಟ್ಟೆಗಳಲ್ಲಿ ಅತಿದೊಡ್ಡದೆಂದರೆ ತುಮಕೂರು ಇದನ್ನು ಕಟ್ಟೆಯ ಅಣ್ಣ ಎಂದು ಕರೆಯುತ್ತಾರೆ. ಹಿರಿತನದ ಆಧಾರದಲ್ಲಿ ಹೇಳುವುದಾದರೆ.

ಕ್ರ. ಸಂ	ಕಟ್ಟೆಗಳು	ದೇಶಗಳು
1	ತುಮಕೂರು ಕಟ್ಟೆ	ಕ್ಯಾತ್ಸಂದ್ರ
2	ಕಡಬ ಕಟ್ಟೆ	ಗುಬ್ಬಿ
3	ತುರುವೇಕೆರೆ ಕಟ್ಟೆ	ಶೆಟ್ಟಿಕೆರೆ
4	ಕುಣಿಗಲ್ ಕಟ್ಟೆ	ಮಾಗಡಿ

ಈ ಕಟ್ಟೆಗಳು ತನ್ನ ವ್ಯಾಪ್ತಿಯಲ್ಲಿ ಅನೇಕ ಪ್ರದೇಶಗಳನ್ನ ಒಳಗೊಂಡಿದ್ದು ಅದರ ಒಟ್ಟು ಜವಾಬ್ದಾರಿಯನ್ನ ನೋಡಿಕೊಳ್ಳುವುದರ ಜೊತೆಗೆ ತನ್ನ ಅದೀನದಲ್ಲಿಟ್ಟುಕೊಂಡಿರುತ್ತದೆ. ಉದಾಹರಣೆಗೆ ತುಮಕೂರು ಕಟ್ಟೆಯಲ್ಲಿ ತುಮಕೂರು ತಾ. ಬೆಂಗಳೂರು, ಆನೇಕಲ್, ಚಿಕ್ಕಬಳ್ಳಾಪುರ, ದೊಡ್ಡಬಳ್ಳಾಪುರ, ಶಿಡ್ಲಘಟ್ಟ ಇತ್ಯಾದಿ., ಅದೇ ರೀತಿ ಕುಣಿಗಲ್ ಕಟ್ಟೆಯಲ್ಲಿ ಕುಣಿಗಲ್ ತಾ, ಮಾಗಡಿ, ರಾಮನಗರ, ಚನ್ನಪಟ್ಟಣ, ಮೈಸೂರು, ಮಂಡ್ಯ, ಶ್ರೀರಂಗಪಟ್ಟಣ, ಯಡಿಯೂರು ಇತರೆ., ತುರುವೇಕೆರೆ ಕಟ್ಟೆಯಲ್ಲಿ ತುರುವೇಕೆರೆ ತಾ. ಹಾಸನ, ಚಿಕ್ಕಮಗಳೂರು ಕ್ಷೇತ್ರಗಳು, ಕಡಬ ಕಟ್ಟೆಯಲ್ಲಿ ಕಡಬ, ಗುಬ್ಬಿ ತಾ, ಸಿ.ಎನ್. ಹಳ್ಳಿ, ಚೇಳೂರು, ಚಿತ್ರದುರ್ಗ ಇತ್ಯಾದಿ.

ಕಟ್ಟೆಯೆಂಬುದು ಪೂರ್ಣಪ್ರಮಾಣದ ಘಟಕಗಳಾಗಿರುತ್ತದೆ. ಇವರು ಅಧೀನದಲ್ಲಿ ದೇಶ, ದೇಶದ ಅಧೀನದಲ್ಲಿ ಗಡಿಗಳು, ಗಡಿಗಳ ಅಧೀನದಲ್ಲಿ ಹಗ್ಗಡಲುಗಳೆಂಬ ಸಣ್ಣ ಘಟಕಗಳಿರುತ್ತವೆ.



ಈ ರೀತಿ ವಿಗಂಡನೆಗೊಂಡಂತಹ ಘಟಕಗಳನ್ನು ನೋಡಿಕೊಳ್ಳುವ ಮತ್ತು ಅಲ್ಲಿ ತಲೆದೂರಬಹುದಾದ ವಿವಾದಗಳು ಮತ್ತು ನ್ಯಾಯ ತೀರ್ಮಾನಗಳನ್ನು ಮಾಡುವಲ್ಲಿ ಮುಖ್ಯವಾಗಿ ಯಜಮಾನರು, ಅಣೇಕಾರರು, ಮತ್ತು ಮುದ್ರೆಗಳೆಂಬುವ ಮೂವರು ಅಧಿಕಾರಿಗಳು ಮುಖ್ಯಪಾತ್ರವನ್ನು ವಹಿಸಿರುತ್ತಾರೆ ಇವರು ನ್ಯಾಯ ತೀರ್ಮಾನದಲ್ಲಿ ತಮ್ಮದೇಯಾದಂತಹ ಜವಾಬ್ದಾರಿಯುತ ಕೆಲಸಗಳನ್ನು ನಿರ್ವಹಿಸುತ್ತಾರೆ. ಯಜಮಾನರು ಇವರು ಕುಲದ ಮುಖಂಡರು ಇವರ ಅಧೀನದಲ್ಲಿ ಅಥವಾ ನಾಯಕತ್ವದಲ್ಲಿ ಅಣೇಕಾರರು, ಮುದ್ರೆಗಳು ಬರುತ್ತಾರೆ. ಇಲ್ಲನಿ ಅಣೆಕಾರರು ಬುಡಕಟ್ಟುಗಳ ಪ್ರತಿನಿಧಿಯಾಗಿ ಕಾರ್ಯ ನಿರ್ವಹಿಸುತ್ತಾರೆ. ಅದೇ ರೀತಿ ಮುದ್ರೆಗಳು ಇವರು ಅಮೀನರುಗಳು ಅಂದರೆ ಯಾವುದೇ ಸುದ್ದಿಯನ್ನು ಒಂದು ಕಡೆಯಿಂದ ಮತ್ತೊಂದು ಕಡೆಗೆ ಸುದ್ದಿಯನ್ನು ರವಾನಿಸುವಂತಹವರಾಗಿರುತ್ತಾರೆ. ಒಂದು ಅಂದಾಜಿನ ಪ್ರಕಾರ ಇಡೀ ರಾಜ್ಯದಲ್ಲಿ 1000 ಮಂದಿ ಯಜಮಾನರಿದ್ದಾರೆಂದು 4 ಸಾವಿರ ಮಂದಿ ಆಣೆಕಾರರಿದ್ದಾರೆಂದು ಮತ್ತು 2 ಸಾವಿರ ಮಂದಿ ಮುದ್ರೆಗಳಿದ್ದಾರೆಂದು ತಿಳಿದು ಬರುತ್ತದೆ. ಇವರ ಅಧಿಕಾರವು ವಂಶ ಪಾರಂಪರ್ಯವಾಗಿ ಸಾಗಿ ಬರದೆ ಸಮರ್ಥರಿಗೆ ಹುದ್ದೆಯನ್ನು ನೀಡುತ್ತಾರೆ. ಮತ್ತು ಇಂತಹ ವ್ಯಕ್ತಿಗಳು ಯಾವುದೇ ಕಾರಣಕ್ಕೂ ವಿಧುರನಾಗಿರುವಂತವರಾಗಿರಬಾರದೆಂಬ ನಿಯಮವಿದೆ. ಏಕೆಂದರೆ ಇಂತಹವರು

ತಿಗಳರ ಕುಲದೇವರಾದದಂತಹ ಅಗ್ನಿ ಬನ್ನಿರಾಯನಿಗೆ ಧೂಪವನ್ನು ಹಾಕುವಂತಿಲ್ಲ ಎಂಬುದು ಅವರ ನಂಬಿಕೆಯಾಗಿದೆ.

ಇವರು ತಮ್ಮ ತಮ್ಮ ಜವಾಬ್ದಾರಿಯನ್ನು ಅರಿತು ಯಜಮಾನನ ನಾಯಕತ್ವದಲ್ಲಿ ಮದುವೆ, ಮುಂಜಿ, ಸಂಸ್ಕಾರ, ನ್ಯಾಯ ಪಂಚಾಯ್ತಿ, ತಿಥಿ ಕಾರ್ಯಗಳನ್ನು ನೆರವೇರಿಸುತ್ತಾರೆ. ಮತ್ತು ವಿವಾಹ, ಸಂಸ್ಕಾರ ಹಾಗೂ ತಿಥಿ ಆಚರಣೆಗಳಲ್ಲಿ ಪುರೋಹಿತರನ್ನ ಆಹ್ವಾನಿಸುವುದಿಲ್ಲ. ಅಂತಹ ಸಂದರ್ಭದಲ್ಲಿ ಇವರೇ ನಿಂತು ಎಲ್ಲಾ ಕೆಲಸಗಳನ್ನು ಮಾಡುತ್ತಾರೆ.

ನ್ಯಾಯ ತೀರ್ಮಾನಿಸುವ ಬಗೆ:

ಯಾವುದೇ ಒಂದು ಪುಟ್ಟಗ್ರಾಮದಲ್ಲಿ ತಲೆದೂರಬಹುದಾದಂತಹ ವ್ಯವಹಾರ, ಜಮೀನು, ಹಣಕಾಸು ದಾಂಪತ್ಯ, ಸಂಬಂಧಪಟ್ಟ ವಿವಾದಗಳನ್ನು ಊರಿನ ಯಜಮಾನರು ರಾಶಿ ಸೇರಿಸಿ ಬಗೆಹರಿಸುತ್ತಾರೆ. (ರಾಶಿ ಎಂದರೆ ಒಂದು ಗ್ರಾಮದ ಮಟ್ಟದಲ್ಲಿನ ಎಲ್ಲಾ ಸದಸ್ಯರನ್ನೊಳಗೊಂಡಂತಹ ಕೂಟ) ಆಕಸ್ಮಿಕವಾಗಿ ನ್ಯಾಯ ತೀರ್ಮಾನವಾಗದೆ ಮುಂದುವರೆದಲ್ಲಿ ಅದು ಗಡಿಗೆ ಬರುತ್ತದೆ. ಗಡಿಯಲ್ಲಿಯೂ ಬಗೆ ಹರಿಯದಂತಹ ನ್ಯಾಯ ದೇಶಕ್ಕೆ ಬರುತ್ತದೆ. ದೇಶದಲ್ಲಿ ಬಗೆ ಹರಿಯದಂತಹ ನ್ಯಾಯ ಪೂರ್ಣ ಪ್ರಮಾಣದ ಘಟಕವಾದಂತಹ ಕಟ್ಟೆಗೆ ಬರುತ್ತದೆ. ಕಟ್ಟೆಯಲ್ಲಿ ಬಗೆ ಹರಿಯದ ನ್ಯಾಯ ಅಖಂಡ ಸಭೆಗೆ ಅಂದರೆ ನಾಲ್ಕು ಕಟ್ಟೆ ಸಮಾವೇಶಕ್ಕೆ ಬರುತ್ತದೆ. ಇಲ್ಲಿ ಎಲ್ಲಾ ಘಟಕದ ಯಜಮನರು ಅಣೆಕಾರರು, ಮುದ್ರೆಗಳು ಹಾಗೂ ಸಂಬಂಧಪಟ್ಟಂತಹ ಸದಸ್ಯರೆಲ್ಲರೂ ಸೇರಿರುತ್ತಾರೆ. ಮತ್ತು ಇದೇ ಅತ್ಯಂತ ಕೊನೆಯ ಘಟ್ಟವಾಗಿರುವುದರಿಂದ ಇಲ್ಲಿ ಆದದ್ದೇ ಅಂತಿಮ ತೀರ್ಮಾನವಾಗಿರುತ್ತದೆ.

ನ್ಯಾಯಸ್ಥಾನ:

ಪ್ರತಿಯೊಂದು ಗ್ರಾಮದಲ್ಲಿಯೂ ಕೂಡ ಕುಲದ ಮನೆಗಳಿವೆ. ಇಂತಹ ಸ್ಥಳದಲ್ಲಿ ಮತ್ತು ಊರ ಮುಂದಿನ ಅರಳೀಕಟ್ಟೆ ತೋಪುಗಳಲ್ಲಿ ನ್ಯಾಯದ ಸಮಾವೇಶ ಸೇರುವುದುಂಟು, ಕುಲದ ಸಮಾವೇಶಕ್ಕೆ ಅಲ್ಲಿ ಬಂದವರಿಗೆ ಊಟ, ನೀರು, ನೆರಳು, ವಿಳ್ಯ ಮುಂತಾದ ಸವಲತ್ತುಗಳನ್ನ ಅಲ್ಲಿಯ ಜನರೇ ನೀಡುತ್ತಿದ್ದರು. ಆ ಸ್ಥಳಕ್ಕೆ ಬಂದ ಕುಲಾಧಿಪತಿಗಳು ಮತ್ತು ಜನರಿಗೆ ತಳಿಕಳಸ– ಶರಣುಸಂಬಂಧ ಸ್ವಾಗತ ನೀಡಲಾಗುವುದು. ಕಾಲಿಗೆ ನೀರನ್ನು ಹಾಕಿ, ಕಾಲು ಒರೆಸಿ, ಕುಲಸ್ವಾಮಿಗಳನ್ನು ಸ್ವಾಗತಿಸಲಾಗುವುದು.

ಎಲ್ಲರೂ ಸೇರಿದ ನಂತರ ನ್ಯಾಯ ಸಮಾವೇಶದಲ್ಲಿ ಧರ್ಮರಾಯನ ಗದ್ದುಗೆ ಹಾಕಿ, ರಾಶಿಯ ಅನುಮತಿ ಪಡೆದು ನ್ಯಾಯ ಬಗೆ ಹರಿಸುವ ಕಾರ್ಯ ಆರಂಭವಾಗುವುದು ಅಲ್ಲಿ ಮಧ್ಯಪಾನ ಧೂಮಪಾನ ಮಾಡಿದವರಿಗೆ ಅವಕಾಶವಿರುವುದಿಲ್ಲ. ನಂತರ ಮುದ್ರೆ ರಾಶಿಯ ಅನುಮತಿಯನ್ನು ಪಡೆದು ರೀತಿ ರಿವಾಜುಗಳನ್ನು ಆದೇಶಿಸುವನು ಅಲ್ಲಿ ಸೇರಿದ ಇಡಿ ರಾಶಿಯು ವಿಷಯದಲ್ಲಿ ಮುಕ್ತವಾಗಿ ಮಾತನಾಡಬಹುದು. ಆದರೆ ಅವರು ಕ್ರಮವರಿತು ಎದ್ದುನಿಂತು ಒಬ್ಬರಾದ ನಂತರ ಮತ್ತೊಬ್ಬರಂತೆ ರಾಶಿಯ ಅನುಮತಿಯನ್ನು ಪಡೆದು ಮಾತನಾಡಬೇಕಿತ್ತು ನಂತರ ಕೊನೆಯಲ್ಲಿ ಎಲ್ಲ ಚರ್ಚೆಯು ಮುಗಿದ ಮೇಲೆ ನಂತರ ಯಜಮಾನ ತೀರ್ಪನ್ನು ಹೇಳಿ ತಪ್ಪಿಸ್ಥರಿಗೆ ಶಿಕ್ಷೆಯನ್ನು ವಿಧಿಸಿ ತಪ್ಪಿನ ವೀಳ್ಯೆವನ್ನ ಅವನಿಂದ ಕೊಡಿಸುತ್ತಿದ್ದರು. ಇದಕ್ಕೆ ಬದಲಾಗಿ ತೀರ್ಪಿಗೆ ತಲೆಭಾಗದ ಉದ್ಧಟವಾದಿಗಲನ್ನ ಅನಾಮತ್ತಿನಲ್ಲಿಡಲಾಗುವುದು. ಆತ ಶರಣು ಬಂದಾಗ ಮಾತ್ರ ಒಪ್ಪಿ ಅವನ ಸ್ಥಾನಮಾನಗಳನ್ನು ನೀಡಲಾಗುತ್ತಿತ್ತು. ನಂತರ ಅವನ ಕಷ್ಟ ಸುಖದಲ್ಲಿ ಬಾಗಿಯಾಗಲು ಅವಕಾಶ ನೀಡುವುದು.

ಅಂಚೆ ಪದ್ದತಿ:

ನ್ಯಾಯ ಪಂಚಾಯತಿಗಳು, ಕುಲದೇವತಾ ಕಾರ್ಯಗಳು ವಿಶೇಷ ಸಭೆ ಸಮಾರಂಭಗಳ ನಿಮಿತ್ತ ಸುದ್ದಿ ತಲುಪಿಸಲು ಅಥವಾ ಕರೆಕೊಡಲು ತಿಗಳ ಸಮುದಾಯದಲ್ಲಿ ಸರಳವೂ, ಶ್ರೇಷ್ಠ ಕಾರಿಯೂ, ಸುಲಭ ವೆಚ್ಚದಲ್ಲಿ ಆಗಬಹುದಾದ ಅಂಚೆ ಪದ್ಧತಿ ಇದೆ.

ಇಲ್ಲಿ ಸುದ್ದಿಧೂತನಾಗಿ ಮುದ್ರೆ ಕಾರ್ಯ ನಿರ್ವಹಿಸುವನು. ಸುದ್ದಿಯು ಈ ರೀತಿ ಪ್ರಸರಣಗೊಳ್ಳುತ್ತದೆ. ಅಂದರೆ ಅದು ಪೂರ್ಣಪ್ರಮಾಣದ ಕಟ್ಟೆಯಿಂದ ಹಿಡಿದು ಗ್ರಾಮಮಟ್ಟದ ರಾಶಿಯವರೆಗೂ ಸುದ್ದಿ ಹಂತ ಹಂತವಾಗಿ ಸಾಗುತ್ತದೆ.

ಕಟ್ಟೆಯಿಂದ –> ದೇಶಕ್ಕೆ –> ಗಡಿಗಳು –> ಹಗ್ಗಡಲುಗಳು –> ರಾಶಿಗೆ

ಮುದ್ರೆಗಳು ಆಯಾ ಕೇಂದ್ರದಿಂದ ಮುಂದಕ್ಕೆ ಆಯಾ ಮುದ್ರೆಗಳು ದಿನಬೆಳಗಾಗುವುದರೊಳಗಾಗಿ ಸುದ್ದಿ ರವಾನಿಸುತ್ತಾರೆ. (ವ್ಯಕ್ತಿಯ ಸಂಪರ್ಕದಿಂದ) ಹೀಗೆಯೇ ಹಗ್ಗಡಲಿನಿಂದ ಗಡಿಗೆ, ದೇಶಕ್ಕೆ, ಕಟ್ಟೆಗೆ ಸುದ್ದಿಯನ್ನು ರವಾನಿಸಲಾಗುವುದು.

ಮುದ್ರೆಗಳ ವಿಶ್ವಾಸನಾರ್ಹತೆಯು ಎಂದು ಪ್ರಶ್ನಿಸಲಾಗುವುದಿಲ್ಲ. ಅಷ್ಟು ನಿಖರವಾಗಿರುತ್ತದೆ. ವ್ಯವಸ್ಥೆ ಆಯಾ ಹಂತದ ಮುದ್ರೆಗಳಿಗೆ ಅಲ್ಲಿಯ ಘಟಕದ ಯಜಮಾನ ಪ್ರಯಾಣ ಭತ್ಯೆ ನೀಡುವನು

ಯಾವುದೇ ವ್ಯಕ್ತಿಯು ಮುದ್ರೆಯು ತಿಳಿಸಿದ ವಿಷಯಕ್ಕೆ ತಲೆಭಾಗಿ ಹಾಜರಾಗಿದ್ದರೆ ಮತ್ತೊಮ್ಮೆ ಇಬ್ಬರು ಮುದ್ರೆಯನ್ನ ಕಳುಹಿಸುವರು. ಇಂತಹ ಪದ್ದತಿಗೆ ಜೋಡಿ ಮುದ್ರೆ

ಕಳಿಸುವುದು ಎನ್ನುತ್ತಾರೆ. ಇವರು ನೀಡಿದ ಕರೆಯನ್ನು ಉಲ್ಲಂಘಿಸುವ ಅಧಿಕಾರ ಅಥವಾ ಎದೆಗಾರಿಕೆ ಯಾವ ರಾಶಿ ಕುಲಾಧಿಪತಿಗಳಿಗೂ ಇರುವುದಿಲ್ಲ.

ಶೈಕ್ಷಣಿಕವಾಗಿ ತಿಗಳರ ಸಮುದಾಯವು ಬಹಳ ಶ್ರೇಷ್ಟತರದ್ದಾಗಿದೆ. ಅಂದರೆ ತಿಗಳರು ಅಕ್ಷರ ಸಂಸ್ಕೃತಿಯಿಂದ ದೂರವಿದ್ದರೂ ಅಥವ ಇವರಲ್ಲಿ ಅಕ್ಷರ ಜ್ಞಾನವುಳ್ಳವರು ಕಡಿಮೆಯಿದ್ದರೂ ಕೂಡ ತಿಗಳರು ಸಕಲವಿದ್ಯೆ ಪಾರಂಗತರಾಗಿದ್ದರು. ಅಂದರೆ ಇವರು ಪ್ರಾರಂಭದಲ್ಲಿ ರಾವುತರಾಗಿ ಅನೇಕ ಸ್ಥಳೀಯ ಪಾಳೇಗಾರರ ಹಾಗೂ ರಾಜರನ್ನು ಆಶ್ರಯಿಸಿ ಪರ ಆಕ್ರಮಣದ ಕಾಲದಲ್ಲಿ ಯುದ್ದ ಮಾಡುತ್ತಿದ್ದರು. ಇಂತಹ ಯುದ್ಧ ಮಾಡಲು ಬೇಕಾದಂತಹ ಸಕಲ ವಿದ್ಯೆಯಲ್ಲಿ ಪಾರಂಗತರಾಗಿದ್ದರು. ಅಂದರೆ ಕುಸ್ತಿ, ಮಲ್ಲಯುದ್ಧ, ಬಿಲ್ಲುಗಾರಿಕೆ ಮುಂತಾದ ವಿದ್ಯೆ ಬಲ್ಲವರಾಗಿದ್ದರು.

ಅಷ್ಟಲ್ಲದೆ ಅಕ್ಷರ ಜ್ಞಾನವನ್ನು ತೀರಾ ಕಡ ಖಂಡಿತ ತಿರಸ್ಕರಿಸಿರಲ್ಲಿಲ್ಲ ಬದಲಿಗೆ ಬೆರಳೆಣಿಕೆಯಷ್ಟು ಜನ ವಿದ್ಯಾ ಪಾರಂಗತರಾಗಿದ್ದರು. ಮತ್ತು ವ್ಯಾಪಾರಕ್ಕೆ ಬೇಕಾದಂತಹ ಅಕ್ಷರ ಜ್ಞಾನವನ್ನು ಬಲ್ಲಂತರಾಗಿದ್ದರು. ಆದರೆ ಇತ್ತೀಚೆಗೆ ಆಧುನಿಕತೆಯ ಭರಾಟೆಯಲ್ಲಿ ಮುನ್ನುಗ್ಗುವ ಸಲುವಾಗಿ ಎಲ್ಲರೂ ಕೂಡ ವಿದ್ಯಾಭ್ಯಾಸವನ್ನು ಮಾಡುತ್ತಿರುವುದು ಕಂಡು ಬರುತ್ತಿದೆ.

ಅಲ್ಲದೆ ತಮ್ಮ ಮಕ್ಕಳನ್ನು ಅಕ್ಷರಸ್ಥರನ್ನಾಗಿ ಮಾಡಬೇಕೆಂಬ ಹಂಬಲದಿಂದ ಈ ಹಾದಿಯಲ್ಲಿ ಇಂದು ಮುನ್ನಡೆಯುತ್ತಿದ್ದಾರೆ ಇಷ್ಟಾದರೂ ಬೇರೆ ಸಮುದಾಯ ಕೈ ಹೋಲಿಸಿ ನೋಡಿದಾಗ ಇದರ ಮಟ್ಟ ಕಡಿಮೆ ಇದ್ದರೂ ಕೂಡ ಶೈಕ್ಷಣಿಕವಾಗಿ ತಿಗಳರನ್ನು ಮುಂದೆ ತರಬೇಕು ಮತ್ತು ವಿದ್ಯಾವಂತರನ್ನಾಗಿ ಮಾಡಬೇಕೆಂದು ಅಲ್ಪ ಸ್ವಲ್ಪ ಕಲಿತಂತಹ ಅಕ್ಷರಸ್ಥರ ಸಮೂಹ ಒಂದೆಡೆ ಸೇರಿ ಇತ್ತೀಚೆಗೆ ತಿಗಳರ ಕ್ಷೇಮಾಭಿವೃದ್ಧಿ ಸಂಘ ಸಂಸ್ಥೆಗಳನ್ನ ರಚಿಸಿ ಅದರಡಿಯಲ್ಲಿ ಶಿಕ್ಷಣ ಸಂಸ್ಥೆಗಳನ್ನ ಮತ್ತು ವಿದ್ಯಾರ್ಥಿಗಳ ನಿಲಯಗಳನ್ನು ಸ್ಥಾಪಿಸುವುದರ ಮೂಲಕ ವಿದ್ಯಾರ್ಜನೆಗೆ ಪ್ರೋತ್ಸಾಹ ನೀಡುತ್ತಿರುವುದನ್ನ ಕಾಣಬಹುದು ಮತ್ತು ಇವರು

ಮಹಿಳೆಯರ ವಿದ್ಯಾಭ್ಯಾಸಕ್ಕೂ ಕೂಡ ಸಮಾನವಾದಂತಹ ನಿಲುವನ್ನು ಹೊಂದಿದ್ದಾರೆ. ಅಂದರೆ ಸ್ತ್ರೀಯೆಂದರೆ ಮನೆ, ಮನೆಯೆಂದರೆ ಸ್ತ್ರೀಯೆಂಬ ಕಟು ಬಂಧನದಿಂದ ಸ್ತ್ರೀ ಹೊರಬಂದು ಪುರುಷನಷ್ಟೇ ಸಮಾನವಾಗಿ ವಿದ್ಯಾಭ್ಯಾಸ ಕಲಿಯಲು ಈ ಸಮಾಜದಲ್ಲಿ ಅವಕಾಶಗಳನ್ನು ಕಲ್ಪಿಸಿಕೊಟ್ಟಿದ್ದಾರೆ. ಮತ್ತು ಕೊಡುತ್ತಿದ್ದಾರೆ. ಅಂದರೆ ಶೈಕ್ಷಣಿಕವಾಗಿ ತಿಗಳರು ಸಂವೃದ್ಧರು ಮತ್ತು ಆ ಹಾದಿಯಲ್ಲೇ ಸದಾ ಚಲನೆ ಶೀಲರಾಗಿ ನಡೆಯುತ್ತಿದ್ದಾರೆಂದು ಹೇಳಬಹುದು.

ಅಧ್ಯಾಯ ೦೫

ತಿಗಳರ ವಿವಾಹ ಪದ್ಧತಿ

ಅಧ್ಯಾಯ – 05

ತಿಗಳ ವಿವಾಹ ಪದ್ಧತಿ

ಒಂದು ಜನಾಂಗ ವಸ್ತು ಸಂಸ್ಕೃತಿಯನ್ನು ಅವರ ಉಡುಗೆ ತೊಡುಗೆ ವಾಸ್ತು ಸ್ವರೂಪಗಳು ತಿಳಿಸಿದರೆ, ಆಚರಣೆಗಳ ಹಿಂದಿರುವ ಅವರ ನಂಬಿಕೆಗಳು ಯಾವ ಸ್ವರೂಪದ್ದಾಗಿರುತ್ತವೆ ಎಂಬ ಅಂಶ ಸ್ಪಷ್ಟವಾಗುತ್ತದೆ. ಪ್ರೊ. ಡೂಮವಿಲೆ ಎಂಬ ಶಿಕ್ಷಣ ತಜ್ಞ ಶಿಕ್ಷಣದ ಬಗ್ಗೆ "ಶಿಕ್ಷಣವು ವ್ಯಕ್ತಿಯ ಹುಟ್ಟಿನಿಂದ ಹಿಡಿದು ಚಟ್ಟದ ವರೆಗೆ ನಡೆಯುವ ಕ್ರಿಯೆ" (10) ಎಂದಿದ್ದಾರೆ. ಇನ್ನೂ ತಿಗಳ ಜನಾಂಗದ ನಂಬಿಕೆಗಳು ಮತ್ತು ಆಚರಣೆಗಳಿಗೆ ಅನ್ವಯಿಸಿ ಹೇಳುವುದಾದರೆ ಇವರಲ್ಲಿ ಸಾಂಪ್ರದಾಯಿಕ ಆಚರಣೆಗಳು ವ್ಯಕ್ತಿಯ ಜನನ ಪೂರ್ವದಿಂದ ಪ್ರಾರಂಭವಾಗಿ ಮರಣದ ನಂತರದವರೆವಿಗೂ ಮುಂದುವರೆಯುತ್ತವೆ ಎಂದು ಹೇಳಲಾಗಿದೆ.

ಒಂದು ನಿರ್ದಿಷ್ಟ ಜಾತಿ ಅಥವಾ ಉಪಜಾತಿಗಳಲ್ಲಿ ಬಳಕೆಯಲ್ಲಿರುವ ಆಚರಣೆಗಳ ಹುಟ್ಟಿಗೆ ಆರ್ಥಿಕ, ಸಾಮಾಜಿಕ, ಭಾವನಾತ್ಮಕವಾದ ಅಂಶಗಳು ಕಾರಣವಾಗಿರುತ್ತವೆ. ಒಂದು ಜನಾಂಗದ ಪ್ರಮುಖ ಅಂಶಗಳಾಗಿ ಸಂಪ್ರದಾಯ ಮತ್ತು ಆಚರಣೆಗಳು ರೂಪ ತಳೆಯುತ್ತವೆ. "ಮನುಷ್ಯನ ಮನಸ್ಸು ಹೇಗೆ ಪ್ರವರ್ತಿಸಬಹುದೆನ್ನುವುದನ್ನು ಆಚರಣೆಗಳಲ್ಲಿ ವ್ಯಕ್ತಗೊಳ್ಳುತ್ತವೆ. ಆಹಾರ ಸಂಗ್ರಹಣೆ, ಬೇಟೆ, ಪಶುಪಾಲನೆ, ಕೃಷಿ ಹೀಗೆ ಮಾನವನ ಆರ್ಥಿಕ ಚಟುವಟಿಕೆಯ ವಿವಿದ ಹಂತಗಳಲ್ಲಿ ಆಚರಣೆಗಳು ಹುಟ್ಟಿಕೊಂಡಿವೆ. ಇಂತಹ ಆಚರಣೆಗಳು ಒಂದು ಜಾತಿಯ ಜೀವಂತಿಕೆಯ ಲಕ್ಷಣಗಳಾಗಿರುತ್ತವೆ. ಹುಟ್ಟು ಸಾವಿನ ಸಂದರ್ಭದಲ್ಲಿ ಯಾವುದೇ ಸಮುದಾಯದ ಆಚರಣೆಯ ವಿಧಿ ವಿಧಾನವು ಬಹಳ ಮುಖ್ಯವಾಗಿರುತ್ತದೆ ಜನನದ ಸಂಸ್ಕಾರಗಳು, ಹೆಣ್ಣು ಬೆಳೆದು ದೊಡ್ಡವಳಾಗಿ ಮೈ ನೆರೆದಾಗ ನಡೆಸುವ ಆಚರಣೆಗಳು,

---

10) ಪ್ರಗತಿ ಶೀಲ ಭಾರತದಲ್ಲಿ ಶಿಕ್ಷಣ, ಲೇ.ಎಸ್.ಪಿ.ಯಾದವಾಡ, ಪು.ಸಂ.5

[illegible]

ಬಸುರಿತನದ ಆಚರಣೆಗಳು, ಫಲವಂತಿಕೆಯ ಆಚರಣೆಗಳಾಗಿ ವಂಶಾಭಿವೃದ್ಧಿಯ ಸಂಕೇತವನ್ನು ಸಾದರ ಪಡಿಸುತ್ತವೆ. ಮತ್ತು ಮರಣದ ಆಚರಣೆಗಳು ಜೀವನದ ಸಾರ್ಥಕತೆಯನ್ನು ಅವರು ಮಾಡುವಂತಹ ಆಚರಣೆಗಳಿಂದ ತಿಳಿಸುತ್ತದೆ ಮತ್ತು ಅದು ಕೊನೆಯನ್ನು ಸಾರ್ಥಕವಾದ ರೀತಿಯಲ್ಲಿ ಕೊಳಿಸುಕ್ಕವೆ. ಈ ಎಲ್ಲಾ ಆಚರಣೆಗಳು ತಿಗಳ ಜನಾಂಗದವರಲ್ಲೂ ಕೂಡಾ ಹಿಂದಿನಿಂದಲೂ ಜೀವಂತವಾಗಿ ಸಾಗಿ ಬರುತ್ತಾ ಇಂದು ಕೂಡ ಚಾಲ್ತಿಯಲ್ಲಿವೆ.

ಯಾವುದೇ ಸಮುದಾಯದಲ್ಲಿ ಹುಟ್ಟು ಮಹತ್ವದ ಸ್ಥಾನವನ್ನು ಪಡೆಯುತ್ತದೆ. ಏಕೆಂದರೆ ಇದು ಅನಿವಾರ್ಯವಾದಂತಹ ಕ್ರಿಯೆ ಮನುಷ್ಯನ ಹುಟ್ಟುವಿಕೆ ತಮ್ಮ ಕುಟುಂಬದಲ್ಲೆಲ್ಲಾ ಸಂತೋಷಕರವಾದಂತಹ ವಾತಾವರಣವನ್ನು ಸೃಷ್ಟಿಸುತ್ತದೆ. ಈ ದಿಸೆಯಲ್ಲಿ ಅನೇಕ ಆಚರಣೆಗಳು ನಡೆಯುತ್ತವೆ. ತಿಗಳ ಜನಾಂಗದಲ್ಲಿ ಇಂತಹ ಜನನದ ಸಂಸ್ಕಾರಗಳು ಹೆಣ್ಣು ಗರ್ಭಿಣಿಯಾದಂದಿನಿಂದಿಡಿದು ಮಗುವಿನ ನಾಮಕರನ ಕೇಶ ಮುಂಡನ ಮಾಡಿಸಿ ತನ್ನ ಮನೆಗೆ ಹಿಂತಿರುಗುವವರೆಗೆ ನಡೆಯುತ್ತವೆ. ಅಂದರೆ ಇವು ಒಂದು ವರ್ಷಗಳ ಕಾಲವಧಿಯವರೆವಿಗೂ ನಡೆಯುತ್ತವೆ. ಅಂದರೆ ಇವು ಒಂದು ವರ್ಷಗಳ ಕಾಲವಧಿಯರೆವಿಗೂ ನಡೆಯುತ್ತವೆ. ಇವರಲ್ಲಿ ಚೊಚ್ಚಲ ಹೆರಿಗೆ ತನ್ನ ತವರು ಮನೆಯಲ್ಲಿಯೇ ನಡೆಯಬೇಕೆಂಬ ನಿಯಮವಿದೆ. ಹೆಣ್ಣಿನ ಜೀವನ ಸಾರ್ಥಕತೆ ಹೊಂದುವುದು ಅವಳು ತಾಯ್ತನವನ್ನು ಪಡೆದಾಗ ಅಂದರೆ ಹೆಣ್ಣಿಗೆ ಮದುವೆ ಎಷ್ಟು ಮುಖ್ಯವೋ ತಾಯ್ತನದ ಹಿರಿಮೆಯೂ ಕೂಡ ಅಷ್ಟೆ ಮುಖ್ಯವಾಗುತ್ತದೆ ಆದ್ದರಿಂದ ಇಂತಹ ಸಂದರ್ಭದಲ್ಲಿ ಹೆಣ್ಣಿಗೆ ಗೌರವ ಹೆಚ್ಚುವುದಲ್ಲದೆ ಅವಳನ್ನ ಆದಷ್ಟು ಕಠಿಣಕರವಾದ ಕೆಲಸ ಕಾರ್ಯಗಳಿಂದ ಆದಷ್ಟು ವಿಶ್ರಾಂತಿಯನ್ನ ನೀಡಿ ಹೆಚ್ಚು ಹೆಚ್ಚು ಸಂತೋಷಕರವಾಗಿರುವಂತೆ ನೋಡಿಕೊಳ್ಳುತ್ತಾರೆ. ಹೆಣ್ಣಿನ ತಾಯ್ತನದ ಸಂತೋಷವನ್ನ ಸೀಮಂತ ಮಾಡುವುದರ ಮುಖಾಂತರ ಪ್ರಾರಂಭಿಸಿ ಸಂಭ್ರಮಿಸುತ್ತಾರೆ.

ತಿಗಳ ಜನಾಂಗದಲ್ಲಿ ಗರ್ಭಿಣಿ ಸ್ತ್ರೀಗೆ ನಡೆಸುವ ಉಪಚಾರಗಳೂ ಆಚರಣೆಗಳೂ ಅಷ್ಟೆ ವಿಶಿಷ್ಟವಾಗಿವೆ. ಸಾಮಾನ್ಯವಾಗಿ ಈ ಕಾರ್ಯವನ್ನ ಗರ್ಭಿಣಿ ಸ್ತ್ರೀ ಒಂಬತ್ತು ತಿಂಗಳು ತುಂಬಿದಂತಹ ಮತ್ತು ಬಾಣಂತನಕ್ಕೆ ತನ್ನ ತವರು ಮನೆಗೆ ಕರೆದುಕೊಂಡು ಬರುವಂತಹ ಸಂದರ್ಭದಲ್ಲಿ ಮಾಡುತ್ತಾರೆ. ಇಂತಹ ಕಾರ್ಯವನ್ನ ಮಾಡಲು ಶುಭದಿನವನ್ನ ಜೋತಿಷ್ಯರಿಂದ ತಿಳಿದು ಅಂದು ಆ ಕಾರ್ಯಕ್ಕಾಗಿ ಸಕಲ ಸಿದ್ದತೆಯೊಂದಿಗೆ ಮಗಳ ಮನೆಗೆ ಹೋಗುತ್ತಾರೆ. ಅಲ್ಲಿ ತಾವೇ ಅಂದು ಊಟದ ಸಿದ್ದತೆಯನ್ನು ಮಾಡಿ, ಊಟಕ್ಕೆ ಮೊದಲು ಗರ್ಭಿಣಿಗೆ ವಸಗೆ ಹಾಕುವ ಶಾಸ್ತ್ರವನ್ನ ಮಾಡುತ್ತಾರೆ. ಹೆಣ್ಣಿನ ತಾಯಿಯ ಕಡೆಯವರು ತಂದಿರುವಂತಹ ಹೊಸ ಸೀರೆ ರವಿಕೆಯನ್ನ ಉಡಿಸಿ, ಕೈತುಂಬ ಹಸಿರು ಬಳೆಯನ್ನ ತೊಡಿಸಿ, (ಕೆಲವರು ಒಡವೆಗಳನುನ್ನ ತೊಡಿಸುತ್ತಾರೆ.) ಅರಿಸಿನ ಕುಂಕುಮವಿಟ್ಟು, ಕಡಲೆ, ಬೆಲ್ಲ, ಕೊಬ್ಬರಿ, ಉತ್ತುತ್ತಿ, ಬಾಳೆಹಣ್ಣು, ಇನ್ನಿತರ ಹಣ್ಣುಗಳೊಂದಿಗೆ ಹೆಣ್ಣಿಗೆ ಮಡಿಲು ತುಂಬುತ್ತಾರೆ ಈ ಶಾಸ್ತ್ರವನ್ನ ಮೂರು ಅಥವಾ ಐದು ಮಂದಿ ಇದೇ ರೀತಿ ಮಾಡುತ್ತಾರೆ ಇಂತಹ ಸಂದರ್ಭದಲ್ಲಿ ಹೆಣ್ಣಿನ ಸೊಬಗು, ಸೌಂದರ್ಯವನ್ನ ಕುರಿತಂತೆ ಮತ್ತು ಮಗು ಹುಟ್ಟಲಿರುವ ಮಗುವಿನ ಸೌಂದರ್ಯವನ್ನ ಕುರಿತಂತೆ ಸೋಬಾನೆ ಪದಕಟ್ಟಿ ಹಾಡಿ ಸಂತೋಷ ಪಡುತ್ತಾರೆ ಮಾರನೆಯ ದಿನ ತನ್ನ ಮನೆಗೆ ಕರೆದೊಯ್ಯುತ್ತಾರೆ. ಮತ್ತು ಮಗು ಜನಿಸಿದ ನಂತರ ಒಭತ್ತು ತಿಂಗಳವರೆಗೆ ಬಾಣಂತನ ಮಾಡಿ ಮಗಳು ಮತ್ತು ಮಗುವನ್ನು ಮತ್ತೆ ಶಾಸ್ತ್ರೋಕ್ತವಾಗಿ ಕಳುಹಿಸಿಕೊಡುತ್ತಾರೆ.

ಮನೆಗೆ ಕರೆತಂದಂತಹ ಮಗಳಿಗೆ ಬಸರಿ ಬಯಕೆಯೆಂದು ಆಕೆ ಇಷ್ಟ ಪಡುವಂತಹ ತಿಂಡಿ–ತಿನಿಸುಗಳನ್ನ ಕೇಳಿ ಮಾಡಿಕೊಡುತ್ತಾರೆ. ಕಾರಣ ಬಸುರಿ ಬಯಕೆಯಿಟ್ಟರೆ ಹೆರಿಗೆ ಬೇಗ ಆಗುವುದಿಲ್ಲವೆಂಬ ನಂಬಿಕೆಯನ್ನ ಹೊಂದಿರುತ್ತಾರೆ. ಮತ್ತು ಗರ್ಭಿಣಿಯಾಗಿದ್ದಾಗಲೇ ಕೆಮ್ಮಣ್ಣನ್ನ ತಿನ್ನಿಸುತ್ತಾರೆ. ಮತ್ತು ಕೇಸರಿಯನ್ನು ಹಾಲಿನಲ್ಲಿ ಹಾಕಿ ಕುಡಿಸುತ್ತಾರೆ ಇದು ಹುಟ್ಟುವ ಮಗು ಕೆಂಪಾಗಿ ಹುಟ್ಟುತ್ತದೆ ಎಂಬ ನಂಬಿಕೆಯಿಂದ ಮಾಡುತ್ತಾರೆ.

ತಮ್ಮ ಮಗಳಿಗೆ ಸುಸೂತ್ರವಾಗಿ ಹೆರಿಗೆಯಾಗಲೆಂದು ದೇವರಲ್ಲಿ ಗರ್ಭಿಣಿಯ ತಂದೆ ತಾಯಿಗಳು ಹರಕೆ ಕಟ್ಟುತ್ತಾರೆ. ಹೆರಿಗೆ ನೋವು ಕಾಣಿಸಿಕೊಂಡಾಗ ಸೂಲಗಿತ್ತಿಯನ್ನು ಕರೆತರುವರು. ಈಕೆಗೆ ಹೆರಿಗೆ ಮಾಡಿಸಲು ಇಂತಿಷ್ಟೆ ಹಣ ನೀಡಬೇಕು ಎಂಬ ನಿಯಮವಿಲ್ಲ. ಕೆಲವು ಮನೆಗಳಲ್ಲಿ ಹಿರಿಯ ಅನುಭವದ ಮಹಿಳೆಯರೇ ಹೆರಿಗೆ ಮಾಡಿಸುತ್ತಾರೆ. ಹೆರಿಗೆ ನಂತರ ವಿಷಯವನ್ನು ಗಂಡನ ಊರಿನವರಿಗೆ ಹೇಳಿ ಕಳಿಸುತ್ತಾರೆ ಹೆರಿಗೆ ನಂತರ ಒಂಬತ್ತು ದಿನಗಳನ್ನು ಸೂತಕದ ದಿನಗಳೆಂದು ಕರೆಯುತ್ತಾರೆ. ಈ ಸೂತಕ ತವರಿನ ಹಾಗೂ ಗಂಡನ ಮನೆಯವರಿಗೂ ಸಮಾನವಾಗಿ ಅನ್ವಯವಾಗುತ್ತದೆ. ಸೂತಕದ ದಿನಗಳಲ್ಲಿ ಪೂಜೆ, ಮೊದಲಾದ ಮಂಗಳ ಕಾರ್ಯವನ್ನ ಮಾಡುವಂತಿಲ್ಲ. ಮಗು ಜನಿಸಿದ ಒಂಬತ್ತನೆಯ ದಿನ ಸೂತಕವನ್ನು ಕಳೆಯುವ ಶಾಸ್ತ್ರವನ್ನು ಮಾಡುತ್ತಾರೆ ಅಂದು ನೀರಾಕುವ ಶಾಸ್ತ್ರವೆಂದು ಮೊದಲನೇ ಬಾರಿ ಹೆರಿಗೆಯಾದ ನಂತರ ಮಗು ಮತ್ತು ತಾಯಿಗೆ ಸ್ನಾನ ಮಾಡಿಸುತ್ತಾರೆ ಸ್ನಾನ ಮಾಡುವ ನೀರಿಗೆ ಔಷಧಿ ಗುಣವುಳ್ಳ ಸೊಪ್ಪುಗಳಾದ ಬೇವು, ಕಿತ್ತಳೆ, ಎಳ್ಳಿ, ನಿಂಬೆ, ಹರಿಶಿಣ ಮುಂತಾದ ಸೊಪ್ಪನ್ನು ಹಾಕಿರುತ್ತಾರೆ. ಸ್ನಾನಕ್ಕೆ ಮೊದಲು ಅರಿಶಿನ, ಓಂಕಾಳುಗಳನ್ನ ಮೈಗೆ ಮತ್ತು ತಲೆಗೆ ಎಣ್ಣೆಯನ್ನು ಹಚ್ಚುತ್ತಾರೆ. ಈ ರೀತಿ ಮಾಡುವುದರಿಂದ ನವೆ, ಸನ್ನಿಗಳು ದೂರ ಮಾಡಬಹುದೆಂದು ಈ ರೀತಿ ಮಾಡುತ್ತಾರೆ.

ಆ ದಿನ ಗೋವಿನ ಗಂಜಲವನ್ನ ಮನೆಗೆಲ್ಲ ಹಾಕಿ ನೆಲ ಮನೆಯನ್ನೆಲ್ಲಾ ನೀರಿನಿಂದ ತೊಳೆದು ಶುಚಿಗೊಳಿಸುತ್ತಾರೆ. ಮಗು ಮತ್ತು ತಾಯಿಗೆ ವಿಭೂತಿ ಇಟ್ಟು ಸೂತಕ ತೆಗೆಯುವ ಶಾಸ್ತ್ರವನ್ನ ದಾಸಪ್ಪನ ಸನ್ನಿಧಾನದಲ್ಲಿ ಮುಗಿಸುತ್ತಾರೆ. ನಂತರ ದಾಸಯ್ಯ ತೀರ್ಥವನ್ನ ಮನೆಗೆಲ್ಲ ಹಾಗೂ ತನ್ನ ರಕ್ತ ಸಂಬಂಧಿಗಳಾದ ಅಣ್ಣ ತಮ್ಮಂದಿರ ಮನೆಗೆಲ್ಲಾ ಹಾಕುವುದರ ಮೂಲಕ ಶಾಸ್ತ್ರವನ್ನು ಮುಗಿಸುತ್ತಾನೆ.

ತನ್ನ ರಕ್ತ ಸಂಬಂಧಿಗಳು ಹಾಗೂ ಹತ್ತಿರದ ಸಂಬಂಧಿಕರು ಬಾಣಂತಿಗೆ 'ಅಕ್ಕಿ ತರುವದೆಂದು' ಅಕ್ಕಿ, ಬೆಲ್ಲ, ಕೊಬ್ಬರಿ, ಮಗುವಿಗೆ ಬಟ್ಟೆ ಕೆಲವರು ಚಿನ್ನದ ವಡವೆಗಳನ್ನ

ತಂದುಕೊಟ್ಟು ಮಗುವಿನ ಮತ್ತು ತಾಯಿಯ ಯೋಗಕ್ಷೇಮವನ್ನು ವಿಚಾರಿಸಿಕೊಂಡು ಹೋಗುತ್ತಾರೆ. ಮಗುವಿಗೆ ಒಂಬತ್ತು ತಿಂಗಳು ತುಂಬಿದ ನಂತರ ಅಥವಾ ತನ್ನ ಮನಗೆ ಕರೆದುಕೊಂಡು ಹೋಗುವ ಹತ್ತಿರದ ದಿನಗಳಲ್ಲಿ ಮಗುವಿಗೆ ಹೆಸರಿಡುವ ಅಥವಾ ತನ್ನ ಮನಗೆ ಕರೆದುಕೊಂಡು ಹೋಗುವ ಹತ್ತಿರದ ದಿನಗಳಲ್ಲಿ ಮಗುವಿಗೆ ಹೆಸರಿಡುವ ಅಥವಾ ನಾಮಕರಣ ಶಾಸ್ತ್ರವನ್ನು ಮಾಡುತ್ತಾರೆ ಈ ಸಮಯದಲ್ಲಿ ದಾಸಪ್ಪ ಅಥವಾ ಪುರೋಹಿತನನ್ನು ಕರೆದು ತಂದು ಆತನು ಕೇಳಿದ ಎಲ್ಲಾ ವಸ್ತುಗಳನ್ನು ನೀಡಿ ನಂತರ ಮಗುವಿನ ಸೋದರ ಮಾವನು ಒಂದು ತಟ್ಟೆಯಲ್ಲಿ ತುಂಬಿದ ಅಕ್ಕಿಯ ಮೇಲೆ ಮಗುವಿಗೆ ಇಡುವ ಹೆಸರನ್ನು ಬರೆಯುತ್ತಾನೆ. ಮತ್ತು ಮೂರ ಸಲ ಗಟ್ಟಿಯಾಗಿ ಉಚ್ಚರಿಸುತ್ತಾನೆ ನಂತರ ತೊಟ್ಟಿಲ ಪೂಜೆಯೆಂದು ಸಿಂಗರಿಸಲ್ಪಟ್ಟಂತಹ ತೊಟ್ಟಿಲಿಗೆ ಮಗುವನ್ನು ತಾಯಂದಿರು ಮಲಗಿಸಿ ಪೂಜೆಯನ್ನ ಮಾಡುತ್ತಾರೆ ನಂತರ ಸಿಹಿಯನ್ನು ಹಂಚುತ್ತಾರೆ. ಇವರು ಮಕ್ಕಳಿಗೆ ಇಡುವ ಹೆಸರು ಸಹಜವಾಗಿ ತಮ್ಮ ವಂಶಸ್ಥರ ಅಥವಾ ಮನೆದೇವರುಗಳ ಹೆಸರನ್ನು ಇಡಲಾಗುತ್ತದೆ ಉದಾ: ಧರ್ಮರಾಜ, ನಕುಲ, ಭೀಮಯ್ಯ, ನರಸಿಂಹಯ್ಯ, ಸಿದ್ದಯ್ಯ ಎಂದು ಹೆಣ್ಣುಮಕ್ಕಳಿಗೆ ಕೊತ್ಯಮ್ಮ, ಸಿದ್ದಮ್ಮ, ಲಕ್ಷ್ಮಿದೇವಿ ಇತ್ಯಾದಿ., ಆದರೆ ಇಂದು ಇಂತಹ ಹೆಸರು ಇಡುವುದು ಕಡಿಮೆಯಾಗಿ ಆಧುನಿಕವಾಗಿ ಹೆಸರಲ್ಲಿಯೂ ಬದಲಾವಣೆಯಾಗಿರುವುದು ಕಂಡು ಬರುತ್ತದೆ.

ಈ ಕಾರ್ಯ ಸಾಮಾನ್ಯವಾಗಿ ತನ್ನ ಬಾಣಂತನ ಮುಗಿಸಿಕೊಂಡು ತಾಯಿ–ಮಗು ಗಂಡನ ಮನೆಗೆ ಹೋದಾಗ ನಡೆಯುವಂತಹ ಕಾರ್ಯ. ಅಂದರೆ ಮಗು ವರ್ಷ ತುಂಬುವ ಮೊದಲು ಮಗುವಿನ ಮುಡಿಯನ್ನು ತಮ್ಮ ಮನೆ ದೇವರಿಗೆ ನೀಡುವಂತಹದ್ದು. ಅಂದು ಸ್ನಾನಾದಿಗಳನ್ನ ಮಾಡಿಕೊಂಡು ದೇವಸ್ಥಾನಕ್ಕೆ ಹೋಗಿ ಪೂಜೆ ಪುನಸ್ಕಾರಗಳನ್ನು ಮಾಡಿಸಿಕೊಂಡು ಮಗುವಿಗೆ ದೇವರ ತೀರ್ಥವನ್ನು ಹಾಕಿಸಿಕೊಂಡು, ಕೊಡಬೇಕಾಗಿದ ಕಾಣಿಕೆಯ ನೀಡಿ ನಂತರ ಕ್ಷೌರಿಕನರಿಗೆ ಒಂದು ಸೇರು ಅಕ್ಕಿ, ಬಾಳೆಹಣ್ಣು, ಬೆಲ್ಲ, ಎಲೆ, ಅಡಿಕೆ,

ದಕ್ಷಿಣೆಯೆಲ್ಲವನ್ನು ನೀಡಿ ಮಗುವಿನ ಕೂದಲನ್ನು ತೆಗಸುವಂತಹ ಕಾರ್ಯವಾಗಿರುತ್ತದೆ ಇದು ಬಾಣಂತನದ ಅಂತಿಮ ಘಟ್ಟವಾಗಿರುತ್ತದೆ.

ಇದಕ್ಕೂ ಮೊದಲು ಬಾಣಂತನದಲ್ಲಿರುವ ಮಗು ಮತ್ತು ತಾಯಿಗೆ ಸಂಬಂಧಿಸಿದ ಕೆಲವು ನಂಬಿಕೆಗಳು ಮತ್ತು ಅನುಸರಿಸಬೇಕಾದ ಕೆಲವು ವಿಧಿ ವಿಧಾನಗಳಿವೆ.

1) ಬಾಣಂತಿ ಹೊದದ ಮೂರು ತಿಂಗಳು ಬರೀ ಅನ್ನವನ್ನು ಅಥವಾ ಸಪ್ಪೆ ಅನ್ನವನ್ನು ತಿನ್ನುವಂತದ್ದು ಮತ್ತು ಮೂರು ತಿಂಗಳ ನಂತರ ಉಪ್ಪು ಕಾರ ಕಡಿಮೆ ಇರುವ ಬೆಳೆ ಸಾರಿನ ಅನ್ನವನ್ನು ತಿನ್ನುವುದು. ಮತ್ತು ಅಳತೆಯಲ್ಲಿ ನೀರನ್ನು ಕುಡಿಯುವದನ್ನು ಕಾಣಬಹುದು ಅಳೆತೆ ಮೀರಿ ನೀರನ್ನು ಕುಡಿದರೆ ಮಗುವಿನ ಹೊಟ್ಟೆ ಊದಿಕೊಳ್ಳುತ್ತದೆ ಎಂಬ ನಂಬಿಕೆಯನ್ನು ಹೊಂದಿದ್ದಾರೆ. ಮತ್ತು ಊಟವಾದ ನಂತರ ಮೈಯಲ್ಲಿ ನೀರು ಬರುವಂತೆ ಬಾಣಂತಿ ಹೊದ್ದು ಮಲಗಬೇಕು
2) ಬಾಣಂತಿಗೆ ರೊಟ್ಟಿ ಚಪಾತಿ, ಮುದ್ದೆಯನ್ನು ಮೂರು ನಾಲ್ಕು ತಿಂಗಳುಗಳ ಕಾಲ ನೀಡುವುದಿಲ್ಲ ಇದು ಗಟ್ಟಿ ಪದಾರ್ಥವಾಗಿದ್ದು ಮಗುವಿಗೆ ಹೊಟ್ಟೆ ನುಲಿ ಬರುತ್ತದೆಂಬ ನಂಬಿಕೆಯಿಂದೆ.
3) ಬಾಣಂತಿ ಕೋಳಿಯ ತಲೆಯನ್ನು ತಿಂದರೆ ಮಗುವಿನ ತಲೆ ಬೇಗ ನಿಲ್ಲುತ್ತದೆಂಬ ನಂಬಿಕೆಯಿಂದ ಕೋಳಿಯ ತಲೆಯನ್ನು ಹೆಚ್ಚು ಹೆಚ್ಚು ಹಾಕುತ್ತಾರೆ.
4) ಶೀತದಿಂದ ಮಗು ಮತ್ತು ಬಾಣಂತಿಯನ್ನು ರಕ್ಷಿಸಲು ಸಾಮಾನ್ಯವಾಗಿ ಮಂದ ಬೆಳಕಿನ ಕೋಣೆಯಲ್ಲಿಯೇ ಇವರ ವಾಸಕ್ಕೆ ಸ್ಥಳಾವಕಾಶ ನೀಡುತ್ತಾರೆ.
5) ಸಂಜೆ ಹೊತ್ತಿನಲ್ಲಿ ಮಗುವು ಅಳುತ್ತಿದ್ದರೆ ದೃಷ್ಟಿಯಾಗಿದೆ ಎಂದು ದೃಷ್ಟಿ ತೆಗೆಯುವುದೆಂದು ಅಂಚಿಕಡ್ಡಿಯ ಹಚ್ಚಿ ನೀವಳಿಸಿ ಸುಡುತ್ತಾರೆ.
6) ಹುಟ್ಟಿದ ಮಗು ಮೂರನೆಯ ಮಗುವಾಗಿದ್ದರೆ ಅದನ್ನು ನೇರವಾಗಿ ತಾಯಿಯ ಕಡೆಯವರು ಅದರಲ್ಲೂ ಮಗುವಿನ ಸೋದರಮಾನ ನೋಡುವಂತಿಲ್ಲ ಬದಲಿಗೆ

ಒಂದು ಬಟ್ಟಲಿನಲ್ಲಿ ಎಣ್ಣೆಯನ್ನು ತುಂಬಿ ಅದರಲ್ಲಿ ನೋಡಬೇಕು ಅಥವಾ ಕನ್ನಡಿಯಲ್ಲಿ ನೋಡಬೇಕು ಅಂತಹ ಸಂದರ್ಭದಲ್ಲಿ ಮಾವ ಮಗುವಿಗೆ ಚಿನ್ನದ/ ಬೆಳ್ಳಿಯ ವಡವೆಯನ್ನು ಹಾಕವಂತಹದ್ದನ್ನು ಕಾಣಬಹುದು.

7) ಸಾಮಾನ್ಯವಾಗಿ ಮೂರು ಹೆಣ್ಣು ಮಕ್ಕಳ ನಂತರ ಗಂಡು ಮಗು ಜನಿಸಿದರೆ. ಅದೃಷ್ಟ, ಧನಲಾಭವೆಂದು ನಂಬಿದ್ದಾರೆ.

ತಿಗಳರು ಈ ರೀತಿಯಾಗಿ ಜನನದ ಸಂದರ್ಭದಲ್ಲಿ ಮತ್ತು ಮಗು ಜನಿಸಿದ ನಂತರ ಬಾಣಂತನ ತೀರುವ ತನಕ ಅನೇಕ ಆಚರಣೆ, ನಂಬಿಕೆ, ಸಂಪ್ರದಾಯಗಳನ್ನೊಳಗೊಂಡಂತೆ ಬಾಣಂತನವನ್ನು ತಾಯಿಯ ಮನೆಯಲ್ಲಿ ಮುಗಿಸಿಕೊಂಡು ನಂತರ ಶಾಸ್ತ್ರೋಕ್ತ್ರವಾಗಿ ತವರಿನ ಉಡುಗೊರೆಯೊಂದಿಗೆ, ಮಗುವಿಗೆ ತೊಟ್ಟಿಲು, ಚಿನ್ನಾಭರಣಗಳೊಂದಿಗೆ ತನ್ನ ಗಂಡನ ಮನೆಗೆ ಹೋಗುವುದನ್ನು ಕಾಣಬಹುದಾಗಿದೆ.

ಬೆಳವಣಿಗೆ ಮನುಷ್ಯನ ಸಹಜ ಧರ್ಮ. ಇದು ಪ್ರಕೃತಿಯ ನಿಯಮವೂ ಕೂಡ ಮಗುವೊಂದು ಬೆಳೆದು ಬಾಲ್ಯಾವಸ್ಥೆಯಿಂದ ಪ್ರೌಢಾವಸ್ಥೆಗೆ ಅಡಿ ಇರಿಸಿದಾಗ ಕೆಲವು ಗ್ರಂಥಿಗಳ ಸ್ರವಿಸುವಿಕೆಯಿಂದ ಕೆಲವೊಂದು ದೈಹಿಕ ಹಾಗೂ ಮಾನಸಿಕ ಬದಲಾವಣೆಗಲಾಗುವುದು ಸಹಜ, ಈ ಬದಲಾವಣೆಗಳು ಗಂಡು ಹೆಣ್ಣು ಮಕ್ಕಳಿಬ್ಬರಲ್ಲೂ ಸಹಜವಾಗಿದ್ದರೂ ಕೂಡ ಹೆಣ್ಣು ಮಕ್ಕಳಿಗೆ ಈ ಹಂತದಲ್ಲಿ ಕೆಲವು ವಿಶೇಷವಾದಂತಹ ಆಚರಣೆಗಳನ್ನು ಮಾಡುವುದರ ಮೂಲಕ ಸಮಾಜದ ಗಮನಕ್ಕೆ ತುರುವುದು ಬಹುತೇಕ ಎಲ್ಲಾ ಜನಾಂಗದಲ್ಲಿಯೂ ಕಂಡು ಬರುತ್ತದೆ.

ಈ ಜನಾಂಗದ ಯಾವುದೇ ಒಂದು ಹೆಣ್ಣು ಮೈ ನೆರೆದಾಗ ಮೊದಲು ವಿಷಯವನ್ನು ಊರಿನ ಗೌಡರು ಅಣೆಕಾರರು ಹಾಗೂ ಮುದ್ರೆಗಳಿಗೆ ತಿಳಿಸಿ ಅವರ ಮುಖಾಂತರ ಊರಿನ

ಎಲ್ಲರಿಗೂ ತಿಳಿಸುತ್ತಾರೆ. ಮತ್ತು ಅಂದು ಸಾಯಂಕಾಲ ಗುಡ್ಲು ಹಾಕುವ ಕಾರ್ಯವನ್ನು ಇವರೆಲ್ಲರ ಸಮೂಹದಲ್ಲಿಯೇ ನಡೆಸುತ್ತಾರೆ.

ಮೊದಲು ಮೈನೆರೆದ ಹುಡುಗಿಗೆ ಮನೆಯ ಹೊರಗಡೆಯೇ ಐದು ಜನ ಮುತ್ತೈದೆಯರು ಸೇರಿ ಸ್ನಾನ ಮಾಡಿಸುತ್ತಾರೆ. ನಂತರ ಮನೆಗೆ ಕರೆತಂದು ಹುಡುಗಿಗೆ ಮಡಿವಾಳರ ಬಟ್ಟೆ ಶುಭ್ರವಾದುದನ್ನು ಉಡಿಸುತ್ತಾರೆ. ನಂತರ ಹುಡುಗಿಯ ಸೋದರ ಮಾವನ ಕೈಯಲ್ಲಿ ಗುಡ್ಲನ್ನು ಹಾಕಿಸುತ್ತಾರೆ. ಮತ್ತು ಆ ಗುಡಿಸಲಿಗೆ ಹೆಣ್ಣನ್ನು ಕೂರಿಸುವುದಕ್ಕಿಂತ ಮೊದಲು ಗುಡ್ಲು ಹಾಕಿದಂತಹ ಮಾವನಿಗೆ ಬಾಳೆಹಣ್ಣು ತಂಬಿಟ್ಟು ಕೊಬ್ಬರಿ, ಕಡ್ಲೆಪುರಿ, ಎಳ್ಳುಂಡೆ, ಬೆಲ್ಲ ಅಡಕೆ ಎಲೆಯನ್ನು ಒಳಗೊಂಡಂತೆ ಮೊದಲು ಮಡಿಲು ತುಂಬುವರು ನಂತರ ಹುಡುಗಿಯನ್ನು ಕರೆತಂದು ಕೂರಿಸಿ ಮೂರು ಅಥವಾ ಐದು ಜನ ಮುತ್ತೈದೆಯರು ಹುಡುಗಿಗೆ ಮಡಿಲು ತುಂಬುವರು ಮತ್ತು ಈ ಶಾಸ್ತ್ರ 3 ದಿನಗಳ ಕಾಲ ನಡೆಯುವುದು ಆ ಮಡಿಲು ತುಂಬಿದ ಎಲ್ಲವನ್ನು ಹುಡುಗಿ ಬಂದಂತಹವರಿಗೆ ಹಂಚಬೇಕಾಗಿತ್ತು. ಮೂರು ದಿನ ಹಾಕಬೇಕಾಗಿತ್ತು. ಹುಡುಗಿ ಮೈ ನೆರೆದ 16 ದಿನಗಳ ತನಕ ಸೂತಕವನ್ನ ತೆಗೆದುಕೊಳ್ಳುತ್ತಿರಲಿಲ್ಲ. ಅಲ್ಲಿಯ ತನಕ್ನ ಹೆಣ್ಣು ಅಶುದ್ಧಳೆಂದು ಒಂದು ಮೂಲೆಯಲ್ಲಿ ಕೂರಬೇಕಾಗಿತ್ತು. ಮತ್ತು ತಿನ್ನಲು ಹಲಸಿನ ಎಲೆಯಲ್ಲಿ ಅನ್ನ ಉಚ್ಚೆಳ್ಳೆಣ್ಣೆ, ತುಪ್ಪ, ಮತ್ತು ವಿಶೇಷವಾಗಿ ಸಪ್ಪೆಅನ್ನವನ್ನ ನೀಡುತ್ತಿದ್ದರು ಮತ್ತು ಕುಡಿಯಲು ಕಡ್ಡಾಯವಾಗಿ ಬಿಡಿ ನೀರನ್ನೇ ಕೊಡುತ್ತಿದ್ದರು. ಹದಿನಾರನೇ ದಿನ ದಾಸಪ್ಪ ಬಂದು ಸೂತಕವನ್ನು ತಗೆದ ನಂತರ ಆಕೆ ಮಾಮೂಲಿನಂತೆ ಇರಬಹುದಾಗಿತ್ತು.

ಮೈನೆರೆದ ಹೆಣ್ಣಿಗೆ ವಸಗೆ ಹಾಕಲು ಸೋದರ ಮಾವನ ಕೈಯಲ್ಲಿ ಹಸಿರು ಸೊಪ್ಪುಗಳಾದ ಹತ್ತಿಸೊಪ್ಪಿನಕೊಂಬೆ, ಅಂಕಲೆ ಕಡ್ಡಿ, ತೆಂಗಿನ ಗರಿ, ಎಕ್ಕದಗಿಡ ಮತ್ತು ಭತ್ತದ ಹುಲ್ಲುನಿಂದ ಮನೆ ಹೊರಭಾಗದಲ್ಲಿ ಪೂರ್ವಕ್ಕೆ ಬಾಗಿಲನ್ನು ಮಾಡಿ ಗುಡ್ಲನ್ನು ಹಾಕುತ್ತಾರೆ. ಆ ಸಮಯದಲ್ಲಿ ಹುಡುಗಿ ಹಸಿ ಮೈಯೆಂದು ಯಾವುದೇ ದೆವ್ವ, ಪಿಶಾಚಿ ಬರದಿರಲೆಂಬ

ನಂಬಿಕೆಯಿಂದ ಗುಡ್ಲಲ್ಲಿ ಕಡ್ಡಾಯವಾಗಿ ಚಪ್ಪಲಿ, ಕೂಡ್ಲು, ಒನಗೆ, ಕಸದ ಪೊರಕೆಯನ್ನು ಇಟ್ಟಿರುತ್ತಾರೆ ನಂತರ ಗ್ರಾಮದ ಮುಖಂಡತ ಸಮೂಹದಲ್ಲಿ ಎಲ್ಲಾ ಶಾಸ್ತ್ರಾಧಿಗಳ ಮಾಡಿ ಮಡಿಲನ್ನು ತುಂಬಿ ರಾತ್ರಿಯಿಡಿ ಹುಡುಗಿ ಮಲಗದಂತೆ ಸೋಬಾನೆ ಹಾಡುತ್ತಾ, ವಿನೋದಕ್ಕಾಗಿ ಒಗಟು ಬಿಡಿಸುವುದು ಮುಂತಾದ ಆಟದಲ್ಲಿ ತೊಡಗುತ್ತಾರೆ.

ಶ್ರೀಮಂತರು ಅಥವಾ ಉಳ್ಳವರು ಒಂದು ತಿಗಳಿಗೆ ಅಥವಾ ತಮಗೆ ಅನುಕೂಲವಾದಾಗ ವಸಗೆ ಹಾಕುವುದು ಎಂದು ವಿಜೃಂಭಣೆಯಿಂದ ಮದುವೆಯ ರೀತಿಯಲ್ಲಿ ಅವರವರ ಶಕ್ತಾನುಸಾರ ಮಾಡುತ್ತಾರೆ.

ಈ ಎಲ್ಲಾ ರೀತಿಯಾದಂತಹ ಆಚರಣೆಗಳನ್ನು ಮಾಡುವುದರಿಂದ ತಮ್ಮ ಮಗಳು ಮದುವೆಗೆ ಸಿದ್ದಳಾಗಿದ್ದಾಳೆಂದು ಸಾಂಪ್ರದಾಯಿಕ ವಾದಂತಹ ಚೌಕಟ್ಟಿನಲ್ಲಿ ತಿಳಿಸುವುದಾಗಿದೆ.

ವಿವಾಹ:

ಎಲ್ಲಾ ಪ್ರಾಣಿಗಳಲ್ಲಿಯೂ ಹೆಣ್ಣು ಗಂಡುಗಳ ಸಂಯೋಗ ಮತ್ತು ಸಂತಾನಾಭಿವೃದ್ಧಿ ನಡೆಯುವುದು ಪ್ರಕೃತಿಯ ಸಹಜಗುಣ ಪಶು ಪಕ್ಷಿಗಳಲ್ಲಿ ಯಾವ ರೀತಿಯ ನಿಯಮ ನಿಬಂಧನೆಗಳು ದಾಂಪತ್ಯದಲ್ಲಿ ಇಲ್ಲ ಆದರೆ ಮಾನವನಲ್ಲಿ ಕೆಲವು ನಿಯಮ ನಿಬಂಧನೆಗಳನ್ನು ನಾವು ಕಾಣಬಹುದು ಹೆಣ್ಣು ಮತ್ತು ಗಂಡು ಹೊಂದಿಕೊಂಡು ಕಷ್ಟ ಸುಖಗಳಲ್ಲಿ ಒಂದಾಗಿ ಕೂಡಿಬಾಳುವುದನ್ನು ದಾಂಪತ್ಯ ಜೀವನ ಎಂದು ಅಭಿಪ್ರಾಯ ಪಡಲಾಗಿದೆ. ಈ ಹೆಣ್ಣು ಗಂಡುಗಳು ಬಾಳುವುದಕ್ಕೆ ಒಂದು ನೆಲಯನ್ನು ಮಾಡಿಕೊಂಡು ತಮ್ಮ ಜೀವನಕ್ಕೆ ಬೇಕಾದ ಅಗತ್ಯ ಪದಾರ್ಥಗಳನ್ನು ತಮ್ಮ ಶ್ರಮದಿಂದ ಸಂಪಾದಿಸಿಕೊಂಡು ಕೊನೆವರೆಗೂ ಬಾಳುವುದನ್ನು ದಾಂಪತ್ಯ ಜೀವನವೆಂದು ಕರೆದರು.

ವಿವಾಹ ಮತ್ತು ಕುಟುಂಬಗಳು ಪರಸ್ಪರ ಪೂರಕವಾದ ಹಾಗೂ ಸಾರ್ವತ್ರಿಕವಾದ ಸಾಮಾಜಿಕ ಸಂಸ್ಥೆಗಳಾಗಿವೆ. ಇಲ್ಲಿ ಸಾಮಾಜಿಕ ಧಾರ್ಮಿಕವಾದ ಬಲೆಯನ್ನು ಹೆಣೆದು ಅವರ

ಬಾಳಿಗೊಂಡು ಅರ್ಥ ಕೊಡುವುದನ್ನು ಮದುವೆ ಎಂದು ಕರೆದರು. ಸ್ತ್ರೀ ಪುರುಷರ ಸಾಂಗತ್ಯದಿಂದಾದ ವಿವಾಹಕ್ಕೆ ಸಮಾಜದ ಮಾನ್ಯತೆ ಅಗತ್ಯ. ಸಾರ್ವಜನಿಕ ಸಮ್ಮುಖದಲ್ಲಿ ಶಾಸ್ತ್ರೋಕ್ತವಾಗಿ ನಡೆಯುವ ವಿವಾಹಕ್ಕೆ ಬೆಂಬಲಿಸಿದೆ ಎಂದರೆ ವಿವಾಹವನ್ನು ಒಂದು ಪವಿತ್ರ ಬಂಧನ ಎನ್ನಲಾಗಿದೆ. ಸ್ತ್ರೀಪುರುಷರು ಧರ್ಮದ ಎಲ್ಲೆಯನ್ನು ದಾಟದೇ ಸತಿಪತಿಗಳಾಗಿ, ಸಪ್ತಪದಿಯನ್ನು ತುಳಿದು ಅಗ್ನಿಸಾಕ್ಷಿಆಗಿ ಪಾಣೀಗ್ರಹಣ ಮಾಡಿಕೊಂಡು ಜೀವನ ಪರ್ಯಂತ ಜೊತೆಯಾಗಿ ನಡೆದಾಗ ಮಾತ್ರ ಮೋಕ್ಷ ಸಿಗುವುದೆಂಬ ನಂಬಿಕೆಯಿಂದ ಈ ವಿವಾಹ ಪದ್ಧತಿ ಹೆಚ್ಚು ಅರ್ಥಗರ್ಭಿತವಾಯಿತು. ಹಿಂದೂ ಸಮಾಜದಲ್ಲಿ ವ್ಯಕ್ತಿ ವಿವಾಹವಾಗುವುದು ತನ್ನ ಅನುಕೂಲಕ್ಕಾಗಿ ಅಲ್ಲ ತನ್ನ ಕುಟುಂಬವನ್ನು ಮುಂದುವರೆಸಿಕೊಂಡು ಹೋಗಲು.

ಅನೇಕ ಸಮಾಜಶಾಸ್ತ್ರಜ್ಞರು ವಿವಾಹವನ್ನು ತಮ್ಮದೇ ನೆಲೆಯಲ್ಲಿ ವ್ಯಾಖ್ಯಾನಿಸಿದ್ದಾರೆ. ಗಿಲಿನ್ ಮತ್ತ ಗಿಲಿನ್ ಎಂಬುವರು ಸಂತತಿಯನ್ನು ಹೊಂದತಕ್ಕ ಕುಟುಂಬಗಳ ಸ್ಥಾಪನೆಗೆ ಸಮಾಜವು ಮನ್ನಣೆ ಕೊಟ್ಟಂತಹ ಮಾರ್ಗವೆಂದರೆ ವಿವಾಹ ಎಂದರು. ಮಲಿನೋವಸ್ಕಿಯ ಪ್ರಕಾರ – ವಿವಾಹವು ಸ್ತ್ರೀಪುರುಷರ ನಡುವೆ ಲೈಂಗಿಕ ಹಾಗೂ ಮಾನಸಿಕ ಸಂಬಂಧವನ್ನು ದೃಢೀಕರಿಸುವ ಮತ್ತು ಸಂತಾನೋತ್ಪತ್ತಿಗಾಗಿ ಉದ್ದೇಶಪೂರ್ವಕವಾಗಿ ಬಳಸಿಕೊಂಡ ಒಪ್ಪಂದ ಎಂದಿದ್ದಾನೆ. ವಿವಾಹವೆಂಬುದು ಗಂಡು ಹೆಣ್ಣುಗಳ ನಡುವಿನ ಕರಾರು ಅಥವಾ ಒಪ್ಪಂದ ವಿವಾಹವು ಲೈಂಗಿಕ ಜೀವನ ನಡೆಸಲು ಮಾನವನಿಗೆ ನೀಡಲಾಗಿರುವ ಪರವಾನಗಿ ಎಂದು ಮುಂತಾಗಿ ವಿವಾಹ ಕುರಿತು ವ್ಯಾಖ್ಯಾನಗಳು ಸಿಗುತ್ತವೆ.

ತಿಗಳ ಜನಾಂಗದವರಲ್ಲಿ ಗುರುತಿಸಬಹುದಾದಂತಹ ಮುಖ್ಯವಾಗಿರುವ ಸಂಸ್ಕಾರವೆಂದರೆ ವಿವಾಹ ಕಾರ್ಯಕ್ರಮವಾಗಿದೆ. ಅಲ್ಲದೆ ಮನುಷ್ಯನಿಗೆ ವಿವಾಹವಾಗದ ಹೊರತು ಸದ್ಗತಿ ದೊರಕುವುದಿಲ್ಲವೆಂಬ ನಂಬಿಕೆ ಇಲ್ಲಿ ತಮ್ಮಂಜನಾಂಗ ಮುಂದುವರೆಯುವುದಕ್ಕಾಗಿ ಹಾಗೂ ತಮ್ಮ ಲೈಂಗಿಕ ಜೀವನವನ್ನು ವ್ಯವಸ್ಥಿತ ರೀತಿಯಲ್ಲಿ ಪೂರೈಸಿಕೊಳ್ಳಲು ಈ ಸಮಾಜ ರೂಪಿಸಿದ ಒಂದು ಒಪ್ಪಂದವೇ ವಿವಾಹ, ಈ ಜನಾಂಗದಲ್ಲಿ

ಯುವಕ ಮತ್ತು ಯುವತಿ ಪ್ರಾಪ್ತವಯಸ್ಕರಾದ ಮೇಲೆ ನೆರವೇರಿಸುವಂತಹ ಸಾಮಾಜಿಕ ಕ್ರಿಯೆ ಈ ವಿವಾಹ ಇದಕ್ಕೆ ಸಾಮಾಜಿಕ ಮತ್ತು ಧಾರ್ಮಿಕ ಹಿನ್ನಲೆಯಿದೆ.

ತಿಗಳರು ಸಾಮಾನ್ಯವಾಗಿ ಗಂಡು ಮಕ್ಕಳಿಗೆ 25ರ ನಂತರ ಅಂದರೆ ಸ್ವಲ್ಪ ನಿಧಾನವಾಗಿಯೇ ವಿವಾಹಮಾಡುತ್ತಾರೆ. ಆದರೆ ಹೆಣ್ಣು ಮಕ್ಕಳಿಗೆ ಮಾತ್ರ 16 ತುಂಬಿದ ನಂತರ ಈ ಕಾರ್ಯಕ್ಕೆ ಮುಂದಾಗುವರು. ಗಂಡು ಮಕ್ಕಳಿಗೆ ಹಿರಿಯರೇ ನಿಂತು ವಧುವನ್ನು ಹುಡುಕಿ ಸಂಪ್ರದಾಯ ಬದ್ದವಾಗಿ ಮದುವೆ ಮಾಡುವುದು ರೂಢಿ ಇವರಲ್ಲಿರುವಂತೆ ವಿಜಾತಿ ವಿವಾಹ ನಿಶಿದ್ಧವಾಗಿರುತ್ತದೆ.

ಕನ್ಯೆ ಹುಡುಕುವ ಕಾರ್ಯ:

ಇವರು ಹೆಣ್ಣನ್ನು ತಮ್ಮ ಅಂತಸ್ತಿಗೆ ತಕ್ಕಂತೆ ತಮ್ಮ ಕುಟುಂಬದ ಹಿನ್ನಲೆಗೆ ಅನುಗುಣವಾಗಿ ಕನ್ಯೆಯನ್ನು ನೋಡುತ್ತಾರೆ. ತಮ್ಮ ರಕ್ತ ಸಂಬಂಧದಲ್ಲಿಯೇ ವಿವಾಹ ಏರ್ಪಟ್ಟರೆ ಕುಲದ ಶುದ್ಧಿ ಕಾಪಾಡಬಹುದು. ಹಾಗೂ ಆಸ್ತಿ ಬೇರೆಯವರ ಪಾಲಾಗಬಾರದೆಂಬ ದೃಷ್ಟಿಯಿಂದ ರಕ್ತ ಸಂಬಂಧದಲ್ಲಿಯೇ ವಿವಾಹವಾಗುವುದು ಕಂಡು ಬರುತ್ತದೆ ಹಿಂದೆ ಇವರಲ್ಲಿ ಹೆಚ್ಚು ಹೆಚ್ಚು ತಮ್ಮ ಸಂಬಂಧಿಗಳಾದಂತಹ ಮಾವಂದಿರ ಮಕ್ಕಳು, ಅಕ್ಕನ ಮಕ್ಕಳೊಂದಿಗೆ ನಡೆಯುತ್ತಿದ್ದವು ಇತ್ತೀಚೆಗೆ ಇದು ಬದಲಾವಣೆಯಾಗುತ್ತಿದೆ. ಮತ್ತು ದೂರದ ಸಂಬಂಧವಾದರೆ ದೇವರ ಮೂಲ ಮತ್ತು ಒಳಪಂಗಡಗಳನ್ನ ಕೇಳಿ ತಿಳಿದಕೊಳ್ಳುತ್ತಾರೆ. ತಮ್ಮಲ್ಲಿ ಒಳಪಂಗಡಗಳಿಗನುಗುಣವಾಗಿ ಸಂಬಂಧ ಬೆಳೆಯುವುದನ್ನು ಕಾಣಬಹುದಾಗಿದೆ. ಬುಡಕಟ್ಟು ಪದ್ಧತಿಗೆ ಅನುಗುಣವಾಗಿ ಒಂದೇ ಬುಡಕಟ್ಟುವಿನಲ್ಲಿ ವಿವಾಹವನ್ನ ಮಾಡಲಾಗುವುದಿಲ್ಲ. ಅಂದರೆ ತಮ್ಮ ಕುಟುಂಬ ಮನೆದೇವರು ಕುಲದೇವರಿಗನುಗುಣವಾಗಿ ಬುಡಕಟ್ಟುಗಳನ್ನು ಮಾಡಿಕೊಂಡಿದ್ದರು. ಉದಾ: ಲಕ್ಷ್ಮೀದೇವರ ಬುಡಕಟ್ಟು, ಎಲ್ಲಮ್ಮದೇವರ ಬುಡಕಟ್ಟು, ಸಿದ್ದೇಶ್ವರಸ್ವಾಮಿ ಬುಡಕಟ್ಟು, ನರಸಿಂಹಸ್ವಾಮಿ ಬುಡಕಟ್ಟು, ಧರ್ಮರಾಯಸ್ವಾಮಿ ಬುಡಕಟ್ಟು

ಇತ್ಯಾದಿ., ಬೇರೆ ಬೇರೆ ಗೋತ್ರಗಳಂತೆ ಈ ಬುಡಕಟ್ಟುಗಳು ಅನ್ಯಜಾತಿಗಳವರಲ್ಲಿ ಸ್ವಗೋತ್ರದ ವಧು–ವರರ ನಡುವೆ ಮದುವೆ ಹೇಗೆ ನಿಶಿದ್ಧವೋ ಹಾಗೇ ಒಂದೇ ಬುಡಕಟ್ಟಿಗೆ ಸೇರಿದವರು ಸೋದರರಾಗುತ್ತಾರೆಂದು ತಮ್ಮ ತಮ್ಮ ಬುಡಕಟ್ಟಿನಲ್ಲಿ ವಿವಾಹ ಸಂಬಂಧವನ್ನು ಕೈಗೊಳ್ಳುವುದಿಲ್ಲ.

ತಿಗಳರಲ್ಲಿ ಮುಳ್ಳಾತಿಗಳರು, ಉಳ್ಳಿತಿಗಳರು, ದಾಸಪಣದವರು ಎಂದು ಅನೇಕ ಪಂಗಡಗಳಾಗಿ ವಿಭಜನೆಗೊಂಡಿದ್ದರು, ಇಲ್ಲಿನ ಮುಳ್ಳತಿಗಳರು ಮತ್ತು ಉಳ್ಳಿತಿಗಳರು ದಾಸಪಣದವರೊಂದಿಗೆ ವಿವಾಹ ಸಂಬಂಧವನ್ನು ಬೆಳೆಸುತ್ತಿರಲಿಲ್ಲ ಕಾರಣ ಇವರು ದೇವಧೂತ ಸಂತತಿಯವರೆಂದು ಭಾವಿಸಲಾಗಿತ್ತು. ಆದರೆ ಇತ್ತೀಚೆಗೆ ಸಂಬಂಧಗಳು ಏರ್ಪಡುವುದನ್ನು ಕಾಣಬಹುದು.

ಎಲ್ಲಾ ರೀತಿಯ ಹಿಂದು ಮುಂದುಗಳನ್ನು ವಿಚಾರ ಮಾಡಿಕೊಂಡು ಕನ್ಯೆ ನೋಡಲು ಹೊರಡುವವರು ಕನ್ಯೆಯ ನೋಡಲು ಗಂಡಿನ ತಂದೆ ತಾಯಿಯನ್ನೊಳಗೊಂಡಂತೆ ಮೂರು ಮತ್ತು ಐದು ಜನರು ಹೋಗುತ್ತಾರೆ. ಇವರೊಂದಿಗೆ ವಿಧವೆಯನ್ನು ಕರೆದುಕೊಂಡು ಹೋಗುವುದಿಲ್ಲ. ಮತ್ತು ಹೋಗುವ ಶಕುನಗಳನ್ನು ನೋಡಿಯೇ ಹೋಗುತ್ತಾರೆ. ಖಾಲಿ ಬಿಂದಿಗೆ, ವಿಧುವೆ, ಕ್ಷೌರಿಕ, ಹಾಲು ಮಾರುವವರು, ಬೆಕ್ಕು, ಹಾವು ಅಡ್ಡಬಂದರೆ ಅಪಶಕುನವೆಂದು ಆ ಹೆಣ್ಣು ಮದುವೆ ಮಾಡಿಕೊಳ್ಳುವುದಿಲ್ಲ. ಮತ್ತು ಹೆಚ್ಚು ಆತ್ಮೀಯವಾಗಿ ಕುಟುಂಬಕ್ಕೆ ಹೊಂದಿಕೊಂಡು ಹೋಗುವಂತಹ ಗುಣವಂತ ಮತ್ತು ಭಯ ಭಕ್ತಿಯಿಂದ ಕೂಡಿದಂತಹ ಹೆಣ್ಣನ್ನು ವಿವಾಹ ಮಾಡಿಕೊಳ್ಳುತ್ತಾರೆ. ಏಕೆಂದರೆ ಹಿಂದಿನಿಂದ ಕಾಪಾಡಿಕೊಂಡು ಬಂದಿರುವಂತಹ ಅವಿಭಕ್ತ ಕುಟುಂಬದ ಸೌಧಕ್ಕೆ ಯಾವುದೇ ಹಾನಿ ಈ ಹೆಣ್ಣಿನಿಂದ ದೊರಕದಿರಲೆಂದು ಅವರ ಭಾವನೆ. ಮೊದಲು ಹೆಣ್ಣನ್ನು ನೋಡಿದ ನಂತರ ಹೆಣ್ಣನ್ನ ಒಪ್ಪಿದ ನಂತರ ಜ್ಯೋತಿಷಿಯ ಹತ್ತಿರ ಹೆಣ್ಣು ಮತ್ತು ಗಂಡಿನ ನಾಮನಕ್ಷತ್ರದನ್ವಯ ಸಾಲಾವಳಿ ಕೇಳುವುದು ರೂಢಿ ಇದರಲ್ಲಿ ಕೂಟಗಳು 20 ರಿಂದ ಮೇಲೆ ಬಂದರೆ ವಿವಾಹವನ್ನು

ಮಾಡಿಕೊಳ್ಳುತ್ತಾರೆ ಇಲ್ಲದಿದ್ದರೆ ಗಂಡು ಹೆಣ್ಣು ಪರಸ್ಪರ ಒಪ್ಪಿದರು ಸಹ ವಿವಾಹವನ್ನು ಮಾಡುವುದಿಲ್ಲ. ಇಲ್ಲ ಸಂಪ್ರದಾಯಗಳು ಸರಿಬಂದಾಗ ಗಂಡಿನ ಮನೆಯನ್ನು ನೋಡಲು ಬರುವಂತಹದ್ದು ಅಲ್ಲಿಯವರೆಗೆ ಯಾವುದೇ ರೀತಿಯಾದಂತಹ ಊಟೋಪಚಾರವಿರುವದಿಲ್ಲ ಗಂಡಿನ ಮನೆಯವರು ಬಂದವರು ಅವರ ಕುಟುಂಬದ ವಿವರ ಮಕ್ಕಳ ವಿವರ ಆಸ್ತಿ, ಕೆಲಸ ಎಲ್ಲರ ಬಗ್ಗೆ ವಿಚಾರ ಮಾಡಿ ಪರಸ್ಪರ ಗಂಡಿನವರಿಗೂ ಹೆಣ್ಣಿನವರಿಗೂ ಎಲ್ಲಾ ರೀತಿಯಲ್ಲಿ ಒಪ್ಪಿಗೆ ಕಂಡಾಗ ಮಾತುಕತೆಗೆ ಕೂರುತ್ತಾರೆ ಇದು ಗಂಡಿನ ಮನೆಯಲ್ಲಾದರೂ ನಡೆಯಬಹುದು ಇಲ್ಲವೆ ಹೆಣ್ಣಿನ ಮನೆಯಲ್ಲಾದರು ನಡೆಯಬಹುದು ಹಿಂದೆ ವಧುದಕ್ಷಿಣೆ ಪದ್ಧತಿ ಇತ್ತು ಈಗ ಅದು ಬದಲಾಗಿ ಪರದಕ್ಷಿಣೆ ಪದ್ಧತಿ ಬಂದಿದೆ ಆದರೂ ಕೊಡ ಈ ಸಮುದಾಯದಲ್ಲಿ ಕೆಲವು ಚಿನ್ನಾಭರಣಗಳನ್ನು ತೆಗೆದುಕೊಳ್ಳವುದನ್ನು ಬಿಟ್ಟರೆ ಹೆಚ್ಚು ಹೆಚ್ಚು (ಹಣ–ಐಶ್ವರ್ಯವನ್ನು) ಏನನ್ನು ಕೇಳುವುದಿಲ್ಲ ಪರಸ್ಪರ ಒಪ್ಪಿಮಾತುಕತೆ ಮುಗಿಯುತ್ತೆಂದರೆ ವಿಳ್ಯೆ ಬದಲಾಯಿಸಿಕೊಳ್ಳುತ್ತಾರೆ ಆದರೂ ಅರಿಸಿನ ಕುಂಕುಮದ ಶಾಸ್ತ್ರದ ವರೆವಿಗೂ ಮುಗಿದ ಮೇಲೆ ಯಾವುದೇ ರೀತಿಯ ಬದಲಾವಣೆಯನ್ನು ಮಾಡಲಾಗುವುದಿಲ್ಲ ಅಂದರೆ ಇಲ್ಲಿ ನಡೆಯುವ ವಿಳ್ಯೆ ಶಾಸ್ತ್ರವು ಸಂಪೂರ್ಣವಾಗಿ ಸಂಬಂಧ ಒಪ್ಪಿಗೆಯಾಗಿದೆ ಎಂದು ಒಪ್ಪಿಗೆ ಸೂಚಿಸುವಂತಹದ್ದಾಗಿರುತ್ತದೆ.

ಸಾಗುಪದ್ಧತಿ:

ವಿವಾಹ ಪ್ರಸ್ತಾಪದ ಸಂದರ್ಭದಲ್ಲಿ ಮತ್ತು ವಿಳ್ಯೆಶಾಸ್ತ್ರದ ವಿಧಿಗೆ ಮುನ್ನ ಮಧು–ವರರ ಪಿತೃಗಳು ಅಥವಾ ಹಿರಿಯರು ಎರಡೂ ಕಡೆಯ ಯಜಮಾನರುಗಳಿಂದ (ಒಬ್ಬನೇ ಯಜಮನನಾಗಿರಬಹುದು) ಪಡೆಯುವ ಸಮ್ಮತಿ ಅಥವಾ ಒಪ್ಪಿಗೆ ಸಾಕ್ಷಿ ಎಂಬರ್ಥಗಳು ಸಾಗು ಎಂಬುದಕ್ಕೆ ಇರುತ್ತದೆ. ಯಜಮಾನರು ರಾಶಿಯ ಸಮ್ಮುಖದಲ್ಲಿ ವಧು–ವರರ ಕಡೆಯ ತಂದೆ ತಾಯಿ ಅಥವಾ ಹಿರಿಯರ ನಡುವೆ ಪ್ರಥಮ ವೀಳ್ಯೆ ವಿನಿಮಯ ಮಾಡಿಸಿ, ಹರಸಿ, ಜಗಳವಾಡದಂತೆ ವಿವಾಹ ನೆರವೇರಿಸಿಕೊಳ್ಳಲು ಹೇಳಿ, ಇದುವರೆಗೂ ಗಂಡು, ಹೆಣ್ಣಿನ

ವಿಶಯದಲ್ಲಿ ಆದ ಪ್ರಸ್ತಾವನೆಗೆ ಯಜಮನ ಸಾಕ್ಷಿಯಾಗಿ ನಿಲ್ಲುವನು ಈ ಸಾಗು ದ್ವಿಮುಖವಾದದ್ದು, ಎರಡೂ ಕಡೆಯ ಹಿರಿಯರು ಮೊದಲ ಹಿರಿಯ ಯಜಮಾನನ್ನು ಸಂಧಿಸಿ ನನ್ನ ಮಗಳನ್ನು ಇವರ ಮನೆಗೆ ನೀಡಿ ಉದ್ಧರಿಸುತ್ತೇನೆಂದು ಹೆಣ್ಣಿನ ತಂದೆ ಅಥವಾ ಹಿರಿಯ ಹೇಳುತ್ತಾನೆ ಇವರ ಮಗಳನ್ನು ನನ್ನ ಮನೆಗೆತಂದುಕೊಂಡು ಉದ್ದಾರವಾಗುತ್ತೇನೆಂದು ಗಂಡಿನ ತಂದೆ ಹೇಳುತ್ತಾನೆ. ಗಂಡುಹೆಣ್ಣುಗಳೆರಡೂ ಸಮುದಾಯಕ್ಕೆ ಸೇರಿದ್ದು ಆಯಾ ಯಜಮಾನರ ಅಧೀನದಲ್ಲಿದ್ದು ವರ–ವಧು ಈಗಾಗಲೇ ವಿವಾಹವಾಗಿರುವ ವರ ಮದುವೆಯಾಗಿದ್ದು ಮಕ್ಕಳಿದ್ದು ವಿಷಯ ಮರೆಮಾಚಿ ಮರುಮದುವೆ ಹಾಗುವ ಹಾಗಿಲ್ಲ, ಇಲ್ಲಿ ಯಾರನ್ನು ಯಾರು ವಂಚಿಸಲು ಸಾಧ್ಯವಿಲ್ಲ ಅನ್ಯ ಜಾತಿಗೆ ಸೇರಿದವರು ತಿಗಳ ಸಮುದಾಯಕ್ಕೆ ಸೇರಿರುವ ಹುಡುಗ/ಹುಡುಗಿಯನ್ನು ವಂಚಿಸಿ ಮದುವೆ ಹಾಗುವ ಆಗಿಲ್ಲ ಹಾಗೇನಾದರೂ ವಂಚನೆ ನಡೆದರೆ ಆಯಾ ಯಜಮಾನ ಹೊಣೆಗಾರನಾಗಿ ಸಮುದಾಯಕ್ಕೆ ಗಂಡಿನ ತಂದೆಗೆ ಹೇಳಿಕಳುಹಿಸುತ್ತಾರೆ ಒಮ್ಮೆ ನಿಶ್ಚಿತಾರ್ಥ ಕಾರ್ಯಕ್ಕೆ ಬೇಕಾಗುವಂತಹ ಸಾಮಾದಾಯಕ್ಕೆ ಗಂಡಿನ ತಂದೆಗೆ ಹೇಳಿಕಳುಹಿಸುತ್ತಾರೆ. ಒಮ್ಮೆ ನಿಶ್ಚಿತಾರ್ಥ ನಡೆದ ನಂತರ ಸಕಾರಣ ನೀಡದೆ ಗೊತ್ತು ಮಾಡಿಕೊಂಡ ಹೆಣ್ಣನ್ನು ಬಿಡುವ ಆಗಿಲ್ಲ ಹಾಗೊಂದು ಘಟನೆ ಸಂಭವಿಸಿದರೆ ಸಮುದಾಯ ನೀಡುವ ಶಿಕ್ಷೆಗೆ ಸಂಬಂಧಪಟ್ಟವರು ಒಳಗಾಗ ಬೇಕಾಗುತ್ತದೆ.

ಹೆಣ್ಣನ್ನು ವಂಚನೆಗೊಳಗಾಗದಂತೆ ತಡೆಯಲು ಸ್ತ್ರೀತ್ವದ ರಕ್ಷಣೆಗೆಂದೇ ಸಾಗು ಪದ್ಧತಿ ಬಳಕೆಯಲ್ಲಿದೆ.

ನಿಶ್ಚಿತಾರ್ಥ ಅಥವಾ ಅರಿಶಿನ ಕುಂಕುಮ ಬಿಡುವುದು:

ಹೆಣ್ಣು ಕೊಟ್ಟು ತರಲು ಒಪ್ಪಿಗೆಯಾದ ಮೇಲೆ ವಿಳ್ಯೆಶಾಸ್ತ್ರದ ಸಾಗುವಿನ ಅನ್ವಯ ಅವರು ತಿಳಿಸಿದಂತಹ ಎಲ್ಲ ಸಾಮಗ್ರಿಗಳನ್ನ ತೆಗೆದು ಕೊಂಡು ಗಂಡಿನ ಕಡೆಯಿಂದ ಸ್ತ್ರೀಯನ್ನೊಳಗೊಂಡಂತೆ ಐದು ಜನರು ಹೆಣ್ಣಿನ ಮನೆಗೆ ಬರುತ್ತಾರೆ ಅಲ್ಲಿ ಅಂದು ರಾತ್ರಿ

ಊರಿನ ರಾಶಿಯವರು ಗೌಡ ಅಣಿಕಾರರು ಮುದ್ರೆಯರ ಸನ್ನಿಧಾನದಲ್ಲಿ ಹೆಣ್ಣನ್ನು ಕೂರಿಸಿ ತಾವು ತಂದಿದ್ದಂತಹ ಸೀರೆ, ರವಿಕೆ, ಕಡಲೆ, ಬೆಲ್ಲ, ಕೊಬ್ಬರಿ, ಅರಿಸಿನಕುಂಕುಮ ಬಳೆ, ಹೂವು ಎಲ್ಲವ ನೀಡಿ ಬಂದಂತಹ ಸ್ತ್ರೀಯರನ್ನು ಸೇರಿದಂತೆ 5 ರಿಂದ 9 ಮಂದಿ ಸ್ತ್ರೀಯರು ಮಡಿಲನ್ನು ತುಂಬುತ್ತಾರೆ ನಂತರ ಗೌಡ, ಮುದ್ರೆ ಅಣಿಕಾರರು ಗಂಡಿನ ಕಡೆಯವರು ತಂದಿರುವಂತಹ ವೀಳ್ಯೆವನ್ನು ಎಲ್ಲರಿಗೂ ತಿದ್ದುತ್ತಾರೆ ಇದು ತಮ್ಮ ರಾಶಿಯಲ್ಲಿ ಮತ್ತು ಕುಲದ ವ್ಯವಸ್ಥೆಯನ್ನ ತಿಳಿಸುತ್ತದೆ. ನಂತರ ಊಟೋಪಚಾರಗಳನ್ನ ಮುಗಿಸಿ ಕೊಂಡು ಊರಿಗೆ ವಾಪಸ್ಸಾಗುವರು ದೂರದವರಾಗಿದ್ದರೆ ಬೇರೆಯ ಪರಿಚಯಸ್ಥರ ಮನೆಯಲ್ಲಿ ಅಥವಾ ದೇವಾಲಯದಲ್ಲಿ ತಂಗುತ್ತಾರೆ ಅವರು ಬಂದು ಹೋಗುವವರೆನಿಗೂ ನಡೆದಂತಹ ಶುಭ-ಅಶುಭ ಶಕನಗಳನ್ನು ಗಮನಿಸುತ್ತಾರೆ ಮತ್ತು ಎಲ್ಲ ಶುಭವಾಗಿದೆ ಎಲ್ಲವೂ ಸರಿಬಂದಿದೆ ಎಂಬ ಸುದ್ದಿಗಳು ಪರಸ್ಪರ ಮೂಲಕ ವಿನಿಮಯಮಾಡುತ್ತಾರೆ ಮತ್ತು ಖಡ್ಡಾಯವಾಗಿ ಗಂಡಿನವರು ಮನೆಗೆ ಬಂದಾಗಿನಿಂದ ಅವರು ಹೋಗುವವರೆವಿಗೂ ಮನೆಯಲ್ಲಿ ಹಚ್ಚಿದ ದೇವರ ದೀಪ ನಂದಬಾರದು ಇದು ಅವರ ಕುಲದೇವರಾದಂತಹ ಅಗ್ನಿಬನ್ನಿರಾಯನ ಪ್ರತಿರೂಪವೆಂದು ನಂಬಿರುತ್ತಾರೆ ಆದುದರಿಂದ ಅದನ್ನ ನಂದದಂತೆ ನೋಡಿಕೊಳ್ಳತ್ತಾರೆ ಈ ಎಲ್ಲಾ ರೀತಿಯಲ್ಲಿಯೂ ಸರಿಬಂದಾಗ ಮಾತ್ರ ನಿಶ್ಚಿತಾರ್ಥ ಸಿಂಧುವಾಗುತ್ತದೆ ಇಲ್ಲದಿದ್ದರೆ ಅದು ಅಸಿಂಧುವಾಗುತ್ತದೆ ಇದರಲ್ಲಿ ಯಾರು ಯಾರನ್ನು ದೂಷಿಸುವಂತಿರುವುದಿಲ್ಲ.

ಇತ್ತೀಚೆಗೆ ನಾಗರೀಕತೆ ಬಂದಂತೆ ವಿದ್ಯಾವಂತರು ಬಯಸಿದಂತೆ ಈ ಅರ್ಥವತ್ತಾದ ಸರಳ ಸುಂದರ ಕಡಿಮೆ ವೆಚ್ಚದ ನಿಶ್ಚಿತಾರ್ಥದ ಸ್ವರೂಪ ಬದಲಾಗಿ ದುಬಾರಿಯಾಗಿದೆ. ಇಂದು ಇಂತಹ ಕಾರ್ಯಗಳು ಹಗಲು ವೇಳೆಯಲ್ಲಿ ಕಲ್ಯಾಣಮಂಟಪದಲ್ಲಿ ಪರಸ್ಪರ ಚಿನ್ನಾಭರಣಗಳನ್ನು ವಿನಿಮಯ ಮಾಡಿಕೊಳ್ಳುವುದರ ಮೂಲಕ ಯಾವುದೇ ಶುಭ ಅಶುಭ ಶಕುನಗಳ ಪರಿವಿಲ್ಲದೆ ಅದ್ದೂರಿಯಾಗಿ ಆಚರಿಸುತ್ತಿದ್ದಾರೆ ಏನೇ ಸಂಭ್ರಮದಿಂದ ಕೂಡಿದರು ಇದು ಹೆಣ್ಣಿನ ಕಡೆಯವರು ಶೋಷಣೆ ಎಂದರೆ ತಪ್ಪಾಗಲಾರದು.

[illegible]

ಅಂತರ್‌ಜಾತಿಯ ವಿವಾಹ:

ತಿಗಳರ ಸಮುದಾಯದಲ್ಲಿ ಮತಾಂತರಕ್ಕೆ ಅವಕಾಶವಿಲ್ಲ ಸಂಕರಣ ವಿವಾಹ ಸಿಶಿದ್ಧ ಆದರೆ ವ್ಯಕ್ತಿ ಸ್ವಾತಂತ್ರ್ಯಕ್ಕೆ ಅವಕಾಶವಿದೆ. ಅನ್ಯ ಕೋಮು/ಜಾತಿ/ಧಾರ್ಮೀಯರೊಂದಿಗೆ ಇಷ್ಟ ಪಟ್ಟು ವಿವಾಹವಾಗುವವರ ವಿರುದ್ಧ ಸಮುದಾಯ ಘರ್ಷಣೆಗೆ ಇಳಿಯುವುದಿಲ್ಲ. ಅವರ ಪಾಡಿಗೆ ಅವರನ್ನು ಬಿಟ್ಟು ಬಿಡುತ್ತಾರೆ. ಅವರನ್ನು ಯಾವುದೇ ಕಾರಣಕ್ಕೂ ಸಮುದಾಯಕ್ಕೆ ಸೇರಿಸಿಕೊಳ್ಳುವುದಿಲ್ಲ.

ಕೂಡಿಕೆ ಪದ್ಧತಿ:

ದುರದೃಷ್ಟವಶಾತ್ ಹುಡುಗಿಯ ಪ್ರಾಯದಲ್ಲೇ ಇದ್ದಾಗ ಅಥವಾ ಮಕ್ಕಳಾಗುವ ಮುನ್ನವೆ ಗಂಡ ತೀರಿಕೊಂಡರೆ ಅಂಥವಳಿಗೆ ಬಾಳನ್ನು ಕೊಡಲು ಮುಂದಾಗುವ ವಿವಾಹಿತ–ಅವಿವಾಹಿತ ಯುವಕ ಮುಂದೆ ಬಂದಾಗ ಅದನ್ನು ಸಮಾಜ ಮನ್ನಿಸಿ ತಾಳಿಕಟ್ಟಿ ಕೈಹಿಡಿದು ಮಡದಿಯಾಗಿ ಸ್ವೀಕರಿಸಿ ದಾಂಪತ್ಯ ನಡೆಸಲು 'ಕೂಡಿಕೆ ಪದ್ಧತಿ'ಯನ್ನು ಸಮಾಜ ಪಾಲಿಸುತ್ತಿದೆ. ಈಗ ಅಂಥಹವರ ನಡುವಣ ವಿವಾಹವನ್ನು ಶಾಸ್ತ್ರೋಕ್ತವಾಗಿ ವೈಭವದಿಂದ ನಡೆಸಲಾಗುತ್ತದೆ ಸಮಾಜ ಅಂತ ವಿವಾಹವನ್ನ ಮನ್ನಿಸುತ್ತದೆ ಮತ್ತು ಮುಂದೆ ಇವರಿಂದ ಹುಟ್ಟುವ ಮಕ್ಕಳ ಮದುವೆ ಕಾರ್ಯವು ಕೂಡ ಇದೇ ರೀತಿ ಸಂಬಂಧಗಳಲ್ಲಿಯೇ ವಿವಾಹ ನಡೆಬೇಕೆಂಬ ಕಟ್ಟುನಿಟ್ಟಿನ ಪದ್ಧತಿಯಿದೆ. ಆದರೆ ಇದ ಬದಲಾಗಿ ಎಲ್ಲರೊಂದಿಗೂ ಇತ್ತೀಚೆಗೆ ಜರುಗುವುದನ್ನು ಕಾಣಬಹುದು.

ಈ ಎಲ್ಲ ಶಾಸ್ತ್ರಗಳ ಮತ್ತು ಒಪ್ಪಂದದ ತರುವಾಯ ವಿವಾಹದ ಕಾರ್ಯ ಪ್ರಾರಂಭವಾಗುತ್ತದೆ ತಿಗಳ ಸಮುದಾಯದಲ್ಲಿ ವಿವಾಹವು ಕೇವಲ ಒಂದು ಕುಟುಂಬಕ್ಕೆ ಸಂಬಂಧಿಸಿರದೆ ಅದು ಇಡಿಯಾಗಿ ಆ ಊರಿನ ಜನತೆಗೆ ಸಂಬಂಧಿಸಿದ್ದು ಪ್ರತಿಯೊಂದು ಕಾರ್ಯವು ಕುಲದ ವ್ಯವಸ್ಥೆಯ ಅನುಗುಣವಾಗಿ ಮತ್ತು ಕುಲದ ಸದಸ್ಯರ ಸಹಾಯ

ಸಹಕಾರದೊಂದಿಗೆ ಒಂದು ಸಾಮಾಜಿಕ ಹಬ್ಬವಾಗಿ ನಡೆಯುವುದನ್ನ ಕಾಣಬಹುದು ವಿವಾಹದ ಕಾರ್ಯದ ಕಡ್ಡಾಯ ಎಲ್ಲ ಮನೆಯ ಒಬ್ಬರು ಸ್ತ್ರೀ ಮತ್ತು ಪುರುಷ ಕುಲದ ಮುಖಾಂತರ ವಿವಾಹದ ಕಾರ್ಯಮಾಡಲು ಬರಬೇಕಾಗಿತ್ತು ಇಲ್ಲಿ ಯಾವುದೇ ವಯಕ್ತಿಕ ದ್ವೇಷಗಳಿದ್ದರೂ ಕೂಡ ಅವನ್ನೆಲ್ಲ ಬಿಟ್ಟು ಕುಲದಂತೆ ಭಾಗವಹಿಸಬೇಕಾಗಿತ್ತು ಮತ್ತು ಅವರು ಮದುವೆ ಮುಗಿದು ವಿಳ್ಯೆಯವನ್ನು ಪಡೆದೇ ಮನೆಗೆ ಹಿಂತಿರುಗ ಬೇಕಾಗಿತ್ತು ಇದು ಅವರ ಕುಲದ ಪದ್ಧತಿಯ ಒಗ್ಗಟ್ಟನ್ನ ಪ್ರತಿ ಬಿಂಬಿಸುತ್ತದೆ.

ಸೌದೆ ಸಾಗು ತರುವುದು:

ವಿವಾಹ ಕಾರ್ಯವು ಮೊದಲಿಗೆ ಸೌದೆ ಕಡಿಯುವ ಕೆಲಸದಿಂದ ಆರಂಭಗೊಳ್ಳುತ್ತದೆ ಮದುವೆ ನಿಶ್ಚಿತಾರ್ಥವಾದಂತಹ ದಿನಾಂಕಕ್ಕಿಂತ ಮುಂಚೆ 15 ದಿನದಲ್ಲಿ ಈ ಕೆಲಸ ನಡೆಯುತ್ತದೆ ಇದು ಮದುವೆ ದಿನಾಂಕವನ್ನ ಗೊತ್ತುಪಡಿಸಿದಾಗ ಹೆಣ್ಣಿನ ಮನೆಯಿಂದ ಅಥವಾ ಕುಲದಿಂದ ಸೌಧೆ ಒಡೆಯಲು ಅನುಮತಿಯನ್ನು ತರಲಾಗುತ್ತದೆ ಇದನ್ನ 'ಸೌದೆ ಸಾಗು' ತರುವುದೆಂದು ಕರೆಯುತ್ತಾರೆ.

ಅಕ್ಕಿರಾಗಿ ಮಾಡುವುದು:

ಮದುವೆಗೆ ಬೇಕಾದಂತಹ ಅಕ್ಕಿರಾಗಿ ಮಾಡುವುದು ಅಂದರೆ ಹಿಂದೆ ಆಧುನಿಕ ಸೌಲಭ್ಯವಿಲ್ಲದ ಆ ಕಾಲದಲ್ಲಿ ಭತ್ತಕುಟ್ಟುವ, ರಾಗಿ ಬಿಸುವ ಕೆಲಸವನ್ನು ಮಾಡುತ್ತಿದ್ದರು ಇಂತಹ ಕೆಲಸದಲ್ಲಿ ಕಡ್ಡಾಯವಾಗಿ ಕುಲದ ಎಲ್ಲ ಮನೆಯ ಒಂದೊಂದು ಹೆಣ್ಣಾಳುಗಳು ಭಾಗವಹಿಸಬೇಕಾಗಿತ್ತು. ಅಕ್ಕಿ ರಾಗಿ ಮಾಡುವ ಸಮಯದಲ್ಲಿ ಹೆಣ್ಣು ಅಥವಾ ಗಂಡು ಅಕ್ಕಿ ತಿಂದರೆ ಮದುವೆಯಲ್ಲಿ ಮಳೆಬಂದು ಅಡ್ಡಿಮಾಡುವುದೆಂಬ ನಂಬಿಕೆಯನ್ನು ಕೂಡ ಹೊಂದಿದ್ದರು.

ಲಗ್ನ ಕಟ್ಟಿಸುವುದು:

ಮದುವೆ ಸಮೀಪಿಸುತ್ತಿದ್ದಂತೆ ಲಗ್ನಪತ್ರಿಕೆಗಳನ್ನು ನಂಟರಿಗೆ ಸಂಬಂಧಿಗಳಿಗೆ ಹಂಚುವ ಮುನ್ನ ಗಂಡಿನ ಕಡೆಯವರು ಹೆಣ್ಣಿನ ಮನೆಯಲ್ಲಿ ಕುಲದವರನ್ನು ಭೇಟಿಮಾಡಿ ಗೌಡ, ಅಣೆಕಾರ, ಮುದ್ರೆಯವರ ಸನ್ನಿಧಾನದಲ್ಲಿ ಕುಲದೇವರ ಪ್ರತೀಕವಾದಂತಹ ಕಳಶವನ್ನು ಪ್ರತಿಷ್ಟಾಪಿಸಿ ಲಗ್ನಪತ್ರಿಕೆಗೆ ಕುಂಕುಮಾದಿಗಳನ್ನಿಟ್ಟು ಪೂಜೆಮಾಡಿ, ಪರಸ್ಪರ ಗಂಡಿನ ಕಡೆಯವರು ಮತ್ತು ಹೆಣ್ಣಿನ ಕಡೆಯವರು ವಿಳ್ಯೆದೆಲೆಯ ಮೇಲೆ ಪ್ರತಿಕೆಯನ್ನಿಟ್ಟು ವಿನಿಮಯ ಮಾಡುತ್ತಾ 'ನಿಮ್ಮೆಣ್ಣ ಕೊಟ್ಟು ನಮ್ಮನೆ ಬೆಳೆಸು' ಎಂದು ಹೇಳುತ್ತಾ ಪರಸ್ಪರ ಪಡೆಯುತ್ತಾರೆ ಇದಾದ ನಂತರ ಮದುವೆಯವರೆವಿಗೂ ಯಾವುದೇ ರೀತಿಯ ಮಾಂಸಾಹಾರವನ್ನು ಮನೆಯಲ್ಲಿ ಮಾಡುವಂತಿಲ್ಲ ಎಂದು ನಂಬಿದ್ದಾರೆ.

ಹೊನ್ನಿಳ್ಯ ತರುವುದು:

ಇದು ಮದುವೆಗೆ ಒಂದು ದಿನ ಮುಂಚೆ ಹೆಣ್ಣಿನ ಮನೆಗೆ ಗಂಡಿನ ಕಡೆಯವರು 150ಕುಚ್ಚು ಹೂವು, ಅರಿಶಿನ, ಕುಂಕುಮ, ಬಳೆಬಂಗಾರ, ತೆಂಗಿನಕಾಯಿ, 25 ಕಟ್ಟು ಎಲೆ, 10 ಸೇರು ಅಡಿಕೆ, 1ಕೊಬ್ಬರಿ, 1ಅಚ್ಚು ಬೆಲ್ಲ, 5 ಉತ್ತುತ್ತಿ ಹಣ್ಣು, 5 ಉಂಡೆ ತಂಬಿಟ್ಟು, 1 ಸೇರು ಕಡ್ಲೆ ಇವೆಲ್ಲವನ್ನು ತೆಗೆದುಕೊಂಡು ಹೋಗುತ್ತಾರೆ ಗೌಡರ ಸನ್ನಿಧಾನದಲ್ಲಿ ಇವುಗಳಿಗೆ ಪೂಜೆಯನ್ನು ಮಾಡಿ ನೆರೆದಿರುವ ರಾಶಿಗೆ ಹಂಚುವುದು ಮತ್ತು ಹೆಣ್ಣಿಗೆ ಶಾಸ್ತ್ರವನ್ನ ಮಾಡಿ ಮಡಿಲನ್ನು ತುಂಬುವುದು ಮತ್ತು ಇದನ್ನು ತೆಗೆದು ಕೊಂಡು ಬಂದವರು ಹೆಣ್ಣನ್ನು ಕರೆದುಕೊಂಡು ಹೋಗುವವರ ಜೊತೆಯಲ್ಲಿಯೇ ತಮ್ಮ ಊರನ್ನು ಸೇರುತ್ತಾರೆ.

ವಿವಾಹ ಆರಂಭ:

ತಿಗಳ ಸಮುದಾಯದಲ್ಲಿ ವಿವಾಹವು 5 ದಿನಗಳವರೆಗೆ ಜರುಗುತ್ತಿದ್ದವು ಇವು ಒಂದು ರೀತಿಯಾದಂತಹ ಸಾಮೂಹಿಕ ಹಬ್ಬದಂತೆ ನಡೆಯುತ್ತಿದ್ದವು ಅಂದರೆ ಕುಲದ ಪ್ರತಿಯೊಬ್ಬರ ಮನೆಯಿಂದಲೂ ಒಂದು ಗಂಡು, ಒಂದು ಹೆಣ್ಣು ಪರಸ್ಪರ ಭಾಗವಹಿಸುತ್ತಿದ್ದರು, ಮತ್ತು ಮದುವೆ ಕಾರ್ಯಹೆಚ್ಚು ಗಂಡಿನ ಮನೆಯಲ್ಲಿ ನಡೆಯುತ್ತಿದ್ದವು ಮತ್ತು ಹೆಣ್ಣನ್ನ ಎಲ್ಲ ಶಾಸ್ತ್ರಾದಿಗಳನ್ನು ತಮ್ಮ ಮನೆಯಲ್ಲಿಯೇ ಮಾಡಿಕೊಂಡು ಮದುವೆಗೆ ಕರೆದು ಕೊಂಡು ಬರುತ್ತಿದ್ದರು ಮದುವೆ ಕಾರ್ಯ ಮೊದಲು ಪ್ರಾರಂಭವಾಗುವುದು ಬಳೆಶಾಸ್ತ್ರ ಮತ್ತು ಅರಿಶಿನ ಶಾಸ್ತ್ರದಿಂದಲೇ ಎನ್ನಬಹುದು.

ಬಳೆ ಶಾಸ್ತ್ರ:

ಹೊನ್ನಿಳ್ಯ ಶಾಸ್ತ್ರಕ್ಕೊ ಮೊದಲು ಹೆಣ್ಣಿಗೆ ಬಳೆ ತೊಡಿಸುವ ಶಾಸ್ತ್ರ ಮಾಡುತ್ತಾರೆ ಬಳೆಶೆಟ್ಟರನ್ನ ಮನೆಗೆ ಬರಮಾಡಿಕೊಂಡು ಅವರಿಗೆ 1 ಸೇರು ಅಕ್ಕಿ, 1 ಅಚ್ಚು ಬೆಲ್ಲ, 1 ತೆಂಗಿನಕಾಯಿ, ಒಂದು ಚಿಪ್ಪು ಬಾಳೆಹಣ್ಣು, ಎಲೆ ಅಡಿಕೆ ಮತ್ತು ದಕ್ಷಿಣೆ ಇಟ್ಟು ಪೂಜೆಮಾಡಿ ಬಳೆಗಳಿಗೆ ಶರಣುಮಾಡಿ ಹೆಣ್ಣು ನನ್ನ ಬಳೆಹಾಕುವ ಭಾಗ್ಯ ತನ್ನ ಜೀವನದ ಕೊನೆ ತನಕ ಇರಲೆಂದು ಬೇಡಿಕೊಂಡು ಅನಂತರ ಹೆಣ್ಣಿನ ಕೈಗೆ ಮೂರು ಡಜನ್ ಕರಿ ಬಳೆಯನ್ನು ಕೊಡಿಸುತ್ತಾರೆ. ಆಗ ತೊಟ್ಟಂತಹ ಬಳೆಯನ್ನು ಗೌರಿಯಬ್ಬದ ತನಕ ಯಾವುದೇ ಕಾರಣಕ್ಕೂ ಹೆಣ್ಣು ತೆಗೆಯುವಂತಿಲ್ಲ.

ಬಳಗದ ಬಳೆಯೆಂದು ನೆರೆಹೊರೆಯರಿಗೂ ಮತ್ತು ಬಂದಿರುವಂತಹ ಸಂಬಂಧಿಕರಿಗೆ ಶಾಸ್ತ್ರದ ಬಳೆಯಾಗಿ ತೊಡಿಸುತ್ತಾರೆ ಈ ಬಳೆತೊಡಿಸುವ ಶಾಸ್ತ್ರವನ್ನು ಗಂಡಿನ ಮನೆಯಲ್ಲಿಯೂ ಕೂಡ ಮಾಡುತ್ತಾರೆ.

ಗಂಡು ಹೆಣ್ಣುಗಳಿಗೆ ಅರಿಶಿನ ಶಾಸ್ತ್ರ ಮಾಡುವುದು:

ತಿಗಳರಲ್ಲಿ ಯಾವುದೇ ಕಾರ್ಯವನ್ನ ಮಾಡುವ ಮೊದಲು ಕಳಶ ಊಡಿಕೆಯನ್ನು ಮಾಡುತ್ತಾರೆ ಏಕೆಂದರೆ ಇದು ಅವರ ದೇವರ ಪ್ರತಿರೂಪವೆಂದು ನಂಬಿದ್ದರಿಂದಾಗಿ, ಅದಿಲ್ಲದೆ ಯಾವುದೇ ಕೆಲಸಗಳನ್ನು ಅವರು ಮಾಡುವುದಿಲ್ಲ ಕಳಸವನ್ನ ಅಡಕೆ ಹೊಂಬಾಳೆಯಿಂದ ಒಂದು ಬಗಣೆಯಲ್ಲಿ ಅಕ್ಕಿನ ಹಾಕಿ ಬೆಲ್ಲ, ಬಾಳೆಹಣ್ಣು, ಅರಿಸಿನ, ಕುಂಕುಮ ವಿಭೂತಿ ಎಲ್ಲವನ್ನ ಅದರಲ್ಲಿಟ್ಟು ಪ್ರತಿಷ್ಠಾಪಿಸುತ್ತಾರೆ ಇದಕ್ಕೆ ಯಾವುದೇ ರೀತಿಯಾದ ವಿಭೂತಿ, ಬಿಸಿಲು ಮಳೆ ಬೀಳದಂತಿರಲೆಂದು 'ತಳಿ' ಎಂದು ಕೊಡೆಗೆ ಬಳಿ ವಸ್ತ್ರವನ್ನು ಕಟ್ಟಿ ಅದರ ಮೇಲೆ ಯಾವಾಗಲೂ ಹಿಡಿದಿರುತ್ತಾರೆ ಇದು ಮದುವೆಯ ನಂತರವು ಕೂಡ 30 ದಿನಗಳ ಕಾಲ ಹೂಡಿದಂತಹ ಮನೆಯಲ್ಲಿ ಇರಬೇಕೆಂಬ ನಂಬಿಕೆಯನ್ನು ಉಳ್ಳವರಾಗಿದ್ದಾರೆ.

ಈ ಕಳಸ ಹೂಡಿದ ನಂತರ ಗಂಡು ಹೆಣ್ಣುಗಳಿಗೆ ಶಾಸ್ತ್ರ ಮಾಡಿಸಲು ಶಾಸ್ತ್ರದ ನೀರನ್ನು ತರುವುದು ಇದನ್ನು ತುವಾಗ ಬಾವಿಯ ಹತ್ತಿರ ಗಂಗೆ ಪೂಜೆಯನ್ನು ಮಾಡಿ ಹೊಸ ಮಡಿಕೆಯಲ್ಲಿ ಮೂರು ಜನ ಮುತ್ತೈದೆಯರು ನೀರನ್ನು ಹೊತ್ತು ತರುತ್ತಾರೆ ಅಂತಹ ಸಂದರ್ಭದಲ್ಲಿ ಮಂಗಳವಾದ್ಯ ಮತ್ತು ಅಗಸರ ಪತ್ತನ್ನ ಕಡ್ಡಾಯವಾಗಿ ಇವರೊಂದಿಗೆ ಕರೆದ್ಯೊದಿರುತ್ತಾರೆ ಮತ್ತು ಕರೆದ್ಯೊಯಲೇ ಬೇಕು. ಶಾಸ್ತ್ರದ ನೀರನ್ನು ತಂದ ನಂತರ ಶಾಸ್ತ್ರದ ಭತ್ತವನ್ನು ಕುಟ್ಟುವ ಶಾಸ್ತ್ರ, ಇಲ್ಲಿ ಒಬ್ಬರು ಗಂಡಸರು, ಇಬ್ಬರು ಹೆಂಗಸುರ ಒನಕೆ ಪೂಜೆ ಮಾಡಿ ಕುಟ್ಟುತ್ತಾರೆ. ಮತ್ತು ಕುಟ್ಟಿದ ನಂತರ ಗಂಡು ಅಥವಾ ಹೆಣ್ಣಿಗೆ (ಅವರವರ ಮನೆಯ ಅನುಸಾರ) ಹಸೆ ಮಣೆ ಮೇಲೆ ಕೂರಿಸಿ ಕಾಲಿಗೆ ಕುರಿ ಕಂಬಳಿಯ ತಯಾರಿಸಿದ ಕಂಕಣವನ್ನು ಕಟ್ಟಿ, ಗಂಡಿಗೆ ಬೆಳ್ಳಿಯ ಮಿಂಚನ್ನು (ಕಾಲುಂಗರ) ಇಟ್ಟು ಹೆಣ್ಣಿಗೆ ಕಾಲುಂಗರಗಳನ್ನಿಟ್ಟು 9 ಜನರು ಶಾಸ್ತ್ರ ಮಾಡುತ್ತಾರೆ ಇದು ಅತ್ಯಂತ ವಿಶಿಷ್ಟವಾದಂತಹ ಆಚರಣೆಯಾಗಿದೆ. ನಂತರ ತಂದಂತಹ ಶಾಸ್ತ್ರದ ನೀರನ್ನ ಕಾಯಿಸಿ ಸ್ನಾನ ಮಾಡಿಸುತ್ತಾರೆ ಅಲ್ಲಿಂದ ಮುಂದೆ ಮದುವೆಗೆ ಗಂಡು ಅಥವಾ ಹೆಣ್ಣು ಸಿದ್ದವಾಗುತ್ತದೆ ಮತ್ತು ಅನಂತರ ಒಬ್ಬೊಬ್ಬರನ್ನೇ ಎಲ್ಲಿಗೂ

ಕಳಿಸುವಂತಿಲ್ಲ ಅವರು ಎಲ್ಲಾದರೂ ಹೋಗಬೇಕಾದರೆ ಜೊತೆಯಲ್ಲಿ ಯಾರನ್ನಾದರೂ ಕರೆದುಕೊಂಡೇ ಹೋಗಬೇಕಾಗುತ್ತದೆ.

ಚಪ್ಪರ ಶಾಸ್ತ್ರ:

ಮದುವೆ ಮನೆಯ ಮುಂದೆ ಒಂದು ದಿನ ಮುಂಚಿತವಾಗಿ ಗ್ರಾಮ ಕುಲಬಾಂದವರೆಲ್ಲ ಸೇರಿ ತೆಂಗಿನ ಹಸಿಗರಿಯಿಂದ ಚಪ್ಪರ ಎಣೆಯುತ್ತಾರೆ ಮತ್ತು ಧಾರೆ ಚಪ್ಪರವೆಂದು ಮತ್ತೊಂದು ಚಿಕ್ಕ ಚಪ್ಪರವನ್ನು (ಕೆಲವು ಬುಡಕಟ್ಟುಗಳಲ್ಲಿ ಮಾತ್ರ) ಮನೆ ಬಾಗಿಲಿಗೆ ನೇರವಾಗಿ ಹಾಕಿ, ಚಪ್ಪರ ನಾಲ್ಕು ಮೂಲೆಗೂ ತಂಗಿನ ಎಳನೀರನ್ನು ಮತ್ತು ಮಾವಿನ ಪತ್ರೆ, ಕತ್ತಿಹೂವಿನ ಸೊಪ್ಪುಗಳನ್ನು ಕಟ್ಟುತ್ತಾರೆ.

ನಂತರ ತಾವು ಮದುವೆಗೆ ತಂದಂತಹ ಒಡವೆ ಬಟ್ಟೆ ಇನ್ನಿತರ ಬೆಲೆಬಾಳುವ ಸಾಮಗ್ರಿಗಳನ್ನು ದೇವರಿಗಿಟ್ಟು ಪೂಜೆ ಮಾಡುತ್ತಾರೆ ಇಂತಹ ಸಂದರ್ಭದಲ್ಲಿ ಕೆಲವರು ಸಿಹಿ ಊಟದ ಎಡೆ ಮಾಡುತ್ತಾರೆ. ಮತ್ತೆ ಕೆಲವರು ಮಾಂಸದೂಟವನ್ನು ಎಡೆಮಾಡುತ್ತಾರೆ. ಪೂಜೆಯ ನಂತರ ಚಪ್ಪರ ಹಾಕಲು ಬಂದಂತಹ ಕುಲಬಂಧುಗಳಿಗೆ, ನೆರೆಹೊರೆಯವರಿಗೆ ಹಾಗೂ ಬಂಧುಗಳಿಗೆ ಊಟಕ್ಕೆ ನೀಡುತ್ತಾರೆ.

ಧಾರೆ ಕಂಬ ತರುವುದು:

ತಿಗಳರು ಸಾಮಾನ್ಯವಾಗಿ ಮನೆಬಾಗಿಲಲ್ಲೇ ಮದುವೆ ಕಾರ್ಯಗಳನ್ನ ಮಾಡಿಕೊಳ್ಳುವುದರಿಂದಾಗಿ ಕೆಲವು ದೇವರ ಪ್ರತಿರೂಪಗಳೆಂದು ನಂಬಿ ಅದರ ಸಂಕೇತಗಳಾದ ಕೆಲವು ವಸ್ತಗಳನ್ನ ತಂದು ಪ್ರತಿಷ್ಠಾಪಿಸುತ್ತಾರೆ ಇವರು ಧಾರೆ ಕಂಬವೆಂದು ಒಂದು ಬಗೆಯ ಉಂಡು ಕರಳಿಯನ್ನು ತರುತ್ತಾರೆ ಏಕೆಂದರೆ ಇದು ಎಲ್ಲಿ ಬೇಕಾದರು ಚಿಗುರುತ್ತದೆಂದು ಅದೇ ರೀತಿ ಗಂಡು ಹೆಣ್ಣಿನ ಜೀವನ ಸದಾ ಸಂವೃದ್ಧವಾಗಿರಲೆಂಬ ನಂಬಿಕೆ. ನಂತರ ಆ ಕಳ್ಳಿಗೆ 'ಅರಳಿ ಎಲೆ'ಯನ್ನು ಕಟ್ಟಿರುತ್ತಾರೆ ಇದು ಅಶ್ವಥನಾರಾಯಣನ ಪ್ರತಿರೂಪವೆಂದು ಅವನು

ಇರುವಿಕೆಗಾಗಿ ನಿಲ್ಲಿಸುತ್ತಾರೆ. ಇವನ್ನು ಮೊದಲು ಊರಿನ ದೇವಸ್ಥಾನದ ಹತ್ತಿರ ಇಟ್ಟು ಪೂಜೆಮಾಡಿ ಕೊಂಡು ಮಂಗಳ ವಾದ್ಯದೊಂದಿಗೆ ಕಳಸದ ಸಹಯೋಗದೊಂದಿಗೆ ರಾಜಮರ್ಯಾದೆಯಲ್ಲಿ ತಂದು ಮಣ್ಣಿನಗದ್ದುಗೆ ಮಾಡಿ ಇದರ ಬುಡಕ್ಕೆ ಹಾಲು ಮೊಸರು ಒಂದು ನಾಣ್ಯವನ್ನು ಹಾಕಿ ನಿಲ್ಲಿಸಿ ಅದಕ್ಕೆ ಅಡಕೆ ಹೊಂಬಾಳೆಯನ್ನು ಕಟ್ಟಿ ಪೂಜೆಸಲ್ಲಿಸುತ್ತಾರೆ.

ಅರುಣೆ ಶಾಸ್ತ್ರ:

ಅರುಣೆಯೆಂದರೆ ಕೆಮ್ಮಣ್ಣು ಸುಣ್ಣ ಹಸಿರು ಪತ್ರೆ ರಸದದಿಂದ ಚಿತ್ರ ಬಿಡಿಸಿ ತಂದಂತಹ ಪ್ರತಿಜ್ಞಕ್ಕಾಗಿ ತರುವಂತಹ ಪರಿಕರಿ ಇವುಗಳನ್ನು ತಿಗಳರು ನವಗ್ರಹಗಳೆಂದು ನಂಬಿರುತ್ತಾರೆ ಇದಕ್ಕೆ ಮೂರು ಹೊಸ ಮಡಿಕೆ ಮತ್ತು ನಾಲ್ಕು ಕೂಡಿಕೆಗಳು ಇರುತ್ತವೆ ಇವುಗಳನ್ನು ಮಂಗಳ ವಾದ್ಯದೊಂದಿಗೆ ಮೂರು ಜನ ಸಾಲಾಗಿ ಹೊತ್ತುಕೊಂಡು ಬರುತ್ತಾರೆ. ಅವನ್ನು ಧಾರೆಕಂಬದ ಗದ್ದುಗೆಯ ಮೇಲೆ ತ್ರಿಭುಜಾಕಾರದಲ್ಲಿ ಪ್ರತಿಷ್ಠಾಪಿಸಿ ಅವುಗಳಲ್ಲಿ ನವಗ್ರಹ ಧಾನ್ಯಗಳನ್ನಾಕಿ ನಂತರ ಮುದ್ರೆಯವರು ಸುತ್ತಲೂ ತೆರೆಯನ್ನೂ ಬಿಟ್ಟುಕೊಂಡು ಹೊಸಮರದಲ್ಲಿ ಅನ್ನವನ್ನು ತಂದು ಅವುಗಳಿಗೆ ಎಡೆಮಾಡುವುದನ್ನು ಕಾಣಬಹುದು ನಂತರ ಅದರ ಪಕ್ಕದಲ್ಲಿ ಒಂದು ತಟ್ಟೆಯಲ್ಲಿ ಉಪ್ಪು ಒಂದು ತಟ್ಟೆಯಲ್ಲಿ ಅಕ್ಕಿ ತುಂಬಿಟ್ಟಿರುತ್ತಾರೆ. ಧಾರೆಯೆರೆಯುವ ಸಂದರ್ಭದಲ್ಲಿ ಇಬ್ಬರಿಂದಲೂ (ಗಂಡು–ಹೆಣ್ಣು) ಮುಟ್ಟಿಸಿ ಪ್ರಮಾಣ ಮಾಡಿಸುತ್ತಾರೆ. ಅಂದರೆ ನಾನು ನಿನ್ನನ್ನ ಉಪ್ಪಿನ ಋಣ ತೀರುವವರೆಗೆ ಬಿಡುವುದಿಲ್ಲವೆಂದೂ, ಎಲ್ಲಾ ಕಷ್ಟ–ಸುಖದಲ್ಲಿಯೂ ನಿನ್ನೊಂದಿಗೆ ಇರುತ್ತೇನೆಂದು ಈ ಮೂಲಕ ಭಾಷೆ ನೀಡುವುದಾಗಿರುತ್ತದೆ. ಹಾಗೂ ಧಾರೆ ಕಂಬದ ಮುಂಭಾಗದಲ್ಲಿತ್ತು "ಮರಳಿನಿಂದ ಮಾಡಿದಂತಹ" ಅಗ್ನಿ ಬನ್ನಿರಾಯ ಪ್ರತಿರೂಪವಾದಂತಹ ದೀಪವನ್ನು ಹಚ್ಚುತ್ತಾರೆ ಹಿಂದೆ ಇದಕ್ಕೆ ತೆಂಗಿನ ಎಳನೀರನ್ನು ಹಾಕಿ ಉರಿಸುತ್ತಿದ್ದರಂತೆ ಆದರೆ ಈಗ ಹೊಂಗೆ ಎಣ್ಣೆಯನ್ನು ಹಾಕುತ್ತಾರೆ ಇದು ಯಾವುದೇ ಕಾರಣಕ್ಕೂ ಮದುವೆಯಾಗುವವರೆವಿಗೂ ಸಂದುವಂತಿಲ್ಲ.

ಹೆಣ್ಣನ್ನು ಕರೆತರುವ ಮತ್ತು ಬಿಡದಿ ಬಿಡುವುದು:

ಊರಿಗೆ ಬಂದಂತಹ ಹೆಣ್ಣನು ಮೊದಲು ದೇವಾಲಯ/ ಅಶ್ವತ್ಥಕಟ್ಟೆಯ ಸಮೀಪದಲ್ಲಿ ಬಿಟ್ಟು ನೀರು ಎಣ್ಣೆ, ಹೂವು ಚಾಚಣಿಗೆಯನ್ನ ನೀಡಿ ನಂತರ ಗೌಡ, ಮುದ್ರೆ, ಅಣೆಕಾರರು ಮಂಗಳವಾದ್ಯ ಅಗಸರ ದೀವಿಗೆ (ಪತ್ತು) ಕಳಸ, ಫಲಪುಷ್ಪಗಳೊಂದಿಗೆ ಹೋಗಿ ಕರೆತರುವುದು. ಕರೆತರುವ ಮೊದಲು ಹೂವಿನ ಮಾಲೆಯನ್ನ ಬಂದಂತಹ ನೆಂಟರಿಗೆ ನೀಡಿ ಶರಣು ಸಂಬಂಧ ಕೊಡುವುದು ಎಂದು ಆಮಂತ್ರಿಸುವುದು ಅಲ್ಲಿನ ದೇವಾಲಯಕ್ಕೆ ಪೂಜೆ ಸಲ್ಲಿಸಿ ಚಪ್ಪರವನ್ನು ನೋಡದ ಹಾಗೆ ಸಂಬಂಧಿಕರ ಮನೆಯಲ್ಲಿ ಬೀಡು ಬಿಡುವುದು ಅದು ಅಣ್ಣ–ತಮ್ಮಂದಿರ ಮನೆಯಾಗಿರದೆ ಮಾವಂದಿರ ಮನೆಯಾಗಿರ ಬೇಕು.

ಪಾನಕ ಬೀರುವುದು:

ಬಿಡದಿ ಬಿಟ್ಟಂತಹ ಮನೆಗೆ ಅಂದರೆ ಹಿಂದೆ ದೂರದೂರಿನಿಂದ ಎತ್ತಿನಗಾಡಿಯಲ್ಲಿಯೇ ಮದುವೆಗೆ ಬರುತ್ತಿದ್ದರಿಂದ ಧಣಿವನ್ನು ನಿವಾರಿಸಲು ಪಾನಕ ಬೀರುವ ಶಾಸ್ತ್ರವನ್ನು ಮಾಡುತ್ತಿದ್ದರು ಅಂದರೆ ಒಂದು ಗಡಿಗೆಯಲ್ಲಿ ಪಾನಕ ಅಡಕೆ, ಎಲೆ, ಬಾಳೆಹಣ್ಣುಗಳನ್ನು ಕೊಂಡ್ಯೊದು ಅವನ್ನು ಪೂಜೆಮಾಡಿ ತಮ್ಮ ಕುಲದ ಸಮುದಾಯದ ಭಾಗಗಳಾದಂತ ಕಟ್ಟೆ, ಗಡಿ, ದೇಶದ ಬಂಧು ಬಾಂದವರನ್ನು ಕರೆದು ವಿಳ್ಯೆ ನೀಡಿ ಪಾನಕವನ್ನು ನೀಡಿ ನೆಂಟರನ್ನು ಸಂತೃಸುವ ಪದ್ಧತಿಯಾಗಿತ್ತು.

ಹೆಣ್ಣಿಗೆ ಉಡುಗೆ ನಡೆಸುವುದು:

ಬಿಡದಿಮನೆಗೆ ಗಂಡಿನವರು ಕೊಡಬೇಕಾಗಿದ್ದ ಧಾರೆ ಸೀರೆ ಒಡವೆಗಳನ್ನು ಧಾರೆಯ ಬೆಳಿಗ್ಗೆ ಬಿಡದಿ ಮನೆಗೆ ಮಂಗಳವಾದ್ಯ ಮತ್ತು ಗೌಡ, ಮುದ್ರೆ, ಅಣೆಕಾರ ಸಾಕ್ಷಿಯಲ್ಲಿ ಹೆಣ್ಣಿಗೆ ಒಡವೆ, ವಸ್ತ್ರ, ಅರಿಸಿನ, ಕುಂಕುಮ, ಹೂವು, ಎಣ್ಣೆ, ಬಾಚಣೆಗೆ, ಎಲ್ಲ ಶೃಂಗಾರದ ಸಾಮಗ್ರಿಯನ್ನು ನೀಡುವಂತಹ ಶಾಸ್ತ್ರವಾಗಿದೆ.

ತುಳಸಿ ಮಾಲೆಧಾರಣೆ:

ಪುರೋಹಿತ ಹಣತಿಯಂತೆ ವರ ವಧುವಿನ ಕೊರಳಿಗೆ ತುಳಸಿ ಮಾಲೆಯನ್ನು ಹಾಕುತ್ತಾನೆ, ತದನಂತರ ವಧು ವರನಿಗೆ ಹಾಕುತ್ತಾಳೆ. ಮದುವೆ ಸಂದರ್ಭದಲ್ಲಿ ತುಳಸಿ ಮಾಲೆಧಾರಣೆಯು ಒಂದು ದಂತಕಥೆಯನ್ನು ಒಳಗೊಂಡಿದೆ. ತಿಗಳ ಜನಾಂಗದವರು ಕ್ಷತ್ರಿಯರಾಗಿದ್ದು ಬೇರೆ ರಾಜ್ಯಗಳ ಮೇಲೆ ಯುದ್ಧ ಮಾಡುತ್ತಿದ್ದರು, ಇವರು ಯುದ್ಧ ಮಾಡುವ ಸಮಯ ಬಹಳ ತಿಂಗಳುಗಳೇ ಆಗುತ್ತಿತ್ತು ಆ ಸಮಯದಲ್ಲಿ ಅವರು ಮನೆಗಳಲ್ಲಿ, ಊರುಗಳಲ್ಲಿ, ಹೆಂಗಸರು ಮಕ್ಕಳನ್ನು ಬಿಟ್ಟು ಹೋಗಬೇಕಾಗಿತ್ತು. ಇವರು ಯುದ್ಧಕ್ಕೆ ಹೊರಡುವಾಗ ಒಂದೊಂದು ತುಳಸಿ ಗಿಡವನ್ನು ಮನೆಯ ಮುಂದೆ ನೆಟ್ಟು ಹೋಗುತ್ತಿದ್ದರೆಂದು, ಆ ತುಳಸಿ ಸಸಿ ಚೆನ್ನಾಗಿ ಚಿಗುರಿ ಬೆಳೆಯುತ್ತಿದ್ದರೆ ಯುದ್ಧಕ್ಕೆ ಹೋದವರು ಗೆದ್ದು ಜಯಶಾಲಿಗಳಾಗುತ್ತಾರೆಂದು, ಅದು ಒಣಗಿ ನಾಶವಾದಲ್ಲಿ ಅವರು ಸೋತು ಅಥವಾ ಪ್ರಾಣವನ್ನು ತೆಜಿಸ್ಸುವರೆಂದು ನಂಬಿದ್ದರು.

ಇತ್ತೀಚಿನ ದಿನಗಳಲ್ಲಿ ತುಳಸಿ ಮಹತ್ವ ತುಂಬಾ ಇದ್ದು ಇದನ್ನು ಪೂಜೆ, ಪುರಸ್ಕಾರಗಳಲ್ಲಿ ಬಳಸಲಾಗುತ್ತಿದ್ದು, ಅದರ ಸಾರವನ್ನು ತೆಗೆದು ಔಷಧಿಗಳನ್ನು ಸಿದ್ಧಪಡಿಸುತ್ತಿದ್ದಾರೆ. ತಿಗಳ ಜನಾಂಗದವರು ತುಳಸಿ ಕೃಷಿಯಲ್ಲಿ ನಿರತರಾಗಿದ್ದು ಅದನ್ನೇ ಒಂದು ವೃತ್ತಿಯಾಗಿ ಅನುಸರಿಸುತ್ತಾ ಜೀವನೋಪಾಯಕ್ಕೆ ಅನುಕೂಲ ಕಲ್ಪಿಸಿಕೊಂಡಿದ್ದಾರೆ. ಪ್ರಸ್ತುತ ರಾಮನಗರ ಜಿಲ್ಲೆಯ ಚನ್ನಪಟ್ಟಣ ತಾಲ್ಲೋಕಿನ ಅಂಬಾಡಿ ಹಳ್ಳಿ ಹಾಗೂ ಸುತ್ತ–ಮುತ್ತ ಗ್ರಾಮಗಳಲ್ಲಿ ತುಳಸಿಯನ್ನು ಏರಳವಾಗಿ ಬೆಳೆಯುತ್ತಿದ್ದಾರೆ. ಈ ಕಾರಣದಿಂದ ಅಂಬಾಡಿ ಹಳ್ಳಿಯನ್ನು ತುಳಸಿಯ ರಾಜಧಾನಿ ಎಂತಲೂ, ತುಳಸಿಯನ್ನು ಮಾರುಕಟ್ಟೆಗೆ ಸಾಗಿಸುತ್ತಿರುವ ವಾಹನಗಳಿಗೆ ತುಳಸಿಯತೇರು ಎಂದು ಕರೆಯುವುದು ಸಂಶೋಧನೆಯಿಂದ ತಿಳಿದು ಬಂದಿದೆ.

ಧಾರೆಯ ದಿನದಂದು ಮಾಡುವ ಅಕ್ಕಿ, ಎಲೆಶಾಸ್ತ್ರ:

ಒಮ್ಮೊಮ್ಮೆ ಪ್ರತ್ಯೇಕವಾಗಿ ಗಂಡು ಮತ್ತು ಹೆಣ್ಣನ್ನ ಧಾರೆ ಚಪ್ಪರಕ್ಕೆ ಕರೆತಂದು ಒಂಟೊಂಟಿಯಾಗಿ ಕೂರಿಸಿ ಪಕ್ಕದಲ್ಲಿ ಗಂಡಿನ ಅಥವಾ ಹೆಣ್ಣಿನ ಇರುವಿಕೆಗಾಗಿ ಗಂಡು, ಹೆಣ್ಣುಗಳ ಪ್ರತಿರೂಪಗಳಾದಂತಹ ಗುಂಡು ಕಲ್ಲು ಹಾಗೂ ಅಕ್ಕಿ ತುಂಬಿದ ಬಿದಿರಿನ ಸೇರನ್ನ ಇಟ್ಟು ಐದು ಜನರು ಅಕ್ಕಿ ಮತ್ತು ಅರಳಿಯೆಲೆಯಿಂದ ಎಲೆ ಶಾಸ್ತ್ರವನ್ನು ಮಾಡುತ್ತಾರೆ ಶಾಸ್ತ್ರಮಾಡಿ ಮೊದಲಬಾರಿಗೆ ಹೆಣ್ಣನ್ನು ಬಾಗಿಲಪೂಜೆ ಮಾಡಿಸಿ ಗಂಡನ ಮನೆಗೆ ಬಿಟ್ಟರೆ ಗಂಡನ್ನ ಅರಳೀಮರದ ಕೆಳಗೆ 'ನೆರೆಬಿಡುವುದು' ಎಂದು ಬಿಡುತ್ತಾರೆ.

ಧಾರೆ ಮುಹೂರ್ತ:

ನೆರೆಬಿಟ್ಟಂತಹ ಗಂಡನ್ನ ಮತ್ತು ಹೆಣ್ಣನ್ನ ಕರೆತಂದು ಒಂದೆಡೆ ಅಕ್ಕಪಕ್ಕದಲ್ಲಿ ಪೂರ್ವಾಭಿಮುಖವಾಗಿ ಕೂರಿಸಿ ಮೊದಲು ಉಪ್ಪು, ಅಕ್ಕಿಯ ಮೇಲೆ ಕೈಯಿಟ್ಟು ಕಂಕಣ ಕಟ್ಟಿಸಿ ಉಪ್ಪು ಮತ್ತು ಅಕ್ಕಿಯ ಋಣ ಮುಗಿಯುವವರೆಗೆ ನಿನ್ನನ್ನ ಬಿಡುವುದಿಲ್ಲವೆಂದು ಪ್ರಮಾಣ ಮಾಡುಸುವವರು ಅದೇ ರೀತಿ ಧಾರೆಕಂಬದ ಎದುರು ಹಸಿಕಲ್ಲನ್ನು ಇಟ್ಟಿರುವವರು ಇದು ಹೆಣ್ಣು ತನ್ನ ಗಂಡ ಇದ್ದಾಗ ಬೇರೆ ಪುರುಷನನ್ನು ನೋಡಿದರೆ ಕಲ್ಲಾಗುವೆ ಎಂಬ ಎಚ್ಚರಿಕೆಯನ್ನು ನೀಡುವುದಕ್ಕಾಗಿ ಇಟ್ಟಿರುತ್ತಾರೆ ಮತ್ತೊಂದು ವಿಶೇಷವೆಂದರೆ ಇವರು ಮದುವೆಯ ಸಂದರ್ಭದಲ್ಲಿ ಬ್ರಾಹ್ಮಣ ಪುರೋಹಿತರನ್ನು ಆಹ್ವಾನಿಸುವುದಿಲ್ಲ ಕಾರಣ ಒಮ್ಮೆ ಸಮಯಕ್ಕೆ ಸರಿಯಾಗಿ ಮಾಂಗಲ್ಯ ಧಾರಣೆ ಮಾಡಿಲಸಲಿಲ್ಲವೆಂದು, ಮತ್ತು ಬಡವರಾದ ತಿಗಳರು ಅವರ ಖರ್ಚನ್ನು ಭರಿಸಲು ಅಸಹಾಯಕರಾಗಿದ್ದರೆಂದು ಕೆಲವರು ಹೇಳುತ್ತಾರೆ ಎಲ್ಲ ಶಾಸ್ತ್ರಗಳಾದ ಮೇಲೆ ಮುದ್ರೆ, ಗೌಡ, ಅಣೆಕಾರರ ಸಮೂಹದಲ್ಲಿ ಮೂಹೂರ್ತದ ಸಮಯಕ್ಕೆ ಸರಿಯಾಗಿ ತಾಳಿಯನ್ನು ಪೂಜೆ ಮಾಡಿಸಿ ಎಲ್ಲರಿಗೂ ತೋರಿಸಿ ಮಾಂಗಲ್ಯ ಧಾರಣೆಯ

ಮುನ್ನ "ಸಾವಿರ ಮನೆ ಕುಲಸ್ವಾಮಿಯ ಒಪ್ಪಿಗೆಯೇ?" ಎಂದು ಕೇಳಿ ಮಾಂಗಲ್ಲಯ ಧಾರಣೆ ಮಾಡಿಸುತ್ತಾರೆ ಇಲ್ಲಿಗೆ ಮದುವೆ ಒಂದು ಹಂತದಲ್ಲಿ ಮುಗಿಯುತ್ತದೆ.

ದೊಡ್ಡ ವಿಳ್ಯೆ ಎತ್ತುವ ಶಾಸ್ತ್ರ:

ಧಾರೆಯಾದ ಸಂಜೆ ಗಂಡು ಹೆಣ್ಣಿಗೆ ಪರಸ್ಪರ ಎಣ್ಣೆ ಹಚ್ಚಿಸಿ ಸ್ನಾನ ಮಾಡಿಸಿ ಹಸೆ ಹಚ್ಚುವಾಗ ಈ ಶಾಸ್ತ್ರವನ್ನು ಮಾಡುತ್ತಾರೆ ಅಂದರೆ ಇದು ಮದುವೆ ಸಂದರ್ಭದ ಕೊನೆಯ ವಿಳ್ಯೆ ನೀಡುವಂತಹದ್ದು ಇಲ್ಲ ಎಲೆ, ಅಡಿಕೆ, ಹಣ್ಣು, ಹೊಗೆಸೊಪ್ಪು ಎಲ್ಲವನ್ನು ಕಳಸ ಕನ್ನಡಿಯೊಂದಿಗೆ ಪೂಜೆಮಾಡಿ ತಮ್ಮ ಎಲ್ಲ ಕುಲದ ಒಕ್ಕೂಟವನ್ನು ಪ್ರತಿಬಿಂಬಿಸುವಂತೆ ಮತ್ತು ಅವರ ಗೈರು ಹಾಜರಿಯಲ್ಲಿಯು ಕೂಡ ಕಟ್ಟೆ, ದೇಶ, ಗಡಿಯ ನಾಮಾಂಕಿತ ವಿಳ್ಯೆವನ್ನು ನೀಡುವಂತಹ ಈ ಮುಖಾಂತರ ಗೌರವ ಸಲ್ಲಿಸುವುದನ್ನು ಕಾಣಬಹುದಾಗಿದೆ ಅಷ್ಟಲ್ಲದೆ ಇಲ್ಲಿಯವರೆವಿಗೂ ಕುಟುಂಬದಲ್ಲಿ ಒಬ್ಬರಂತೆ ಆಗಮಿಸಿ ಮದುವೆ ಮಾಡುತ್ತಿರುವಂತಹ ರಾಶಿಯ ಎಲ್ಲಾ ಕುಲಬಾಂದವರಿಗೂ ಎಲೆ ಅಡಿಕೆ ನೀಡಿ ಗೌರವ ಸೂಚಿಸುವಂತಹದ್ದು ಈ ವಿಳ್ಯೆವನ್ನು ನೀಡುವ ಮುಂಖಾಂತರ ಮದುವೆ ಕಾರ್ಯಕ್ಕೆ ನಾಂದಿಯಾಡುತ್ತಾರೆ.

ನಂಬಿಕೆಗಳು:

ಹೆಣ್ಣು ನೋಡಲು ಹೋಗುವಂತಹ ಸಂದರ್ಭದಲ್ಲಿ ಪಾಲಿಸುವಂತಹ ಕೆಲವು ನಂಬಿಕೆಗಳು ಸಾಮಾನ್ಯವಾಗಿ ಹೆಣ್ಣು ನೋಡಲು ಹೋಗುವಾಗ ಎಲ್ಲಿಗೆ ಎಂದು ಕೇಳಬಾರದು ಕೇಳಿದರೆ ಅಪಶಕುನವೆಂದು ನಂಬಿದ್ದಾರೆ. ಯಾವುದೇ ಶುಭ ಕಾರ್ಯಕ್ಕೆ ಹೊರಟಾಗ ಸೌದೆ, ಮಂಕರಿ, ಆರೇಕೋಲು, ಗುದ್ದಲಿ, ಹಾವು, ಖಾಲಿ ಕೊಡ, ವಿಧುವೆ ಈ ಮೊದಲಾದವರುಗಳು ಅಡ್ಡ ಬರಬಾರದೆಂಬ ನಂಬಿಕೆ. ಅಲ್ಲದೆ ಗಂಡಿನ ಮನೆಯವರು ಹೆಣ್ಣನ್ನು ನೋಡಲು ಹೆಣ್ಣಿನ ಮನೆಗೆ ಹೋದಾಗ ಹುಡುಗಿ ಋತುಮತಿಯಾಗಬಾರದು ಅಥವಾ ಮನೆಯಲ್ಲಿ ಮತ್ತು ಸಂಬಂಧಿಕರಲ್ಲಿ ಯಾವುದೇ ಸಾವು ನೋವು ಸಂಭವಿಸಬಾರದು. ಹೆಣ್ಣು ಮಗಳು ಶುಕ್ರವಾರ

ಹುಟ್ಟಿದರೆ ಅವಳ ಮದುವೆಯನ್ನು ಹೆಚ್ಚಾಗಿ ಹೆಣ್ಣಿನ ಮನೆ ಬಾಗಿಲಲ್ಲೇ ಮಾಡಬೇಕೆಂಬ ನಂಬಿಕೆ ಹೊಂದಿದ್ದಾರೆ. ಮನೆಯಲ್ಲಿ ಅಡಿಕೆಯನ್ನು ಹೆಚ್ಚಾಗಿ ಇಟ್ಟರೆ ಮದುವೆ ಕಾರ್ಯ ನಡೆಯುವುದಿಲ್ಲವೆಂಬ ನಂಬಿಕೆ.

ಆಕಸ್ಮಿಕವಾಗಿ ಹೆಂಡತಿ ಸತ್ತರೆ, ಗಂಡಿಗೆ ವರ್ಷಗಳಲ್ಲಿ ಬೇರೆ ಮದುವೆ ಮಾಡಬೇಕು ಇಲ್ಲದಿದ್ದರೆ ಮದುವೆ ಮಾಡುವಂತಿಲ್ಲ ಎಂಬ ನಂಬಿಕೆ. ಒಂದೇ ಕುಟುಂಬದಲ್ಲಿ ಮೂರು ಸಂಬಂಧಗಳು ಏರ್ಪಟ್ಟರೆ ಅಂತಹ ಮದುವೆ ಸಂದರ್ಭದಲ್ಲಿ ಒಂದು ಹಸುವಿನ ಕರು, ಒಂದು ಮೇಕೆಯನ್ನಾದರೂ 'ಬೆಳ್ಳುಳ್ಳಿ'ಯೆಂದು ಇತರ ಸಮುದಾಯಗಳಲ್ಲಿ 'ಅಡ್ಡುಳ್ಳಿ' ಎಂಬ ಇದೇ ರೀತಿಯ ಸಂಪ್ರದಾಯ ಇವೆ. ಮದುವೆಗೆ ಹೊರಟ ಹೆಣ್ಣಿನ ಜೊತೆ ಕಳುಹಿಸಬೇಕು. ಹೆಣ್ಣು ಮಗಳಿಗೆ ಜಡೆ ಉದ್ದವಿದ್ದರೆ ಗಂಡ ಹೆಚ್ಚು ದಿನ ಜೊತೆಯಲ್ಲಿ ಬಾಳಲ್ಲ ಎಂದು ನಂಬಿದ್ದಾರೆ. ಹುಡುಗನಿಗೆ ತಲೆಯಲ್ಲಿ ಎರಡು ಸುಳಿಯಿದ್ದರೆ ಆತನಿಗೆ ಇಬ್ಬರು ಹೆಂಡತಿಯರು ಎಂದು ನಂಬುತ್ತಾರೆ.

ಮದುವೆಯ ಸಂದರ್ಭದಲ್ಲಿ ವಿನೋದಕ್ಕಾಗಿ ಗಂಡು ಹೆಣ್ಣುಗಳ ಪರಸ್ಪರ ತೆಗಳುತ್ತಾರೆ. ಅಂತಹ ಸಂದರ್ಭದಲ್ಲಿ ಪರಸ್ಪರ ಹಾಡುಗಳ ಕಟ್ಟಿ ತೆಗಳುವುದನ್ನು ಕಾಣಬಹುದಕಾಗಿದೆ.

ಗಂಡನ ತೆಗಳುವ ಹಾಡು

ಮೂಗು ನೋಡೆಯಕ್ಕ

ಮೂಲಂಗಿ ಗೆಡ್ಡೆಯಕ್ಕ

ಹೋಗುತ್ತಾನೆ ಕರಿಯೇ

ಚೆನ್ನದ ರೇಖಿನಂತಹ ದೊರಿಯೇ

ಬಾಯಿ ನೋಡೆಯಕ್ಕ
ಬಂಕಾಪುರ ಕಣೇ ತಂಗಿ
ಹೋಗುತ್ತಾನೆ ಕರಿಯೇ
ಚೆನ್ನದ ರೇಖಿನಂತಹ ದೊರಿಯೇ

ಕಾಲು ನೋಡೆ ಯಕ್ಕ
ಅವು ಕದಲಿಕಂಬಕಾಣೆ
ಹೋಗುತ್ತಾನೆ ಕರಿಯೇ
ಚೆನ್ನದ ರೇಖಿನಂತಹ ದೊರಿಯೇ

ಕೈಯಿನೋಡೆಯಕ್ಕ
ಅದು ಬಾಳೆ ದಿಂಡು ಕಣೆಯಕ್ಕ
ಹೋಗುತ್ತಾನೆ ಕರಿಯೇ
ಚೆನ್ನದ ರೇಖಿನಂತಹ ದೊರಿಯೇ

ಹೊಟ್ಟೆ ನೋಡೆಯಕ್ಕ
ಚಿಟ್ಟಕುಂಬಳಕಾಯಿ ತಂಗಿ
ಹೋಗುತ್ತಾನೆ ಕರಿಯೇ
ಚೆನ್ನದ ರೇಖಿನಂತಹ ದೊರಿಯೇ

ಕಣ್ಣನೋಡೆ ಯಕ್ಕ

ಅವು ನಿಂಬೆ ಹೋಳುಕಣೆ ತಂಗಿ

ಹೋಗುತ್ತಾನೆ ಕರಿಯೇ

ಚಿನ್ನದ ರೇಖಿನಂತಹ ದೊರಿಯೇ

ಕಿವಿನೋಡೆ ಯಕ್ಕ

ಅವು ಆನೆ ಕಿವಿ ತಂಗಿ

ಹೋಗುತ್ತಾನೆ ಕರಿಯೇ

ಚಿನ್ನದ ರೇಖಿನಂತಹ ದೊರಿಯೇ

ಅಧ್ಯಾಯ ೦೬

ತಿಗಳರ ವಿಶೇಷ ಆಚರಣೆ: ಕರಗ ಉತ್ಸವ

ಅಧ್ಯಾಯ–06

ತಿಗಳರ ವಿಶೇಷ ಆಚರಣೆ: ಕರಗ ಉತ್ಸವ

ಪೌರಾಣಿಕ ಹಿನ್ನಲೆ:

ಈ ಜನಾಂಗವು ಆದಿಶಕ್ತಿಯ ಸ್ವರೂಪಳಾದ ದ್ರೌಪದಿಯನ್ನು ತಮ್ಮ ಕುಲದೇವತೆಯೆಂದು ದೃಢವಾಗಿ ನಂಬಿದ್ದಾರೆ. ದ್ರೌಪದಿಯು ಪಾಂಡವರ ಪತ್ನಿಯಾಗಿ ಸದಾ ಪಾಂಡವರಲ್ಲಿ ಅವರ ಹೃದಯದಲ್ಲಡಗಿರುವ ಕ್ಷಾತ್ರ ತೇಜಸ್ಸನ್ನು ಉದ್ದೀಪನಗೊಳಿಸುತ್ತಾ, ಅವರನ್ನು ಕ್ರಿಯಾಶೀಲರನ್ನಾಗಿಸುತ್ತಾ, ಕುರುಕ್ಷೇತ್ರದ ಮಹಾಯುದ್ಧಕ್ಕೆ ನಾಂದಿ ಮಾಡಿ ಅನ್ಯಾಯ ಅಧರ್ಮಗಳನ್ನು ಸದೆ ಬಡಿದು ಧರ್ಮವನ್ನು ಪುನರ್ ಸ್ಥಾಪನೆ ಮಾಡಲು ರೂಪುಗೊಂಡ ಶಕ್ತಿಸ್ವರೂಪಿಣಿ. ಈಕೆಯ ಜನ್ಮ ವೃತ್ತಾಂತವನ್ನು ಅರಿಯುವುದು ಅಷ್ಟೇ ಮುಖ್ಯ. ಪುರಾಣ ಕಾಲಗಳಲ್ಲಿ ಆದಿ ಶಕ್ತಿಯು ತ್ರಿಮೂರ್ತಿಗಳ ಸೃಷ್ಟಿ, ಸ್ಥಿತಿ, ಲಯ ಈ ಕಾರ್ಯಗಳಲ್ಲಿ ಸಹಕಾರಿಯಾಗಿ ನಿಲ್ಲುತ್ತಾಳೆ. ಹೀಗಿರುವಲ್ಲಿ ಒಂದು ದಿನ ಪಾರ್ವತಿ ರೂಪಳಾದ ಆದಿಶಕ್ತಿಯು ಲಯ ಕಾರ್ಯದಲ್ಲಿ ಮಗ್ನನಾಗಿದ್ದ ಶಿವನಿಗಾಗಿ ಬ್ರಹ್ಮನನ್ನು ಕುರಿತು ತಪ್ಪಸ್ಸನ್ನಾಚರಿಸುತ್ತಾಳೆ. ತಪಸ್ಸಿಗೆ ಮೆಚ್ಚಿ ಬ್ರಹ್ಮ ಪ್ರತ್ಯಕ್ಷನಾಗುತ್ತಾನೆ. ಪಾರ್ವತಿಯು ಬ್ರಹ್ಮದೇವನನ್ನು ಪತಿ ಭಿಕ್ಷಾಂದೇಹಿ ಎಂದು ಕೇಳುತ್ತಾಳೆ. ಆದಿಶಕ್ತಿಯ ದಿವ್ಯದರ್ಶನದಿಂದ ಬೆರಗಾಗಿ ಸುಮ್ಮನೆ ನಿಂತಿದ್ದ ಬ್ರಹ್ಮನನ್ನು ಕಂಡು ಮತ್ತೊಮ್ಮೆ ಪತಿಭಿಕ್ಷಾಂದೇಹಿ ಎನ್ನುತ್ತಾಳೆ. ತಪಸ್ಸಿನಿಂದ ಶಕ್ತಿಸಂಪನ್ನಳಾಗಿ ಸುವರ್ಣ ಕಿರಣಗಳಂತೆ ಪ್ರಜ್ವಲ್ಯಮಾನಳಾಗಿ ಕಾಣುತ್ತಿದ್ದ ಆದಿಶಕ್ತಿಯನ್ನು ನೋಡಿ ಏನು ಹೇಳಬೇಕು ಅನ್ನುವಷ್ಟರಲ್ಲಿ ಮತ್ತೆ ಮೂರು ಬಾರಿ ಪತಿಭಿಕ್ಷಾಂದೇಹಿ ಎಂದು ಬೇಡುತ್ತಾಳೆ. ಅಷ್ಟರಲ್ಲಿ ಬ್ರಹ್ಮನು ಹಿಂದೆ ಮುಂದೆ ನೋಡದೆ ನಿನ್ನ ಬೇಡಿಕೆಗಳಿಗೆಲ್ಲ ಅಸ್ತು ಎನ್ನುತ್ತಾನೆ. ಪಾರ್ವತಿಯು ಬ್ರಹ್ಮನನ್ನು ಕುರಿತು ಮಹಾಸ್ವಾಮಿ ನಾನು ಕೇಳಿದ್ದು ಒಂದೇ ವರ ಪತಿಭಿಕ್ಷೆಯನ್ನು, ಆದರೆ

ನೀವು ನಿನ್ನ ಎಲ್ಲಾ ಬೇಡಿಕೆಗಳು ಎಂದು ಹೇಳಿದ್ದಿರಲ್ಲಾ ಎಂದು ಕೇಳಿದಾಗ, ತಾಯಿ ನೀನು ಐದು ಬಾರಿ ಕೇಳಿದ್ದಿ ಜ್ಞಾಪಿಸಿಕೋ ಎಂದು ಹೇಳುತ್ತಾನೆ.

ಈ ಉತ್ತರದಿಂದ ಹೌಹಾರಿದ ಪಾರ್ವತಿಯು ಬ್ರಹ್ಮನನ್ನೇ ಇದಕ್ಕೆ ಪರಿಹಾರ ಕೇಳುತ್ತಾಳೆ. ಆಗ ಬ್ರಹ್ಮನು ಪತಿಪತ್ನಿಯರ ಸಂಬಂಧದ ಬದುಕು ಭೂಲೋಕಕ್ಕೆ ಸೀಮಿತವಾದದ್ದು. ನಾನು ವರವನ್ನು ಕೊಟ್ಟಾಯ್ತು, ನೀನಿ ಐದು ಜನ್ಮಗಳನ್ನು ಎತ್ತಿ ಐದು ಜನ ಗಂಡಂದಿರೊಂದಿಗೆ ಹೆಂಡತಿಯಾಗಿ ಬಾಳಿ ದೇವಲೋಕಕ್ಕೆ ಬರುವೆಯಾ ಅಥವಾ ಐದು ಜನರನ್ನು ಪತಿಯರನ್ನಾಗಿ ಪಡೆದು ಒಂದೇ ಜನ್ಮದಲ್ಲಿ ಎಲ್ಲಾ ಕಷ್ಟಗಳನ್ನು ಅನುಭವಿಸಿ ದೇವಲೋಕಕ್ಕೆ ಬರುವೆಯೋ ನೀನೇ ತೀರ್ಮಾನ ಮಾಡಿಕೋ ಎಂದು ಹೇಳುತ್ತಾನೆ. ಆಗ ಪಾರ್ವತಿಯು ಐದು ಜನ್ಮಗಳ ಕಾಲ ದೈವಸಾನಿಧ್ಯದಿಮದ ದೂರವಿರಲಾರೆ, ನನಗೆ ಒಂದೇ ಜನ್ಮದಲ್ಲಿ ದೈವಾಂಶ ಸಂಭೂತರಾದ ಐವರು ಪತಿಗಳನ್ನು ಪಡೆದು ಧರ್ಮ ಕಾರ್ಯ ಸಾಧಿಸುವಂತೆ ಅನುಗ್ರಹಿಸು ಎಂದು ಬೇಡುತ್ತಾಳೆ.

ಕಾಲಾನಂತರದಲ್ಲಿ ದ್ರುಪದ ರಾಜನು ಮಾಡಿದ ಯಾಗದ ಹವಿಸ್ಸು ಅಗ್ನಿಯನ್ನು ಸೇರಿದಾಗ ಆ ಅಗ್ನಿಯಿಂದ ಆದಿಶಕ್ತಿಯು ಒಂದು ಹೆಣ್ಣು ಮಗುವಾಗಿ ಜನ್ಮ ತಾಳುತ್ತಾಳೆ. ಮುಂದೆ ಕೃಷ್ಣೆಯೆಂದು, ದ್ರೌಪದಿಯೆಂದು ಪ್ರಸಿದ್ಧಳಾಗುತ್ತಾಳೆ. ಹೀಗಾಗಿ ಆದಿಶಕ್ತಿ ಸ್ವರೂಪಳಾದ ದ್ರೌಪದಿಯು ಯಮಧರ್ಮನ ಅಂಶದಿಂದ ಜನಿಸಿದ ಧರ್ಮರಾಯನನ್ನು, ವಾಯುವಿನ ಅಂಶದಿಂದ ಜನಿಸಿದ ಭೀಮಸೇನನನ್ನು, ಇಂದ್ರನ ಅಂಶದಿಂದ ಜನಿಸಿದ ಅರ್ಜುನನನ್ನು, ಅಶ್ವಿನಿ ದೇವತೆಗಳ ಅಂಶದಿಂದ ಜನಿಸಿದ ನಕುಲ ಸಹದೇವರನ್ನು ಹೀಗೆ ಐದು ಜನರನ್ನು ಪತಿಗಳನ್ನಾಗಿ ಪಡೆದು ಮಹಾಭಾರತದ ಸೂತ್ರಧಾರಿಣಿಯಾಗಿ ಇಂದಿನ ಜಗತ್ಪ್ರಸಿದ್ಧ ಭಗವದ್ಗೀತೆಯ ಸೃಷ್ಟಿಗೂ ಕಾರಣೀಭೂತಳಾದ ಸ್ತ್ರೀಶಕ್ತಿಯಾಗಿದ್ದಾಳೆ.

ಮಹಾಭಾರತದ ಹತ್ತನೆಯ ಪರ್ವದಲ್ಲಿ ಸೂಚಿಸಿರುವಂತೆ ಪಂಚಪಾಂಡವರು ವನವಾಸದಲ್ಲಿರುತ್ತಾರೆ. ಈ ಸಂದರ್ಭದಲ್ಲಿ ಶ್ರೀಕೃಷ್ಣನ ಸಲಹೆಯಂತೆ ಪಂಚಪಾಂಡವರು ತಮ್ಮ ಶಕ್ತಿಯ ವೃದ್ಧಿಗಾಗಿ ಅಸ್ತ್ರ ಶಸ್ತ್ರಗಳ ಸಾಧನೆಗಳಲ್ಲಿ ತೊಡಗಿರುತ್ತಾರೆ.

ಈ ಸಂದರ್ಭದ ದುರ್ಲಾಭ ಪಡೆಯಲು ತಿಮಿರಾಸುರನೆಂಬ ರಾಕ್ಷಸನು ದ್ರೌಪದಿಯನ್ನು ಕಾಡತೊಡಗುತ್ತಾನೆ. ದ್ರುಪದನಂದನೆಯು ಶ್ರೀಕೃಷ್ಣನ ಮೊರೆ ಹೊಕ್ಕಳು. ಆದಿಶಕ್ತಿಯ ಅಂಶವೇ ದ್ರೌಪದಿ ಎಂದರಿತ ಭಗವಂತನು ನಿನಗಿರುವ ಶಕ್ತಿಯಲ್ಲಿಯೇ ನಿನ್ನನ್ನು ರಕ್ಷಿಸಿಕೋ ಎಂದು ಛೇಡಿಸುತ್ತಾನೆ. ಗೋಪಿನಂದನನ ಸಹಾಯವಿಲ್ಲದಂತಾಗಿಯೂ ತಿಮಿರಾಸುರನ ಉಪಟಳವನ್ನು ತಾಳಲಾರದೆಯೂ ಕುಪಿತಗೊಂಡ ಪಾಂಚಾಲಿಯು ವಿಶ್ವರೂಪ ತಳೆದು ಈ ರಕ್ಕಸಪಡೆಯ ಧ್ವಂಸಕ್ಕಾಗಿ ತನ್ನ ತಲೆಯಿಂದ ಯಜಮಾನನನ್ನು, ಹಣೆಯಿಂದ ಗಣಾಚಾರಿಯನ್ನು, ಕಿವಿಗಳಿಂದ ಗೌಡರುಗಳನ್ನು, ಬಾಯಿಂದ ಘಂಟೆ ಪೂಜಾರಿಯನ್ನು, ತನ್ನ ತೋಳುಗಳಿಂದ ವೀರಕುಮಾರರನ್ನು ಸೃಷ್ಟಿಸಿ ಸೈನ್ಯವನ್ನು ಸಜ್ಜುಗೊಳಿಸಿ ರಕ್ಕಸರ ಪಡೆಯನ್ನೇ ನಾಶ ಮಾಡುತ್ತಾಳೆ.

ಹೀಗೆ ಎಲ್ಲ ರಾಕ್ಷಸರನ್ನು ನಿರ್ನಾಮ ಮಾಡಿದ ನಂತರ ತಾನು ದೇವಲೋಕಕ್ಕೆ ಹಿಂತಿರುಗಲು ಸಜ್ಜಾಗುತ್ತಾಳೆ. ಇದನ್ನರಿತ ಶ್ರೀಕೃಷ್ಣನು ಅಲ್ಲಿಗೆ ಧಾವಿಸಿ ಆದಿಶಕ್ತಿಯ ವಿಶ್ವರೂಪದ ದರ್ಶನ ಪಡೆದು ಪುಳಕಿತನಾಗಿ ಗಣಾಚಾರಾದಿಯಾಗಿ ವೀರಕುಮಾರರನ್ನು ಕುರಿತು ಈ ನಿಮ್ಮ ತಾಯಿಯನ್ನು ಉಳಿಸಿಕೊಳ್ಳಬೇಕಾದರೆ ನೀವಲ್ಲದೆ ಮತ್ಯಾರಿಂದಲೂ ಸಾಧ್ಯವಾಗುವುದಿಲ್ಲ ಎಂಬುದಾಗಿ ತಿಳಿಸುತ್ತಾನೆ. ಈ ಸೂಕ್ಷ್ಮವರಿತ ವೀರಕುಮಾರರು, ಅಮ್ಮಾ ನಮಗೆ ದಿಕ್ಕು ತೋರು, ಅಮ್ಮಾ ದಿಕ್ಕು ತೋರು ಎಂದು ಕೂಗಿಕೊಳ್ಳುತ್ತಾ ತಮ್ಮ ವೀರ ಖಡ್ಗದಿಂದ ಎದೆಯ ಮೇಲೆ ಬಡಿದುಕೊಳ್ಳುತ್ತಾ ಆತ್ಮಾಹುತಿಗೆ ಸಿದ್ಧರಾಗುತ್ತಾರೆ. ಈ ಕ್ರಿಯೆಯಿಂದ ಮನಃ ಕರಗಿದ ಆದಿಶಕ್ತಿಯು ತನ್ನ ಕುಮಾರರನ್ನು ಸಂತೈಸುತ್ತಾ ನೀವು ಈ ದೇಶದಲ್ಲಿ ಸತ್ಯಧರ್ಮಗಳ ರಕ್ಷಣೆಗಾಗಿ ಬಾಳು ಮುಂದುವರೆಸಿ, ನಾನು ವರ್ಷದಲ್ಲಿ ಮೂರು ದಿನ ನಿಮ್ಮೊಂದಿಗಿರುತ್ತೇನೆ ಎಂದು ತಿಳಿಸಿ ಶಾಂತಚಿತ್ತಳಾಗಿ ಮತ್ತೆ ದ್ರೌಪದಿಯ ರೂಪಕ್ಕೆ

ಮರಳುತ್ತಾಳೆ. ಇದರ ಆಚರಣೆಯ ಅಂಗವೇ ಕರಗ ಶಕ್ತಿ ಉತ್ಸವ ಎಂಬುದು ಪುರಾಣಗಳಲ್ಲಿ ಉಲ್ಲೇಖ ಇದೆಯೆಂದು ನಮ್ಮ ಹಿರಿಯರು ಗಾಢವಾಗಿ ನಂಬಿದ್ದಾರೆ.

ಇನ್ನೊಂದು ಪುರಾಣಕಥನದಂತೆ ಪಾಂಡವರು ದ್ರೌಪದಿ ಸಮೇತಳಾಗಿ ಕೈಲಾಸಕ್ಕೆ ನಡೆದು ಹೋಗುತ್ತಿರಬೇಕಾದರೆ ದ್ರೌಪದಿಯು ಸ್ವಾಭಾವಿಕ ಸ್ತ್ರೀತನದಿಂದ ಶಕ್ತಿ ಕ್ಷೀಣಿಸಿ ಹಿಂದಾಗುತ್ತಾಳೆ. ಹೀಗಿರುವಲ್ಲಿ ಪಾಂಡವರೈವರು ಬಹಳ ಮುಂದೆ ಸಾಗಿರುತ್ತಾರೆ. ಇದನ್ನರಿತ ತಿಮಿರಾಸುರ ದ್ರೌಪದಿಗೆ ಉಪದ್ರವ ಕೊಡಲು ಪ್ರಾರಂಭಿಸುತ್ತಾನೆ. ಆಗ ದ್ರೌಪದಿ ವಿಶ್ವರೂಪ ತಳೆದು ಗೌಡ, ಗಣಾಚಾರಿ, ಘಂಟೆ ಪೂಜಾರಿ, ವೀರಕುಮಾರರನ್ನು ಸೃಷ್ಟಿಸಿ ರಾಕ್ಷಸರನ್ನು ನಿರ್ನಾಮ ಮಾಡಿದಳು. ಇದರ ಪ್ರತೀಕವೆ ಕರಗ ಎಂಬುದಾಗಿ ತಿಳಿಸುತ್ತದೆ. ಒಟ್ಟಾರೆ ಹೇಳುವುದಾದರೆ ನಮ್ಮ ಸಮಾಜದಲ್ಲಿರುವ ಯಜಮಾನರು, ಗೌಡರು, ಗಣಾಚಾರಿಗಳು, ಘಂಟೆಪೂಜಾರಿಗಳು, ವೀರಕುಮಾರರು ಇವರು ಅಗ್ನಿಸಂಭೂತಳಾದ ಆದಿಶಕ್ತಿಯ ವರಪುತ್ರರೆಂತಲೂ ಈ ಜನಾಂಗದ ಹಿರಿಯರು ಪುರಾಣ ಕಾಲಗಳಿಂದಲೂ ಉಲ್ಲೇಖಿಸಲ್ಪಟ್ಟು, ಅನಾದಿಕಾಲದಿಂದಲೂ ಅನುಧಾನವಾಗಿ ಬಂದಿರುವ ವ್ಯವಸ್ಥೆಯ ಪ್ರಮುಖರೆಂತಲು ತಿಳಿದುಬಂದಿರುತ್ತದೆ.

ಈ ಜನಾಂಗದವರೆಲ್ಲರೂ ಆಯಾ ಪ್ರದೇಶಗಳಿಗೆ ಸಂಬಂಧಿಸಿದ ಹಾಗೆ ಭಾಷೆ ಮಾತನಾಡುತ್ತಾರೆ. ಉದಾ:- ಅಗ್ನಿವಂಶಕ್ಷತ್ರಿಯರು ಕನ್ನಡ ಮತ್ತು ತೆಲುಗು ಭಾಷೆ, ವಹ್ನಿಕುಲ ಅಥವಾ ವನ್ನೇಲ ಕುಲ ಕ್ಷತ್ರಿಯರು, ಕನ್ನಡ ತೆಲುಗು ತಮಿಳು ಮಿಶ್ರಣಗೊಂಡ ಭಾಷೆ, ಕಿಶ್ಕಿಂಧೆ ಒಕ್ಕಲಿಗರು, ಪಾಂಡವ ಒಕ್ಕಲಿಗರು, ಕಶ್ಯಪ ಒಕ್ಕಲಿಗರು, ನೊಣಂಬ ಒಕ್ಕಲಿಗರು, ಕರಗದ ಒಕ್ಕಲಿಗರು, ಕನ್ನಡ ತೆಲುಗು ಭಾಷೆಯನ್ನು ಮಾತನಾಡುತ್ತಾರೆ. ರಾಮ ಕ್ಷತ್ರಿಯ, ಹಿಂದೂ ಕ್ಷತ್ರಿಯ, ಅಗ್ನಿವಂಶ ರಾಜು ಕ್ಷತ್ರಿಯರು ಕನ್ನಡ, ತೆಲುಗು, ತುಳು, ಹಿಂದಿ ಭಾಷೆ ಮಾತನಾಡುತ್ತಾರೆ.

ಒರಿಸ್ಸಾದಲ್ಲಿ ಅಗ್ನಿ ವಂಶ ಕ್ಷತ್ರಿಯರು, ಸೋಮ ವಂಶ ಕ್ಷತ್ರಿಯರು, ಪಿಳ್ಳೆಗಳು ನಮೂದಾಗಿದ್ದು ಇವರೆಲ್ಲರೂ ಕ್ಷತ್ರಿಯರೇ ಮೂಲ ಕಸುವು ಒಕ್ಕಲುತನವಾಗಿರುತ್ತದೆ. ಗುಜರಾತ್‌ನಲ್ಲಿ ವಗೇಲ, ಸೋಲಂಕಿ, ಚೌಹಾಣ್ ಎಂತಲೂ ಪಂಜಾಬ್‌ನಲ್ಲಿ ರಜಪೂತ್ ಕ್ಷತ್ರಿಯರು ಜಾಟ್ ಜನಾಂಗ ಎಂತಲೂ ಹರಿಯಾಣದಲ್ಲಿ ಜಾಟ್ ರಜಪೂತ್ ಜನಾಂಗ ಹಾಗೂ ಸೋಮವಂಶ ಜನಾಂಗ ಎಂತಲೂ ಗುರುತಿಸಿಕೊಂಡಿದ್ದಾರೆ.

ಉತ್ತರ ಪ್ರದೇಶದಲ್ಲಿ ಸೂರ್ಯಕುಲ ಕ್ಷತ್ರಿಯ ಬಿಹಾರದಲ್ಲಿ ದೀಪ ಕುಲ ಕ್ಷತ್ರಿಯರು ಎಂತಲೂ ಗುರುತಿಸಿಕೊಂಡಿದ್ದಾರೆ. ಹೀಗಿ ಭಾರತದ ಎಲ್ಲಾ ರಾಜ್ಯಗಳಲ್ಲಿ ಹೀಗೆ ಉಪಜಾತಿಗಳಾಗಿ ಹರಿದು ಹಂಚಿ ಹೋಗಿರುತ್ತಾರೆ. ಇವರ ಮೂಲ ಕಸುವು ಇಂದಿಗೂ ಒಕ್ಕಲುತನವಾಗಿರುತ್ತದೆ.

ಕರಗ: ಕರಗ ಎಂದರೆ ಭಾಷಾ ಅರ್ಥಗಳು ಅನೇಕವಿದ್ದರು "ಕ" ಎಂದರೆ ಕೈಯಲ್ಲಿ ಮುಟ್ಟದೆ, "ರ" ಎಂದರೆ ರುಂಡದಲ್ಲಿ ಧರಿಸಿ, "ಗ" ಎಂದರೆ ಗತಿಸುವುದು, ಸುತ್ತುವುದು ಎಂಬರ್ಥದಲ್ಲಿ ಕರಗ ಎಂದರೆ ಕೈಯಲ್ಲಿ ಮುಟ್ಟದೆ ಶಿರದಲ್ಲಿ ಧರಿಸಿ ಭಕ್ತಾದಿಗಳಿಗೆ ದರ್ಶನ ನೀಡುವುದು ಎಂಬರ್ಥ ಬರುತ್ತದೆ. "ಕರಗ ಶಕ್ತಿಯು" ಪಂಚಭೂತ ವಿಶಿಷ್ಟವಾದ ಶರೀರದಂತೆ ಭಕ್ತಜನಗಳ ಇಷ್ಟಾರ್ಥವನ್ನು ಕೊಡತಕ್ಕದ್ದಾಗಿರುತ್ತದೆ. ಇದಕ್ಕೆ ಅಮರನಿಘಂಟು ನಾನಾರ್ಥ ವರ್ಗದಲ್ಲಿ "ಕಮಂಡುಲೌಚಕರಕ" ಎಂಬುದಾಗಿಯೂ ಮೇಧಿನಿ ಎಂಬ ಕೋಶದಲ್ಲಿ

ಶ್ಲೋಕ: ಕರಕಸ್ತು ಪುರ್ಮೊ ಪಕ್ಷಿ ವಿಶೇಷೆ ದಾಡಿಮೇಪಿಚ।

ದ್ವಯೋರ್ಮೇ ಘೋಪಲೆ ನಸ್ತ್ರೀ ಕರಕಂ ಚ ಕಮಂಡುಲೌ॥

ಎಂಬುದಾಗಿಯೂ ಇರುತ್ತದೆ. ಇಂಥ ಕರಗದ ಮುಖವೆಂಬ ಅಗ್ರಭಾಗದಲ್ಲಿ ವಿಷ್ಣುವು, ಕಂಠದಲ್ಲಿ ಶಿವನೂ, ತಳಭಾಗದಲ್ಲಿ ಬ್ರಹ್ಮನು ಮಧ್ಯಭಾಗದಲ್ಲಿ ಮಾತೃಗಣಗಳು ವಾಸ

ಮಾಡುತ್ತಾರೆಂದು ಸ್ಮೃತಿ ಇರುವುದರಿಂದ ಮಾತೃಸ್ವರೂಪಿಣಿಯಾದ ಈ ಮಹಾಶಕ್ತಿಯು ಸರ್ವರಿಂದಲೂ ಪೂಜಿಸ್ಪಡುವ ಶಕ್ತಿಯಾಗಿರುವಳಲ್ಲದೆ ಇಷ್ಟಾರ್ಥವನ್ನು ಕೊಡುವವಳು ಆಗಿರುವವಳು ಎಂದು ದಾರ್ಶನಿಕರು ತಿಳಿಸಿರುತ್ತಾರೆ. ಇಲ್ಲಿ ಕರಗ ಉತ್ಸವವನ್ನು ಹಸಿಕರಗ ಮತ್ತು ಪೇಟೆಯ ಕರಗ ಅಥವಾ ಹೂವಿನ ಕರಗ ಎಂಬ ಸಾಂಕೇತಿಕವಾದ ಧಾರ್ಮಿಕ ಉತ್ಸವಗಳನ್ನು ನಡೆಸುತ್ತಾರೆ. ಇದಕ್ಕೆ ಪೌರಾಣಿಕ ದಾಖಲೆಗಳನ್ನು ಗಮನಿಸಿದಾಗ ಇದರಲ್ಲಿ ವಿಜಯೋತ್ಸವ ಮತ್ತು ಸಾಮಾಜಿಕ ಪಾವಿತ್ರ್ಯತೆಯ ಮತ್ತು ಪರಿಪಕ್ವತೆಯ ಸಂಬಂಧಗಳ ವೈಭವೀಕರಣ ಈ ಉತ್ಸವದಲ್ಲಿ ಕಾಣಬಹುದಾಗಿದೆ.

ತ್ರೇತಾಯುಗದಲ್ಲಿ ಹೆಣ್ಣಿನ ಪಾವಿತ್ರ್ಯತೆ ಹಾಗೂ ಭಕ್ತಿಯ ಏಕಾಗ್ರತೆಯ ಪರೀಕ್ಷೆಗಳು ಅಗ್ನಿಯನ್ನು ಹಾದು ಬರುವ ಮೂಲಕ ದೃಢೀಕರಿಸಲ್ಪಡುತ್ತಿತ್ತು. ಹಾಗೆಯೇ ಪುರಾಣ ಕಾಲಗಳಲ್ಲಿ ಮರಳಿನಿಂದ ಮಡಿಕೆಯನ್ನು ಮಾಡಿ ಅದರಲ್ಲಿ ಶುದ್ಧ ಗಂಗಾಜಲವನ್ನು ತುಂಬಿ ಯಜ್ಞಭೂಮಿಗೆ ಜಲವನ್ನೊದಗಿಸುವ ಸಂದರ್ಭದಲ್ಲಿ ಪಾತಿವ್ರತ್ಯದ ಪವಿತ್ರತೆ ಸ್ಫುಟಗೊಳ್ಳುತ್ತಿತ್ತು. ಈ ಪದ್ಧತಿಗಳ ಸಮೀಕರಣದ ರೂಢಿಯೇ ಕರಗ ಶಕ್ತಿ ಉತ್ಸವ. ಈ ಜನಾಂಗ ತಮ್ಮ ನಿಯಮಗಳನ್ನು ಶ್ರದ್ಧಾಭಕ್ತಿಯಿಂದ ಪಾಲಿಸಿ ಪಾವಿತ್ರ್ಯತೆಯನ್ನು ದೃಢೀಕರಿಸಿ ಆದಿಶಕ್ತಿಯನ್ನು ಈ ಧರೆಗೆ ಹಸಿಕರಗದ ರೂಪವಾಗಿ ಆಹ್ವಾನಿಸಿ ಗುಡಿಯಲ್ಲಿ ಸ್ಥಾಪಿಸುವುದು ರೂಢಿಯಲ್ಲಿದೆ. ಹೀಗೆ ಹಿರಿಯರು ಸದ್ಭಕ್ತಿ, ಸದ್ಭಾವನೆ, ಸದಾಚಾರಗಳ ಸಮ್ಮಿಲನದ ಸಂಸ್ಕೃತಿಯನ್ನು ಭಕ್ತಿಪೂರ್ವಕವಾಗಿ ಆಚರಣೆಯಲ್ಲಿ ತರಲು ಹಾದಿ ಮಾಡಿಕೊಟ್ಟಿರುತ್ತಾರೆ. ಹೀಗೆ ಕಾಲಕ್ರಮದಲ್ಲಿ ಸಣ್ಣಪುಟ್ಟ ಬದಲಾವಣೆಗಳೊಂದಿಗೆ ಬಹಳ ಹಿಂದಿನಿಂದಲೂ ಹೊಸಕೋಟೆ, ಬೆಂಗಳೂರು, ಆನೇಕಲ್ಲು, ಮಾಲೂರು, ಕೋಲಾರ, ಹೆಸರಘಟ್ಟ, ದೊಡ್ಡಬಳ್ಳಾಪುರ, ರಾಮನಗರ, ವಿಜಯಪುರ, ದೇವನಹಳ್ಳಿ ಮತ್ತು ಯಲಹಂಕ ಮುಂತಾದ ಸ್ಥಳಗಳಲ್ಲಿಯೂ ಇತ್ತೀಚೆಗೆ ಇನ್ನು ಅನೇಕ ತಾಲ್ಲೂಕು ಮತ್ತು ಹೋಬಳಿ ಮಟ್ಟದ ಗ್ರಾಮಗಳಲ್ಲಿಯೂ ಶ್ರದ್ಧೆ ಮತ್ತು ಭಕ್ತಿಗಳಿಂದ ಈ ಉತ್ಸವದ ಆಚರಣೆಯು ಕಂಡುಬರುತ್ತದೆ. ಕರಗ ಮಹೋತ್ಸವವನ್ನು ತಮಿಳುನಾಡು,

ಪಾಂಡಿಚೇರಿ ಮತ್ತು ಕೇರಳ ರಾಜ್ಯದಲ್ಲಿ ಕರಗಂ, ಕರಗಟ್ಟಂ ಎಂತಲೂ, ಆಂಧ್ರಪ್ರದೇಶ, ಒರಿಸ್ಸಾ, ಛತ್ತೀಸ್‌ಗಡ ರಾಜ್ಯದಲ್ಲಿ ಗರಗಲು, ಗರಗ ಎಂದು ಕರೆಯುತ್ತಾರೆ. ಅದೇ ರೀತಿ ಪಶ್ಚಿಮ ಬಂಗಾಳ, ಬಾಂಗ್ಲಾದೇಶ, ದೆಹಲಿ, ಉತ್ತರ ಪ್ರದೇಶ ಇನ್ನೂ ಮುಂತಾದ ಕಡೆ ಚರಕ ಪೂಜ ಅಥವಾ ಚರಕ ಜಾತ್ರೆ ಅಥವಾ ನೀಲ್‌ಪೂಜಾ ಎಂತಲೂ ಕರೆಯುವುದು ಉದಾಹರಣೆಯಾಗಿರುತ್ತದೆ.

ದೈವಿಕ ಆಚರಣೆಯ ರಹಸ್ಯವನ್ನು ಬಯಲು ಮಾಡಿದರೆ ಕೆಡುಕಾಗುವುದೆಂಬ ನಂಬಿಕೆಯಿಂದ ಮನೆತನದ ಹಿರಿಯರು ಮತ್ತು ಪೂಜಾರಿಗಳು ದೇವತಾ ಕಾರ್ಯದ ಕೈಂಕರ್ಯಗಳನ್ನು ಗೋಪ್ಯವಾಗಿಟ್ಟಿದ್ದಾರೆ. ಬೆಂಗಳೂರಿನಲ್ಲಿ ಅನಾದಿಕಾಲದಿಂದಲೂ ನೆಲೆಸಿರುವ ಶ್ರೀ ಧರ್ಮರಾಯಸ್ವಾಮಿ ದೇವಸ್ಥಾನದಲ್ಲಿ ಪ್ರತಿವರ್ಷವೂ ಕರಗ ಮಹೋತ್ಸವವು ನಡೆಯುತ್ತಾ ಬಂದಿರುತ್ತದೆ. ಈ ದೇವಸ್ಥಾನವು ಕೆಂಪೇಗೌಡರ ನವ ಬೆಂಗಳೂರು ನಿರ್ಮಾಣ ಕಾಲದಲ್ಲಿ ನಿರ್ಮಾಣವಾಯಿತೆ ಅಥವಾ ಅದಕ್ಕೂ ಮೊದಲು ಇದ್ದ ಬೆಂದಕಾಳೂರಿನ ಭಾಗವಾಗಿ ಇತ್ತೆ ಎಂಬುದು ಸರಿಯಾಗಿ ತಿಳಿದು ಬಂದಿರುವುದಿಲ್ಲ. ಬೆಂಗಳೂರನ್ನು ದಕ್ಷಿಣ ಕಾಶಿ ಪುಣ್ಯಕೇತ್ರ ಕಲ್ಯಾಣನಗರ ಎಂಬುದಾಗಿ ಕರೆಯುತ್ತಿದ್ದುದಾಗಿ ಕಂಡುಬರುತ್ತದೆ. ಕೆಂಪಾಂಬುದಿ, ಸಿದ್ದಿಕಟ್ಟೆ, ಸಂಪಂಗಿಕೆರೆ, ಅಲಸೂರು ಕೆರೆ, ಕೋರಮಂಗಲ ಕೆರೆ ಮತ್ತು ಸಂಪಿಗೆ ಕೆರೆ ಹಾಗೂ ಏಳು ಮಠಗಳು, ಏಳು ಕಲ್ಯಾಣಿಗಳು, ಏಳು ಪ್ರಮುಖ ದೇವಸ್ಥಾನಗಳು ಹೀಗೆ ಸಮೃದ್ಧಿಯನ್ನು ಬಹಳ ಹಿಂದೆಯೇ ಕಂಡಂತ ಕಲ್ಯಾಣಪುರ ಇದಾಗಿದ್ದಿರಬಹುದು.

ಈ ದೇವಸ್ಥಾನದ ಇತಿಹಾಸ ಹೇಳುವುದಾದರೆ ಶ್ರೀ ಮುಮ್ಮಡಿ ಕೃಷ್ಣರಾಜ ಒಡೆಯರ್ ಅವರು ಈ ದೇವಸ್ಥಾನಕ್ಕೆ ಭೇಟಿಯಿತ್ತಿರುವ ಬಗ್ಗೆ ದಾಖಲೆಗಳಿವೆ. ಶ್ರೀಮನ್ ಮಹಾರಾಜರು 1811 ಡಿಸೆಂಬರ್ 04 ರಂದು ಸನ್ನದ್ದನ್ನು ಹೊರಡಿಸಿ ದೇವಸ್ಥಾನದ ಆಡಳಿತವನ್ನು ಪ್ರಭುತ್ವವೇ ವಹಿಸುವಂತೆ ಮಾಡಿದರು. ಸ್ವಾತಂತ್ರ್ಯದ ನಂತರವೂ ಈ ದೇವಸ್ಥಾನದ ಆಡಳಿತ ಮಂಡಳಿಗೆ ಈ ಜನಾಂಗದಿಂದಲೇ ನೇಮಿಸಲ್ಪಟ್ಟ ಸಮಿತಿಯು, ಕುಲದ ಯಜಮಾನರು, ಗೌಡರು,

ಗಣಾಚಾರಿ, ಘಂಟೆಪೂಜಾರಿ, ಪೂಜಾರಿ ಹಾಗೂ ಚಾಕರಿದಾರರು ಮತ್ತು ಕುಲಬಾಂಧವರು ಸೇರಿ ಕರಗ ಉತ್ಸವವನ್ನು ನಡೆಸಿಕೊಂಡು ಬಂದಿರುತ್ತಾರೆ. ಈ ಉತ್ಸವವು ಸಾಮಾನ್ಯವಾಗಿ ಮಾರ್ಚ್ ಕೊನೆ ಮತ್ತು ಏಪ್ರಿಲ್ ತಿಂಗಳುಗಳಲ್ಲಿ ಅಂದರೆ ಚೈತ್ರ ಪೂರ್ಣಿಮೆಯ ದಿನ ನಡೆಯಬೇಕಾಗಿರುವುದರಿಂದ ಒಂದೆರಡು ತಿಂಗಳುಗಳು ಮುಂಚಿತವಾಗಿ ಆಡಳಿತ ಮಂಡಳಿಯ ಸದಸ್ಯರು ಒಟ್ಟಿಗೆ ಸೇರಿ ನಡೆಯಬೇಕಾಗಿರುವ ಕಾರ್ಯಗಳ ಬಗ್ಗೆ ಚರ್ಚಿಸಿ ನಂತರ ಕುಲದ ಮುಖ್ಯಸ್ಥರನ್ನೆಲ್ಲ ಸೇರಿಸಿ ಉತ್ಸವ ನಡೆಸಬೇಕಾದ ಕೆಲಸ ಕಾರ್ಯಗಳನ್ನು ತೀರ್ಮಾನಿಸಿ, ಹಸ್ತಪತ್ರಿಕೆಗಳನ್ನು ಮುದ್ರಿಸಿ ಎಲ್ಲಾ ಕಡೆಗೂ ಹಂಚುವ ವ್ಯವಸ್ಥೆ ಮಾಡುತ್ತಾರೆ. ಅಲ್ಲದೆ ಸರ್ಕಾರದಿಂದ ಬರಬಹುದಾದ ಮೊತ್ತ ಮತ್ತು ಖರ್ಚುಗಳ ತುಲನಾತ್ಮಕ ಚರ್ಚೆ ನಡೆಸಿ ಕೊರತೆಯನ್ನು ತುಂಬಿಕೊಳ್ಳುವ ವ್ಯವಸ್ಥೆಯನ್ನು ಸಹ ಆಡಳಿತ ಮಂಡಳಿ ಕೈಗೊಳ್ಳುತ್ತದೆ.

ಉತ್ಸವದ ಪ್ರಕಾರಗಳು

ಧ್ವಜಾರೋಹಣ:– ಚೈತ್ರ ಪೂರ್ಣಿಮೆಗೆ ಒಂಭತ್ತು ದಿನ ಮೊದಲು ದೇವಸ್ಥಾನದ ಪ್ರಾಂಗಣದ ದೇವ ಮೂಲೆಯಲ್ಲಿ ಧ್ವಜಸ್ತಂಭದ ಸ್ಥಾಪನೆಯಾಗುತ್ತದೆ. ಈ ಧ್ವಜಾರೋಹಣದ ನಂತರವೇ ಎಲ್ಲಾ ಉತ್ಸವಗಳು ಪ್ರಾರಂಭವಾಗುತ್ತದೆ. ಅಂದರೆ ಧ್ವಜಾರೋಹಣದ ದಿನ ದೇವಸ್ಥಾನದ ಪೂಜಾರಿಗಳಾದಿಯಾಗಿ, ಗಣಾಚಾರಿ, ಗಂಟೆಪೂಜಾರಿ, ಕರಗವನ್ನು ಹೊರುವವರು, ಉತ್ಸವದ ಯಶಸ್ಸಿಗಾಗಿ ಧ್ವಜಕಂಬಕ್ಕೆ ಕಂಕಣ ಕಟ್ಟಿ ತಾವು ಕಂಕಣ ಧರಿಸುತ್ತಾರೆ. ಅಂದಿನಿಂದ ಮಡಿವಂತಿಕೆ, ಪುಣ್ಯಸ್ನಾನಗಳು, ಆರತಿಗಳು, ಹಸಿಕರಗ, ಪೊಂಗಲು ಸೇವೆ, ಪೇಟೆ ಕರಗ, ವಸಂತೋತ್ಸವ ಮತ್ತು ಗಾವು ಇತ್ಯಾದಿಗಳು ನಡೆದು ಧ್ವಜಾರೋಹಣ ಆಗುವವರೆಗೂ ಎಲ್ಲರೂ ಉತ್ಸವದ ಪಾವಿತ್ರ್ಯತೆಯನ್ನು ಚಾಚೂ ತಪ್ಪದೇ ಕಾಪಾಡಕೊಳ್ಳತಕ್ಕದ್ದಾಗಿರುತ್ತದೆ.

ಧ್ವಜಾ ಅವರೋಹಣಕ್ಕಾಗಿ ಬಿದುರಿನ ಧ್ವಜಸ್ತಂಭವನ್ನು ಉಪಯೋಗಿಸುತ್ತಾರೆ. ಇದನ್ನು ದೇವಸ್ಥಾನದ ದಕ್ಷಿಣ ಭಾಗದಲ್ಲಿರುವ ಜರಗನಹಳ್ಳಿ ಗ್ರಾಮದಲ್ಲಿ ವಾಸಿಸುವ ತಿಗಳ

ಜನಾಂಗದವರು ಹಿಂದಿನ ವರುಷವೇ ಆ ರೀತಿ ಗುರ್ತಿಸಲ್ಪಟ್ಟಿರುವ ಬಿದುರನ್ನು ಕಾಡಿನಿಂದ ಕಡಿದು ತರುತ್ತಾರೆ. (ಅದನ್ನು ವರ್ಷವಿಡಿ ಪೂಜೆ ಮಾಡಿ ಜೋಪಾನ ಪಡಿಸಿರುತ್ತಾರೆ) ಈ ದಿನ ರಾತ್ರಿ ಹತ್ತು ಗಂಟೆಗೆ ದೇವಸ್ಥಾನದ ಉತ್ಸವ ಮೂರ್ತಿಗಳನ್ನು ರಥದಲ್ಲಿರಿಸಿ ಪೇಟೆ ಬೀದಿಯಲ್ಲಿ ಉತ್ಸವವನ್ನು ನಡೆಸಲಾಗುತ್ತದೆ. ಈ ಉತ್ಸವದೊಂದಿಗೆ ನಮ್ಮ ಜನಾಂಗದವರೇ ಆದ ಪೋತರಾಜನ ಮನೆಯವರು ಪದ್ಧತಿಯಂತೆ ಧ್ವಜದಂಡವನ್ನು ಸಿದ್ಧಪಡಿಸಿ ಅದಕ್ಕೆ ಹಳದಿ ಬಣ್ಣದ ಧ್ವಜವನ್ನೇರಿಸಿ ಪೂಜಾ ಸಾಮಗ್ರಿಗಳೊಂದಿಗೆ ಈ ಧ್ವಜವನ್ನು ಉತ್ಸವದೊಂದಿಗೆ ಮೆರವಣಿಗೆಯಲ್ಲಿ ಕೊಂಡೊಯದ್ದು ದೇವಸ್ಥಾನಕ್ಕೆ ಬಂದು ಸೇರುತ್ತಾರೆ.

ಇದಾದ ನಂತರ ದೇವಸ್ಥಾನದ ಆಡಳಿತ ಮಂಡಳಿಯವರು ಯಜಮಾನರು, ಗೌಡರು, ದೇವಸ್ಥಾನದ ಚಾಕರಿದಾರರು, ವೀರಕುಮಾರರಾದಿಯಾಗಿ ಗಣಾಚಾರಿ, ಘಂಟೆ ಪೂಜಾರಿ, ಮತ್ತು ಪೂಜಾರರ ಮನೆಗೆ ವಾದ್ಯಗಳ ಸಮೇತ ಹೋಗಿ ಅವರವರ ಮನೆಯ ಪೂಜೆಗಳನ್ನು ಮುಗಿಸಿಕೊಂಡು ಗೌರವಗಳೊಂದಿಗೆ ದೇವಸ್ಥಾನಕ್ಕೆ ಕರೆತರುತ್ತಾರೆ. ದೇವಸ್ಥಾನದಲ್ಲಿ ಕುಲಪುರೋಹಿತರು ಇವರನ್ನು ಬರಮಾಡಿಕೊಂಡು ದೇವಸ್ಥಾನದಲ್ಲಿ ಪುಣ್ಯಾಹ ಹೋಮ ಇತ್ಯಾದಿ ಶುದ್ಧಿಕಾರ್ಯಗಳನ್ನು ಜರುಗಿಸಿ ದೇವಸ್ಥಾನದವನ್ನು ಎಲ್ಲ ದೋಷಗಳಿಂದ ಮುಕ್ತಗೊಳಿಸಿ ಧ್ವಜಸ್ತಂಭವನ್ನು ಗೋಮಯದಿಂದ ಶುದ್ಧಿಗೊಳಿಸಿ ಹಾಲಿನಿಂದ ಅಭಿಷೇಕ ಮಾಡಿ, ಕಂಕಣ ಕಟ್ಟಿಸುವ ಪೂಜೆ ಮಾಡುತ್ತಾರೆ. ಸ್ತಂಭದ ಕೊನೆಯಲ್ಲಿ ಹಳದಿ ಬಣ್ಣದ ತ್ರಿಕೋನಾಕಾರದ ಧ್ವಜವನ್ನು ಕಟ್ಟಿಸುವ ಮೂಹರ್ತದಲ್ಲಿ ಬೆಳಗಿನ ಜಾವ ಧ್ವಜಾರೋಹಣ ಮಾಡುತ್ತಾರೆ. ಈ ಕೈಂಕರ್ಯವನ್ನು ಧ್ವಜಾರೋಹಣವೆಂತಲೂ ದೇವರು ಪಟ್ಟಕ್ಕೇರುತ್ತಾರೆ ಎಂತಲು ಕರೆಯಲ್ಪಡುತ್ತದೆ. ಈ ದಿನದಿಂದ ಉತ್ಸವ ಮೂರ್ತಿಗಳನ್ನು ಮೂಲಸ್ಥಾನದಿಂದ ಎತ್ತಿ ಪೀಠದಲ್ಲಿರಿಸಿ, ಪೂಜಾದಿ ಕೈಂಕರ್ಯಗಳನ್ನು ಪ್ರಾರಂಭಿಸುತ್ತಾರೆ. ನಂತರ ಮೆರವಣಿಗೆ ಉತ್ಸವ ನಡೆಸುತ್ತಾರೆ. ಇಲ್ಲಿಂದ ಕರಗದ ಉತ್ಸವ ಪ್ರಾರಂಭಗೊಳ್ಳುತ್ತದೆ.

ಮಡಿವಂತಿಕೆ:– ಬೆಂಗಳೂರಿನಲ್ಲಿ ಹೆಚ್ಚಿಗೆ ವಹ್ನಿಕುಲ ಕ್ಷತ್ರಿಯರು ಈ ಕರಗ ಶಕ್ತಿ ಉತ್ಸವದಲ್ಲಿ ಪಾಲ್ಗೊಳ್ಳುತ್ತಾರೆ. ಇವರುಗಳು ಧ್ವಜಾರೋಹಣಕ್ಕೆ ಮೊದಲೆ ತಮ್ಮ ವಾಸದ ಮನೆಗಳನ್ನು ಶುದ್ಧಿಗೊಳಿಸಿ ತಾವು ಶುಚಿರ್ಭೂತರಾಗಿ ಈ ಉತ್ಸವದಲ್ಲಿ ಪಾಲ್ಗೊಳ್ಳಲು ಸಿದ್ಧರಾಗುತ್ತಾರೆ. ಧ್ವಜಾರೋಹಣದ ನಂತರ ಈ ಉತ್ಸವಗಳು ಮುಗಿಯುವವರೆಗೆ ಮಕ್ಕಳಾದಿಯಾಗಿ ಯಾರು ತಮ್ಮ ಮನೆಯಲ್ಲಲ್ಲದೆ ಹೊರಗಡೆ ಸಿದ್ಧಪಡಿಸಿರುವ ಆಹಾರವನ್ನು ಸೇವಿಸುವಂತಿಲ್ಲ. ಮನೆಯಲ್ಲಿಯೂ ಈ ಹಿಂದೆ ಉಪಯೋಗಿಸಿದ ಯಾವುದೇ ಪಾತ್ರೆ ಸಾಮಾನುಗಳನ್ನು ಉಪಯೋಗಿಸುವಂತಿಲ್ಲ.

ಹೊಸ ಮಡಿಕೆ ಅಥವಾ ಹೊಸ ಪಾತ್ರೆಯಲ್ಲಿ ಸಿದ್ಧಪಡಿಸಿದ ಆಹಾರಗಳನ್ನು ಹಸಿರು ಎಲೆಗಳ ಮೇಲೆ ಬಡಿಸಿಕೊಂಡು ಊಟ ಮಾಡಬೇಕು. ಶುದ್ಧ ಶಾಖಾಹಾರಿಯಾಗಿರಬೇಕು. ಬೀಡಿ, ಸಿಗರೇಟು, ಮದ್ಯಪಾನೀಯಗಳನ್ನು ಸೇವಿಸಬಾರದು ಎಂದೆಲ್ಲ ಈ ಒಂಭತ್ತು ದಿನಗಳು ಕಟ್ಟುನಿಟ್ಟಾಗಿ ಪಾಲಿಸಬೇಕೆಂಬ ನಿಯಮವಿದೆ. ಈ ರೀತಿ ಶ್ರದ್ಧಾ ಭಕ್ತಿಗಳಿಂದ ನಿಯಮಗಳನ್ನು ಪಾಲಿಸಿ ದೈವಕಾರ್ಯದಲ್ಲಿ ಭಾಗವಹಿಸಿದಲ್ಲಿ ಅಂತಹ ಮನೆಗಳಲ್ಲಿ ಶಾಂತಿ, ಸಮೃದ್ಧಿ ಮತ್ತು ಸಂಪತ್ತು ಹೆಚ್ಚುವದೆಂತಲೂ, ಈ ನಿಯಮಗಳನ್ನು ನಡೆಸದಿದ್ದಲ್ಲಿ ಅಂತಹವರ ಎಲ್ಲಾ ಕಾರ್ಯಗಳಲ್ಲಿ ವಿಘ್ನಗಳು ತಲೆದೋರಿ ಅಷ್ಟಕಷ್ಟಗಳಿಗೆ ಗುರಿಯಾಗುತ್ತಾರೆ ಎಂದು ನಂಬಿಕೆ ಇದೆ.

ಆದ್ದರಿಂದ ಸಾಮಾನ್ಯವಾಗಿ ಬಡವ ಬಲ್ಲಿದನೆನ್ನದೆ ಎಲ್ಲರೂ ಎಷ್ಟೇ ಕಷ್ಟವಾದಾಗ್ಯೂ ಈ ನಿಯಮಗಳನ್ನು ಪಾಲಿಸಕೊಂಡು ಬರುತ್ತಾರೆ. ಇಂತಹ ಶ್ರದ್ಧಾಭಕ್ತಿಯಲ್ಲಿ ಫಲಕಂಡ ದರ್ಜಿ ಜನಾಂಗದವರು, ದೇವಾಂಗ ಮತ್ತು ಗಾಣಿಗ ಜನಾಂಗದಲ್ಲಿ ಕೆಲವರು ಭಕ್ತಿಶ್ರದ್ಧೆಯಿಂದ ಈ ಮಡಿವಂತಿಕೆ ನಿಯಮಗಳನ್ನು ಪಾಲಿಸಿ ಪುಣ್ಯ ಪಡೆದಿರುವುದು ಕಂಡುಬಂದಿರುತ್ತದೆ.

ಪುಣ್ಯಸ್ನಾನ:- ಕರಗ ಶಕ್ತ್ಯೋತ್ಸವದಲ್ಲಿ ಪಾಲ್ಗೊಳ್ಳುವ ವೀರಕುಮಾರರು, ಗಣಾಚಾರಿ, ಗಂಟೆ ಪೂಜಾರಿ ಮತ್ತು ಪೂಜಾರಿಗಳೊಂದಿಗೆ ಒಂಭತ್ತು ದಿನಗಳು ಒಂಭತ್ತು ಕೊಳಗಳಲ್ಲಿ ಮಿಂದು ಶ್ರದ್ಧಾಭಕ್ತಿಯಿಂದ ಸ್ನಾನ ಮಾಡಿ ಆತ್ಮಾದಿ ತನುಮಗಳನ್ನು ಶುದ್ಧಿಮಾಡಿಕೊಂಡು ಶಕ್ತ್ಯೋತ್ಸವದಲ್ಲಿ ಪಾಲ್ಗೊಳ್ಳುವುದು ರೂಡಿ, ಇದಕ್ಕಾಗಿ ಹಿಂದೆ ಬೆಂಗಳೂರಿನ ಸುತ್ತ ಒಂಭತ್ತು ಬಾವಿ, ಕೆರೆಗಳ ನೀರಿನಲ್ಲಿ ಮಿಂದು ಬರುವುದು ವಾಡಿಕೆಯಲ್ಲಿತ್ತು. ಬೆಳೆದ ನಗರದಲ್ಲಿ ಕೆರೆ ಬಾವಿಗಳ ಕೊರತೆಯಿರುವುದರಿಂದ ಸ್ನಾನಾದಿಗಳನ್ನು ಮನೆಯಲ್ಲಿಯೇ ಮುಗಿಸಿಕೊಂಡು ಪೂಜಾರಿಯವರಿಗೆ ಮಾತ್ರ ಸ್ನಾನದ ವ್ಯವಸ್ಥೆ ಮಾಡಿಕೊಂಡು ಒಂಭತ್ತು ಕಡೆ ದೇವಸ್ಥಾನ, ಬಾವಿಗಳನ್ನು ಆರಿಸಿಕೊಮಡು ಪೂಜಾದಿ ಕೈಂಕತರ್ಯಗಳನ್ನು ಮುಗಿಸಿ, ದೇವಸ್ಥಾನ ಸೇರುವುದು ವಾಡಿಕೆಯಾಗಿದೆ.

ಈ ಒಂಭತ್ತು ದಿನಗಳು ವೀರಕುಮಾರರಾದಿಯಾಗಿ ಉತ್ಸವದಲ್ಲಿ ಪಾಲ್ಗೊಳ್ಳುವ ಎಲ್ಲರೂ ಪ್ರತಿದಿನ ರಾತ್ರಿ ದೇವಸ್ಥಾನದಲ್ಲಿ ಮಂಗಳಾರತಿಯಾದ ನಂತರ ಆ ದಿನದ ಊಟವನ್ನು ಸೇವಿಸಬಹುದಾಗಿದೆ.

ಆರತಿಗಳು:- ಧ್ವಜಾರೋಹಣ ದಿನದಿಂದ ಆರನೆಯ ದಿನ ದೇವಸ್ಥಾನದಲ್ಲಿ ಆರತಿಗಳ ಉತ್ಸವ ವಿಜ್ರುಂಭಣೆಯಿಂದ ನಡೆಯುತ್ತದೆ. ಈ ಉತ್ಸವದಲ್ಲಿ ಹೆಂಗಸರು ಮತ್ತು ಮಕ್ಕಳದೇ ಹೆಚ್ಚಿನ ಪಾಲುಗಾರಿಕೆ. ಈ ಒಂಭತ್ತು ದಿನಗಳಲ್ಲಿ ವೀರಕುಮಾರರಂತೆಯೇ ಮನೆಯ ಹೆಂಗಸರು, ಮಕ್ಕಳು, ಶುದ್ಧಿ ಪಾವಿತ್ರ್ಯತೆಯನ್ನು ಅದರಿಸುತ್ತಾರೆ. ಈ ದಿನ ದೇವಸ್ಥಾನದ ನಾಲ್ಕು ದಿಕ್ಕಿಗೂ ತ್ರಿಶೂಲಧಾರಿಗಳಾದ ಸೇವಾಕರ್ತರು ಮನೆಮನೆಗೂ ತೆರಳಿ ಪೂಜೆಯನ್ನು ಸ್ವೀಕರಿಸುತ್ತಾರೆ. ದಕ್ಷಿಣ ದಿಕ್ಕಗೆ ಈ ರೀತಿ ಸಂಚರಿಸುವ ದೇವಸ್ಥಾನದ ಸೇವಾಕರ್ತರು ಪೋತರಾಜನ ವಿಗ್ರಹವನ್ನು ತ್ರಿಶೂಲದೊಂದಿಗೆ ಪೋತರಾಜನ ಉತ್ಸವ ಮೂರ್ತಿಯನ್ನು ಕೊಂಡೊಯ್ಯುತ್ತಾರೆ. ಈ ರೀತಿ ತ್ರಿಶೂಲಕ್ಕೆ ಪೂಜೆ ಸ್ವೀಕರಿಸುತ್ತಾ, ಹರಕೆ ಹೊತ್ತವರ ಮನೆಗಳಿಗೆ ಪೋತರಾಜನ ಉತ್ಸವಮೂರ್ತಿಯನ್ನು ಕೊಂಡೊಯ್ದು ಪೂಜೆಯನ್ನು ಸ್ವೀಕರಿಸುತ್ತಾರೆ. ಈ ರೀತಿ

ಎಲ್ಲಾ ಕುಲಬಾಂಧವರ ಮನೆಗಳಿಗೆ ತೆರಳಿ ಪೂಜೆ ಸ್ವೀಕರಿಸಿದ ನಂತರ ಇತರೇ ಮೂರು ದಿಕ್ಕಿಗೂ ಹೊರಟ ತ್ರಿಶೂಲಧಾರಿ ಸೇವಾಕರ್ತರು ಮಧ್ಯರಾತ್ರಿಯೊಳಗೆ ದೇವಸ್ಥಾನಕ್ಕೆ ಹಿಂತಿರುಗುತ್ತಾರೆ. ದಕ್ಷಿಣಕ್ಕೆ ಹೊರಡ ತ್ರಿಶೂಲಧಾರಿ ಸೇವಾಕತ್ರು ಸಿದ್ಧಾಪುರ ಹಾಗೂ ಮಾವಳ್ಳಿಯಲ್ಲಿ ವಾಸಿಸುವ ಕುಲಬಾಂಧವರ ಮನೆಗಳಲ್ಲಿ ವಿಶೇಷವಾಗಿ ಸಿಂಗರಿಸಿದ ಆರತಿಗಳೊಂದಿಗೆ ಸೇವಾಕರ್ತರು ತಮ್ಮೊಂದಿಗೆ ಇರುವಂತಹ ಬಾಂಕಾವಾದಕರು, ಘಂಟಾವಾದಕರು, ನಾದಸ್ವರ ವಾದಕರು, ಪಂಜಿನವರು ಅಲ್ಲದೆ ವಿಶೇಷ ವಾದ್ಯವೃಂದದೊಂದಿಗೆ ಬಂದು ದೇವಸ್ಥಾನ ತಲುಪುತ್ತಾರೆ. ಇದು ಒಂದು ರೀತಿಯ ವಿಶಿಷ್ಟ ಪ್ರಚಾರವನ್ನು ನಗರ ವಾಸಿಗಳಿಗೆ ನೀಡುತ್ತದಲ್ಲದೇ, ಕುಲಬಾಂಧವರನ್ನು ಈ ಮುಂದಿನ ಶಕ್ತ್ಯೋತ್ಸವಕ್ಕೆ ಸನ್ನದ್ದರಾಗಿರುವಂತೆ ಚೈತನ್ಯ ನೀಡುತ್ತದೆ. ಅಲ್ಲದೇ ತ್ರಿಶೂಲ ಮತ್ತು ಪಂಜಿನವರ ಸಂಚಾರವು ಈ ಪ್ರದೇಶಗಳನ್ನು ಎಲ್ಲ ಪೀಡೆಗಳಿಂದ ಮುಕ್ತವಾಗಿಸಿ, ಪುಣ್ಯಕ್ಷೇತ್ರವಾಗಿಸುತ್ತದೆ. ಮುಂದೆ ನಡೆಯಲಿರುವ ಶಕ್ತ್ಯೋತ್ಸವಕ್ಕೆ ಯಾವ ರೀತಿಯ ಅಡೆತಡೆಗಳೂ ಬಾರದಂತೆ ರಕ್ಷಾಕವಚವನ್ನು ಒಡ್ಡಿದಂತಾಗುತ್ತದೆ. ಆದ್ದರಿಂದ ಕುಲಬಾಂಧವರು ತಮ್ಮ ತಮ್ಮ ಕ್ಷೇತ್ರಕ್ಕೆ ಬರಮಾಡಿಕೊಂಡು ಮನೆಗಳಿಗೆ ಆಹ್ವಾನಿಸಿ ತ್ರಿಶೂಲವನ್ನು ಪೂಜಿಸಿ ಸೇವಾಕರ್ತರನ್ನು ಸತ್ಕರಿಸಿ ಕಳುಹಿಸಿಕೊಂಡುತ್ತಾರೆ.

ಈ ದಿನ ಅಕ್ಕಿ ಮತ್ತು ಬೆಲ್ಲದಿಂದ ತಯಾರಿಸಿದ ತಂಬಿಟ್ಟನ್ನು ಅಂದವಾದ ಪಾತ್ರೆಗಳಲ್ಲಿಟ್ಟು ಅದಕ್ಕೆ ಬಣ್ಣಬಣ್ಣದ ಹೂವುಗಳಿಂದ ಚಿತ್ತಾರದಂತೆ ಜೋಡಿಸಿ ಒಳಗೆ ತುಪ್ಪದ ದೀಪವನ್ನಿಟ್ಟು ಬೆಳಗಿಸಿ ತಮ್ಮ ಮನೆಗಳಿಂದ ದೇವಸ್ಥಾನಕ್ಕೆ ಬಂದು ಸೇರುತ್ತಾರೆ. ದೇವಸ್ಥಾನಕ್ಕೆ ದೂರವಿರುವ ಮಾವಳ್ಳಿ, ಸಿದ್ಧಾಪುರದಲ್ಲಿ ವಾಸಿಸುವ ಈ ಜನಾಂಗದ ಮಹಿಳೆಯರು ಸಿದ್ಧಪಡಿಸಿ ತರುತ್ತಿರುವ ಆರತಿಗಳ ವೈಶಿಷ್ಟ್ಯವೇ ಬೇರೆ. ಅಂದವಾದ ಮಂಟಪಗಳಲ್ಲಿ ಚಿತ್ತಾರದ ಕಳಶಗಳಲ್ಲಿ ದೀಪಗಳನ್ನು ಬೆಳಗಿಸಿಕೊಂಡು ತಮಟೆ ವಾದ್ಯಗಳೊಂದಿಗೆ ಬಂದು ದೇವಸ್ಥಾನ ಸೇರುತ್ತಾರೆ. ಅಷ್ಟರಲ್ಲಿ ಕಿಶೋರ, ಕಿಶೋರಿಯರ ತಂಡ ಇದೇ ಪೇಟೆಯಲ್ಲಿರುವ ಪೈಲ್ವಾನ್

ಅಣ್ಣಯ್ಯಪ್ಪ ಗರಡಿ ಮತ್ತು ಪೈಲ್ವಾನ್ ಕುಂಜಣ್ಣ ಗರಡಿಗಳಿಂದ ತರಬೇತು ಪಡೆದು ಸಿದ್ಧರಾಗಿ ವಾದ್ಯಗಳೊಂದಿಗೆ ಅಸ್ತ್ರಶಸ್ತ್ರಗಳನ್ನು ಹಿಡಿದು ದೇವಸ್ಥಾನ ತಲುಪುತ್ತಾರೆ. ಮಧ್ಯರಾತ್ರಯಿಂದ ಬೆಳಗಿನಜಾವದವರೆವಿಗೂ ಮಕ್ಕಳಿಂದ ಕತ್ತಿವರಸೆ, ಕೋಲುವರಸೆ, ಬೆಂಕಿ ಚೆಂಡಿನ ಪ್ರದರ್ಶನ, ಹಿಡಿತ, ಜಿಗಿತ ಮುಂತಾದ ಯುದ್ಧಕಲೆಗಳೊಂದಿಗೆ ತಮ್ಮ ಕ್ಷಾತ್ರ ಪ್ರದರ್ಶನವನ್ನು ಮಾಡುತ್ತಾರೆ. ನಂತರ ಪೇಟೆಯ ಮುಖ್ಯ ಬೀದಿಗಳಲ್ಲಿ ಈ ಬಾಲಕ ಬಾಲಕಿಯರೊಂದಿಗೆ ಮಹಿಳೆಯರು, ಯುವತಿಯರು, ಅಂದವಾಗಿ ಸಿಂಗರಿಸಿಕೊಂಡು ತಮ್ಮೆಲ್ಲ ಒಡವೆ ವಸ್ತ್ರಗಳೊಂದಿಗೆ ಶೋಭಿಸುತ್ತಾ, ಭಕ್ತಿಶ್ರದ್ಧೆಗಳಿಂದ ತಾವು ತಂದಿರಬಹುದಾದ ಆರತಿಗಳನ್ನು ತಲೆಯ ಮೇಲಿಟ್ಟುಕೊಂಡು ಪೇಟೆಯ ಪ್ರಮುಖ ಬೀದಿಗಳಲ್ಲಿ ಉತ್ಸವ ನಡೆಸುತ್ತಾರೆ. ತದನಂತರ ದೇವಸ್ಥಾನಕ್ಕೆ ಮರಳಿ ದೇವರಿಗೆ ಆರತಿ ಮಾಡಿ ಆರತಿಯನ್ನು ವಿಸರ್ಜನೆಗೊಳಿಸಿ ತಮ್ಮ ತಮ್ಮ ಮನೆಗಳಿಗೆ ತೆರಳುತ್ತಾರೆ. ಈ ಉತ್ಸವದಲ್ಲಿ ಶ್ರದ್ಧಾಭಕ್ತಿಯಿಂದ ಭಾಗವಹಿಸಿದ ತರುಣಿರಿಗೆ ಭೀಮಾರ್ಜುನರಂತಹ ಗಂಡಂದಿರು ಲಭ್ಯವಾಗುತ್ತಾರೆಂತಲೂ, ಇಷ್ಟೇ ಶ್ರದ್ಧಾಭಕ್ತಿಯಿಂದ ಆರತಿ ಉತ್ಸವದಲ್ಲಿ ಪಾಲ್ಗೊಳ್ಳುವ ತಾಯಂದಿರಿಗೆ ಸುಪುತ್ರರು ಹುಟ್ಟುತ್ತಾರೆಂತಲೂ ಕುಂಕುಮ ಭಾಗ್ಯ ದೀರ್ಘಕಾಲ ಉಳಿಯುವುದೆಂತಲೂ ನಂಬಿಕೆಯಿದೆ. ಇದರ ಪಾವಿತ್ರ್ಯತೆಯಲ್ಲಿ ಕಳಂಕ ಉಂಟಾದಲ್ಲಿ, ಶ್ರದ್ಧಾಭಕ್ತಿ ಕಡಿಮೆಯಾಗಿ ತಲೆಯಲ್ಲಿ ಹೊತ್ತ ಆರತಿ ಜಾರಿ ಕೆಳಗೆ ಬಿದ್ದಲ್ಲಿ ಅಮಂಗಲವು ಅಷ್ಟಕಷ್ಟಗಳು ತಲೆದೋರುವುದು ಎಂಬ ಗಾಢ ನಂಬಿಕೆ ಇವರಲ್ಲಿದೆ.

ಹಸಿಕರಗ:– ಧ್ವಜಾರೋಹಣದಿಂದ ಏಳನೇ ದಿನದಂದು ಹಸಿಕರಗ ನಡೆಯುತ್ತದೆ. ಈ ದಿನ ಕುಲಬಾಂಧವರಿಗೆ ಅತ್ಯಂತ ಮಹತ್ವದ ದಿನವಾದರೆ, ಇತರೆ ಭಕ್ತಾದಿಗಳಿಗೆ ಇದೊಂದು ಪುಣ್ಯದಿನ. ಹಸಿಕರಗವು ನಡೆಯುವ ಸಂಪಂಗಿ ಕೆರೆಯ ಸುತ್ತಮುತ್ತಲೂ ಮತ್ತು ಹಸಿಕರಗವು ನಡೆದುಬಂದು ದೇವಸ್ಥಾನ ಸೇರುವ ಹಾದಿಯುದ್ದಕ್ಕೂ ಆ ದಿನದ ಮಧ್ಯಾಹ್ನದಿಂದಲೇ ಅಂಗಡಿ ಬೀದಿಗಳು, ಅಲ್ಲಲ್ಲಿ ಅರವಂಟಿಗೆಗಳು, ತಳಿರುತೋರಣಗಳು ಸಿದ್ದವಿರುತ್ತದೆ. ಇಡೀ ರಾತ್ರಿ

ಸಾವಿರಾರು ಜನ ದೇವಿಯ ದರ್ಶನಕ್ಕಾಗಿ ಕಾಯುತ್ತಿರುತ್ತಾರೆ. ಇದೊಂದು ಅದ್ಭುತ ಮತ್ತು ರಮಣೀಯ ದೃಶ್ಯವಾಗಿರುತ್ತದೆ.

ಈ ದಿನದಂದು ಪುಣ್ಯಸ್ನಾನ ಪೂಜಾದಿಗಳನ್ನು ಮುಗಿಸಿ ದೇವಸ್ಥಾನದಿಂದ ವೀರಕುಮಾರರು, ಘಂಟೆ ಪೂಜಾರಿ, ಗಣಾಚಾರಿ, ಪೂಜಾರಿ, ಕುಲಪುರೋಹಿತರು ಆದಿಯಾಗಿ ರಾತ್ರಿ ನಗರದ ಅತಿ ಪುರಾತನ ಕೆರೆಗಳಲ್ಲೊಂದಾದ ಸಂಪಂಗಿ ಕೆರೆ ಅಂಗಳದಲ್ಲಿ (ಇದಕ್ಕೆ ಕಣ ಎನ್ನುತ್ತಾರೆ) ಸ್ಥಳ ಶುದ್ದಿ ಮಾಡಿ ಪೀಠ ಸ್ಥಾನದಲ್ಲಿ ಪೂಜಾದ್ರವ್ಯ ಪವಿತ್ರ ವಸ್ತುಗಳನ್ನು ಇರಿಸಿ ಕರಗವನ್ನು ಹೊರುವ ಪೂಜಾರಿಗೆ ಮಂಗಳ ದ್ರವ್ಯಸ್ನಾನವನ್ನು ಮಾಡಿಸಿ ಅವರನ್ನು ಅಣಿಗೊಳಿಸುತ್ತಾರೆ. ಈ ಸಮಯದಲ್ಲಿ ಕುಲಪುರೋಹಿತರು ವೀರಕುಮಾರರಿಗೆ ಕಂಕಣಧಾರಣೆ ಮಾಡಿಸಿ ದೇವತಾ ಆರಾಧನೆಗೆ ಸಜ್ಜುಮಾಡುತ್ತಾರೆ. ವೀರ ಕುಮಾರರು ಬಿಳಿ ಬಣ್ಣದ ಪೈಜಾಮ ಅಥವಾ ಕಚ್ಚೆ ಧರಿಸಿ ಕೆಂಪುಬಣ್ಣದ ವಸ್ತ್ರಗಳನ್ನು ಸೊಂಟಕ್ಕೆ ಬಿಗಿದುಕಟ್ಟಿ, ತಲೆಗೆ ಜರಿ ಅಂಚಿನ ಪೇಟಗಳನ್ನು ಧರಿಸಿ ಹಣೆಯಲ್ಲಿ ಎರಡು ಬಿಳಿ ನಾಮ ಮಧ್ಯದಲ್ಲಿ ಕೆಂಪು ನಾಮಗಳನ್ನು ಧರಿಸಿಕೊಮಡು ತಮ್ಮದೇ ಆದ ಶುದ್ಧಿ ಮಾಡಿ ಸಿಂಗರಿಸಿದ ಹರಿತವಾದ ಖಡ್ಗಗಳನ್ನು (ಅಲಗು) ಕೈಯಲ್ಲಿ ಹಿಡಿದು ಅರ್ಧಚಂದ್ರಾಕಾರವಾಗಿ ನಿಲ್ಲುತ್ತಾರೆ.

ಅಷ್ಟರಲ್ಲಿ ಕಣದಲ್ಲಿರುವ ಮಂಟಪದಲ್ಲಿ ಕೆಂಪು ಬಣ್ಣದ ವಸ್ತ್ರ ಮತ್ತು ಆಭರಣಗಳಿಂದ ಅಲಂಕೃತವಾದ ಹಸಿಕರಗವು ಸ್ಥಾಪಿಸಲ್ಪಟ್ಟಿರುತ್ತದೆ. ಮಂತ್ರದಡ ಹಾಗೂ ಬಾಕು(ಹರಿತವಾದ ಆಯುಧ) ಇವುಗಳನ್ನು, ಕರಗವನ್ನು ಹೊರಲು ಅಣಿಯಾಗಿರುವ ಪೂಜಾರಿಯ ಕೈಯಿಂದ ಪೂಜೆ ಮಾಡಿಸುತ್ತಾರೆ. ಈ ಸಮಯದಲ್ಲಿ ಎಲ್ಲಾ ವೀರಕುಮಾರರು ಹಾಗೂ ಭಕ್ತರಿಂದ ಮಣಗಟ್ಟಲೆ ಕರ್ಪೂರವು ಉರಿಸಲ್ಪಡುತ್ತದೆ. ಇದೇ ಸಮಯದಲ್ಲಿ ಘಂಟೆ ಪೂಜಾರಿಗಳು, ಗಣಾಚಾರಿಗಳು, ಕುಲಪುರೋಹಿತರು, ಎಲ್ಲಾ ಸೇರಿ ಗೋವಿಂದ, ಗೋವಿಂದ ಗೋವಿಂದ ಎಂದು ಶ್ರೀಮನ್ನಾರಾಯಣನನ್ನು ನೆನೆಯುತ್ತಾ ಶಕ್ತಿಯನ್ನು ಆವಾಹನೆ ಮಾಡುತ್ತಾರೆ. ಆಗ ಎಲ್ಲಾ ವೀರಕುಮಾರರು ಗೋವಿಂದೋ ಡಿ, ಡಿಕ್–ಡಿ ಎಂದು ಕೃಷ್ಣನ ಧ್ಯಾನ ಮಾಡುತ್ತಾ

ಅಲಗು ಸೇವೆ ಮಾಡುತ್ತಾರೆ. (ಹರಿತವಾದ ಖಡ್ಗದಿಂದ ತಮ್ಮ ಎದೆಯ ಮೇಲೆ ರಭಸದಿಂದ ಹೊಡೆದುಕೊಳ್ಳುವುದನ್ನು ಅಲಗು ಸೇವೆ ಎನ್ನುತ್ತಾರೆ). ಈ ಸಂದರ್ಭದಲ್ಲಿ ಉರಿಯುವ ಕರ್ಪೂರದ ಜ್ವಾಲೆಯ ಮಧ್ಯದಲ್ಲಿ ಪೂಜಾರರು, ಘಂಟೆ ಪೂಜಾರಿ, ಗಣಾಚಾರಿ, ಕುಲಪುರೋಹಿತರೊಂದಿಗೆ ಪೀಠವನ್ನು ಮೂರು ಬಾರಿ ಪ್ರದಕ್ಷಿಣೆ ಮಾಡಿ ಗೋವಿಂದ ನಾಮಾಗಳಿಗಳೊಂದಿಗೆ ದೇವಿಯನ್ನು ಪ್ರಾರ್ಥಿಸಿ ಸ್ತುತಿಸುತ್ತಾರೆ. ಆ ಕ್ಷಣ ಪೂಜಾರಿಯ ಮೇಲೆ ಶಕ್ತಿಯಾವಿರ್ಭವಿಸಿ, ಹಸಿ ಕರಗವು ಪೂಜಾರಿಯ ಎಡಭಾಗದ ಕಂಕುಳಲ್ಲಿ ಅಲಂಕರಿಸಲ್ಪಟ್ಟಿರುತ್ತದೆ. ಈ ಸನ್ನಿವೇಶ ಆಸ್ತಿಕರ ಭಾಗಕ್ಕೆ ಅವಿಸ್ಮರಣೀಯವಾದಮತಹ ಅದ್ಭುತ ರೋಮಾಂಚನವನ್ನುಂಟು ಮಾಡುತ್ತದೆ. ಭಾವಪರವಶರಾಗಿ ಇಹದ ಪರಿವೆಯೇ ಇಲ್ಲದೆ ದೇವಿಯನ್ನು ಹಿಂಭಾಲಿಸುತ್ತಾರೆ.

ಹಳದಿ ಸೀರೆಯನ್ನುಟ್ಟು ನೀಳ ಹೂವಿನ ಜಡೆಯನ್ನು ಹೊತ್ತು ಕಂಕುಳಲ್ಲಿ ಕೆಂಪುವಸ್ತ್ರ ಮತ್ತು ಆಭರಣಗಳಿಂದ ಅಲಂಕೃತವಾದ ಹಸಿ ಕರಗವನ್ನು ಎಡ ಕಂಕುಳಲ್ಲಿ ಧರಿಸಿ ಮಂತ್ರ ದಂಡವನ್ನು ಹಿಡಿದು ಬಲಗೈಯಲ್ಲಿ ಫಳಪಳನೆ ಹೊಳೆಯುವ ಹರಿತವಾದ ಬಾಕುವನ್ನು ಹಿಡಿದು ಭಕ್ತರ ದರ್ಶನಕ್ಕಾಗಿ ಮುಂದೆ ಅಡಿ ಇಟ್ಟು ನಿಂತ ದೇವಿಯ ಭವ್ಯದರ್ಶನವು ಎಂತಹ ನಾಸ್ತಿಕನನ್ನು ತಲ್ಲಣಗೊಳಿಸಿ ಆಸ್ತಿಕನನ್ನಾಗಿ ಮಾಡುವ ಅದ್ಭುತವಾದಂತಹ ದೃಶ್ಯವಾಗಿರುತ್ತದೆ. ಈ ದಿನ ವಹ್ನಿಕುಲ ಬಾಂಧವರಿಗೆ ಬಹಳ ಪವಿತ್ರವಾದ ದಿನ. ತನ್ನ ತಾಯಿಯನ್ನು ಮನೆಗೆ ಆಹ್ವಾನಿಸಿ ಕರೆತರುವ ಪುತ್ರನೋಪಾದಿಯಲ್ಲಿ ಗಳಗಳನೆ ಅತ್ತು, ನಕ್ಕು ಭಕ್ತಿಯ ಪರಾಕಾಷ್ಠೆಯಲ್ಲಿ ಮಿಂದು ವೀರಕುಮಾರರಾಧಿಯಾಗಿ ಕುಲಬಾಂಧವರು ಗೋವಿಂದ ಗೋವಿಂದ ಎನ್ನುತ್ತಾ ಶ್ರೀಕೃಷ್ಣನನ್ನು ನೆನೆಯುತ್ತಾ ಮುಂದೆ ಸಾಗುತ್ತಾರೆ.

ಪೀಠದಿಂದ ಕೆಳಗಿಳಿದ ಶಕ್ತಿ ಸ್ವರೂಪವಾದ ಹಸಿಕರಗವನ್ನು ಗಣಾಚಾರಿ, ಘಂಟೆ ಪೂಜಾರಾದಿ ಹಿರಿಯರು, ವೀರಕುಮಾರರ ಬೆಮಗಾವಲಿನಲ್ಲಿ ನಡೆಸಿಕೊಂಡು ಶಕ್ತಿಪೀಠವನ್ನು ಮೂರು ಬಾರಿ ಪ್ರದಕ್ಷಿಣೆ ಮಾಡಿ ಅಲ್ಲಿ ಸೇರಿರುವ ಎಲ್ಲ ಭಕ್ತರಿಗೂ ದಿವ್ಯದರ್ಶನದ ಅವಕಾಶ

ಕಲ್ಪಿಸಿ (ಸಮಯೋಚಿತವಾಗಿ ಐದು ಬಾರಿ, ಏಳು ಬಾರಿ, ಒಂಭತ್ತು ಬಾರಿ ಪ್ರದಕ್ಷಿಣೆ ಮಾಡುವುದು ವಾಡಿಕೆಯಲ್ಲಿದೆ) ಅಲ್ಲಿಂದ ಬಿಜೈಸಿ ಇತಿಹಾಸ ಪ್ರಸಿದ್ಧವಾದ ಏಳು ಸುತ್ತಿನ ಕೋಟೆ (ಈಗಿನ ಮಹಾನಗರಪಾಲಿಕೆ ಕಟ್ಟಡದ ಪಕ್ಕದಲ್ಲಿರುವುದು)ಗೆ ಬಂದು ಅಲ್ಲಿ ಪೂಜೆಯನ್ನು ಸ್ವೀಕರಿಸಿ ಏಳು ಬಾರಿ ಪ್ರದಕ್ಷಿಣೆಯನ್ನು ಹಾಕಿ ಅಲ್ಲಿಂದ ದೇವಸ್ಥಾನದ ಕಡೆಗೆ ಸಾಗುತ್ತದೆ. ಮಾರ್ಗದ ಮಧ್ಯೆ ಕಣದಿಂದ ಬಿಡುವಾಗ ಏಳು ಸುತ್ತಿನ ಕೋಟೆಯ ಸಮೀಪದಲ್ಲಿ ಮತ್ತು ದೇವಸ್ಥಾನಕ್ಕೆ ಹತ್ತಿರವಾದಾಗ ಹಸಿಕರಗವು ಮಂಡಿಯೂರಿ ನಿಲ್ಲುವುದನ್ನು ಕಾಣಬಹುದು. ಆ ದಿನದ ಉತ್ಸವವನ್ನು ಪೂರ್ಣಗೊಳಿಸುವವರು. ಆ ನಂತರವೇ ಎಲ್ಲಾ ವೀರಕುಮಾರರು ತಮ್ಮ ತಮ್ಮ ಮನೆಗಳಿಗೆ ಹೋಗಿ ಖಡ್ಗ ಪೂಜೆಯ ಪ್ರಸಾದವನ್ನು ಸ್ವೀಕರಿಸಿ ಆ ಹಿಂದಿನ ದಿನದಿಂದ ಆಚರಿಸುತ್ತಿದ್ದ ಉಪವಾಸ ವ್ರತವನ್ನು ಮೊಟಕು ಮಾಡಿ ಆಹಾರ ಸ್ವೀಕರಿಸುವರು.

ಪೊಂಗಲು ಸೇವೆ:– ಧ್ವಜಾರೋಹಣದಿಂದ ಎಂಟನೆಯ ದಿನ ರಾತ್ರಿ ದೇವಸ್ಥಾನದಲ್ಲಿ ನಡೆಸುವ ಕೈಂಕರ್ಯವೇ ಪೊಂಗಲು ಸೇವೆ. ಈ ದಿನ ಕುಲಸ್ಥ ಮಹಿಳೆಯರಿಗೆ ಪ್ರಮುಖವಾದ ಸೇವೆ. ಆರತಿ ದಿನದಂತೆ ಇದು ಮಹಿಳೆಯರೇ ಪ್ರಧಾನ ಪಾತ್ರ ವಹಿಸುವಂತಹ ಉತ್ಸವವಾಗಿರುತ್ತದೆ.

ಹೂವಿನ ಕರಗ:– ಧ್ವಜಾರೋಹಣದಿಂದ ಒಂಭತ್ತನೆಯ ದಿನ ಅಂದರೆ ಚೈತ್ರ ಮಾಸದ ಪೂರ್ಣಿಮೆಯ ದಿನ ಮಧ್ಯರಾತ್ರಿಯಲ್ಲಿ ತುಂಬು ಚಂದ್ರನ ಬೆಳದಿಂಗಲ ತೆರೆಗಳಲ್ಲಿ ಮಲ್ಲಿಗೆ ಹೂವಿನಿಂದ ಅಲಂಕರಿಸಲ್ಪಟ್ಟ ಕರಗದ ಉತ್ಸವವೇ ಶಕ್ತಿಯ್ಯುತ್ಸವ. ಈ ದಿನ ಬೆಳಗ್ಗಿನಿಂದಲೇ ವೀರಕುಮಾರಾದಿ ಎಲ್ಲ ಭಕ್ತರು ಶುಭ್ರ ಸ್ನಾನವನ್ನು ಮಾಡಿ ಉಪವಾಸವಿದ್ದು, ರಾತ್ರಿಯಾಗುತ್ತಿದ್ದಂತೆ ಗಣಾಚಾರಿ, ಘಂಟೆ ಪೂಜಾರಾದಿಯಾಗಿ ವೀರಕುಮಾರರೆಲ್ಲರೂ ಕಣ (ಸಂಪಂಗಿ ಕೆರೆ ಅಂಗಳ)ಕ್ಕೆ ತೆರಳಿ ಶಕ್ತಿಪೀಠದಲ್ಲಿ ಮಂತ್ರದಂಡ ಮತ್ತು ಭಾಕುವನ್ನು ಇರಿಸಿ ಪೂಜಿಸಿ ಕರಗವನ್ನು ಹೊರುವ ಪೂಜಾರಿಗೆ ಮಂತ್ರ ದ್ರವ್ಯಗಳಿಂದ ಸ್ನಾನ ಮಾಡಿಸಿ

ಹೊಸದಾದ ಹಳದಿ ಬಣ್ಣದ ಶುಭ್ರವಾದ ಸೀರೆಯನ್ನು ಉಡಿಸಿ ಪುಷ್ಪಾಭರಣಗಳಿಂದ ಸಿಂಗರಿಸಿ, ಗಣಾಚಾರಿ, ಘಂಟೆ ಪೂಜಾರಿ, ಹಿರಿಯರು ಮತ್ತು ವೀರ ಕುಮಾರರ ರಕ್ಷೆಯಲ್ಲಿ ಮಂಗಳ ವಾದ್ಯಗಳೊಂದಿಗೆ ಸಾಗಿ ಸಪ್ತಮಾತೃಕೆಯರಿರುವ ಏಳು ಸುತ್ತಿನ ಕೋಟೆಗೆ ಪ್ರದಕ್ಷಿಣೆ ಮಾಡಿಕೊಂಡು ದೇವಸ್ಥಾನಕ್ಕೆ ಕರೆತರುತ್ತಾರೆ. ನಂತರ ವೀರಕುಮಾರರೆಲ್ಲರನ್ನೂ ಗಣಾಚಾರಿಯವರ ಮನೆಗೆ ವಿಶೇಷವಾಗಿ ಆಹ್ವಾನಿಸಿ ಗಂಧಪುಷ್ಪಗಳನ್ನು ಕೊಟ್ಟು ಸತ್ಕರಿಸುವತ್ತಾರೆ.

ಈ ಮಧ್ಯೆ ದೇವಸ್ಥಾನದ ಗರ್ಭಗುಡಿಯಲ್ಲಿ ಗಣಾಚಾರಿ, ಘಂಟೆಪೂಜಾರಿ, ಕುಲಪುರೋಹಿತರು, ಪೂಜಾರಿಗಳು ಇವರುಗಳು ಸೇರಿ ಕರಗವನ್ನು ಮಂತ್ರದ್ರವ್ಯಗಳಿಂದಲೂ, ಮಲ್ಲಿಗೆ ಹೂ ಮತ್ತು ಆಭರಣಗಳಿಂದಲೂ ಅರ್ಚಿಸಿ ಗೋವಿಂದ ನಾಮಾವಳಿಗಳ ಮಧ್ಯೆ ವೇದಮಂತ್ರಗಳೊಂದಿಗೆ ಶಕ್ತಿಯನ್ನು ಧ್ಯಾನಿಸುತ್ತಾರೆ. ಆಗ ಪೂಜಾರಿಗೆ ಭಕ್ತಿಯು ಆವಿರ್ಭವಿಸಿ ದೇವತಾಸಾನ್ನಿಧ್ಯ ಉಂಟಾಗುತ್ತದೆ. ಕರಗವು ಪೂಜಾರಿಯ ಶಿರದಲ್ಲಿ ವಿಜೃಂಭಿಸುತ್ತದೆ. ಆ ಕ್ಷಣವೇ ವೇದಘೋಷ ಭಾಂಕ ವಾದನ, ಗೋವಿಂದ ನಾಮಾವಳಿಯ ಸ್ಮರಣೆ ಗಗನ ಮುಟ್ಟುವಂತೆ ಝೇಂಕರಿಸುತ್ತದೆ. ಈ ಪುಣ್ಯ, ಪವಿತ್ರ ಗಳಿಗೆಯಲ್ಲಿ ಮಂಡಿಯೂರಿ ದೇವಸ್ಥಾನದ ಗರ್ಭದುಡಿಯಿಂದ ಹೊರಬರುವ ಕರಗವು ಭಕ್ತಾದಿಗಳಿಗೆ ಕಾಣಿಸಿಕೊಳ್ಳುತ್ತಿದ್ದಂತೆಯೇ ಗೋವಿಂದ ಗೋವಿಂದ ಎಂಬುವ ಘೋಷಣೆ ಡಿಕ್ ಡಿ ಎನ್ನುವಂತಹ ವೀರಕುಮಾರರ ಅಲಗು ಸೇವೆ ನಭೋಮಂಡಲದಲ್ಲಿ ಪ್ರತಿಧ್ವನಿಸುವಂತೆ ಭಾಸವಾಗುತ್ತದೆ. ಇಲ್ಲಿಂದ ಹೊರಡುವ ಕರಗವು ದೇವಸ್ಥಾನವನ್ನು ಪ್ರದಕ್ಷಿಣೆ ಹಾಕಿ ಹೊರನಡೆದು ದೇವಸ್ಥಾನದಲ್ಲಿ ಆರತಿ ಸ್ವೀಕರಿಸಿ, ಶ್ರೀಧರ್ಮರಾಯಸ್ವಾಮಿ ರಥಕ್ಕೆ ಮೂರು ಬಾರಿ ಪ್ರದಕ್ಷಿಣೆ ಹಾಕಿ ಉತ್ಸವಕ್ಕಾಗಿ ಆಹ್ವಾನಿಸಿರಬಹುದಾದ ಮುಖ್ಯ ಅತಿಥಿಗಳು ಹಾಗೂ ಗಣ್ಯರಿಗೆ ದರ್ಶನ ನೀಡಿ, ಆಶೀರ್ವದಿಸಿ, ಅಲ್ಲಿಂದ ಮುಂದೆ ಸಾಗಿ ನಗರದ ಪ್ರಮುಖ ಬೀದಿಗಳಲ್ಲಿ ಹಾದು ನಗರದ ಒಂಭತ್ತು ಬಾಗಿಲುಗಳಿಗೂ ದರ್ಶನ ನೀಡಿ ಎಲ್ಲ ಭಕ್ತರ ಪೂಜೆಗಳನ್ನು

ಹಾಗೂ ಈ ಮಧ್ಯೆ ಸಿಗುವ ಎಲ್ಲಾ ಪುರಾತನ ದೇವಸ್ಥಾನಗಳಲ್ಲಿ ಪೂಜೆಯನ್ನು ಸ್ವೀಕರಿಸಿ ಸೂರ್ಯೋದಯಕ್ಕೆ ಮೊದಲು ದೇವಸ್ಥಾನವನ್ನು ಸೇರುತ್ತದೆ. ಕೆಲವು ಬಾರಿ ಕಾಲ ಮತ್ತು ಸಂದರ್ಭಗಳ ಒತ್ತಡದಿಂದ ದೇವಸ್ಥಾನ ಸೇರುವ ಸಮಯ ತಡವಾಗಿದ್ದುಂಟು. ಈ ಉತ್ಸವವು ವಿಶೇಷವಾಗಿ ಇಡಿ ಸಮುದಾಯಕ್ಕೆ ಮಂಗಳಕರವನ್ನು ಬಯಸುವ ಉತ್ಸವವಾಗಿರುತ್ತದೆ. ಆ ದಿನ ಭಕ್ತಿಯಿಂದ ಕರಗದ ದರ್ಶನ ಪಡೆದವರಿಗೆ ಅವರ ಜೀವನದಲ್ಲಿ ಶಾಂತಿ ಮತ್ತು ಸಂಪತ್ತು ವೃದ್ಧಿಸುವುದೆಂದು ಗಾಢವಾದ ನಂಬಿಕೆಯಿಂದೆ. ಜಾತಿಮತ ಪಂಥಗಳ ಭೇದವನ್ನು ಮರೆತು ನಗರದ ಎಲ್ಲ ಜನರು ಈ ಉತ್ಸವದಲ್ಲಿ ಭಾಗವಹಿಸುತ್ತಾರೆ.

ವಸಂತೋತ್ಸವ:– ಹತ್ತನೆಯ ದಿನ ಅಂದರೆ ಹೂವಿನ ಕರಗದ ಮಾರನೆಯ ದಿನ ಸಂಜೆ ದೇವಸ್ಥಾನದ ಆವರಣದಲ್ಲಿ ವಸಂತೋತ್ಸವವು ನಡೆಯುವುದು. ಭಕ್ತ ಜನರು ದೇವಿಯ ಉತ್ಸವವನ್ನು ಯಶಸ್ವಿಯಾಗಿ ಆಚರಿಸಿದ ವಿಜಯೋತ್ಸವದ ಆದಿಯಲ್ಲಿ ವಸಂತೋತ್ಸವವನ್ನು ನಡೆಸುವವರು. ಹುಣಸೇ ಬರಲಿನ ಮಧ್ಯದಲ್ಲಿ ಕಟ್ಟಿರು ತೆಂಗಿ ಕಾಯೊಂದನ್ನು ಯುವಜನರು ಒನಕೆಯಿಂದ ಹೊಡಿಯುವುದು, ವನಿತೆಯರು ಮತ್ತು ಯುವಜನರು ಹರಿಶಿನದ ನೀರನ್ನು ತಂಬಿಗೆ ತುಂಬಿಕೊಂಡು ರಭಸದಿಂದ ಮುಖಕ್ಕೆ ಎರಚುವುದು.

ಗಾವುಸೇವೆ:– ಹತ್ತನೆಯ ದಿನ ರಾತ್ರಿ ನಡೆಯುವ ಪಾರಾಯಣ ಮತ್ತು ಬೆಳಗಿನ ಜಾವದಲ್ಲಿ ನಡೆಯುವ ಗಾವು ಸೇವೆಯನ್ನು 'ಗಾವು' ಎಂದು ಕರೆಯುತ್ತಾರೆ. ಪೋತರಾಜನ ಚರಿತ್ರೆಯನ್ನು ಘಂಟೆ ಪೂಜಾರರು ನಡೆಸಿಕೊಡುವ ಕಥಾ ಪಾರಾಯಣ ಬೆಳಗಿನ ಜಾವದವರೆಗೂ ನಡೆದು. ಪಾರಾಯಣದ ನಂತರ ಬೆಳಗಿನ ಕೋಳಿ ಕೂಗುವ ಜಾವದಲ್ಲಿ ಪೋತರಾಜನನ್ನು ಅರ್ಚಿಸಿ, ಪೂಜಿಸಿ, ಭಕ್ತಿಯ ಪರಾಕಾಷ್ಠೆಗೆ ಆತನನ್ನು ಕೊಂಡೊಯ್ದು ಪೋತರಾಜನ ಶಕ್ತಿಯನ್ನು ಆಹ್ವಾನಗೈದು ಅರ್ಚಿಸಲಾಗುತ್ತದೆ. ಬಳಿಕೆ ಆತನ ಶೌರ್ಯ, ಪರಾಕ್ರಮಗಳನ್ನು ಹಾಡಿ ಹೊಗಳಿದ ನಂತರ, ಅವನ ರೋಷವನ್ನು ಸಾಂತ್ವನಗೊಳಿಸಲು ಕರಿಯ ಬಣ್ಣದ

ಮೇಕೆಯೊಂದನ್ನು ಸಮರ್ಪಿಸುತ್ತಾರೆ. ಪೋತರಾಜನು ಆ ಮೇಕೆಯ ಕಂಠದ ಬಳಿ ಕಡಿದು ರಕ್ತವನ್ನು ಹೀರಿ ಸಾಂತ್ವನಗೊಳ್ಳುತ್ತಾನೆ. ನಂತರ ಮಹಾ ಮಂಗಳಾರತಿಯಾಗುತ್ತದೆ. ಈ ಒಂದು ಸೇವಾ ಕ್ರಮವನ್ನು "ಗಾವು" ಎಂದು ಸಂಬೋಧಿಸಿ ನಡೆಸಿಕೊಂಡು ಬರುತ್ತಿರುವುದು ರೂಢಿಯಲ್ಲಿದೆ.

ಧ್ವಜಾ ಅವರೋಹಣ:- ಧ್ವಜಾರೋಹಣ ಆದ ಹನ್ನೊಂದನೆಯ ದಿನ ರಾತ್ರಿ ಧ್ವಜಾ ಅವರೋಹಣವಾಗುತ್ತದೆ. ಅಂದರೆ ರಥೋತ್ಸವವನ್ನು ನಡೆಸಿ ಬಂದ ನಂತರ ಧ್ವಜಸ್ತಂಭಕ್ಕೆ ಪೂಜೆಯನ್ನು ಮಾಡಿ ದೇವಸ್ಥಾನದಲ್ಲಿ ಪುಣ್ಯಾಹ, ಹೋಮಗಳನ್ನು ಮಾಡಿ ಕುಲಸ್ಥರೆಲ್ಲರೂ ಸೇರಿ ಏರಿಸಿದ ಧ್ವಜವನ್ನು ಇಳಿಸುತ್ತಾರೆ. ಇಲ್ಲಿಗೆ ಕರಗ ಶಕ್ತಿ ಉತ್ಸವದ ಆಚರಣೆ ಅಂತ್ಯಗೊಂಡು, ಗಣಾಚಾರಾದಿ ಕುಲಸ್ಥರೆಲ್ಲರು ಕಂಕಣಗಳನ್ನು ಬಿಚ್ಚಿಟ್ಟು ನಂತರ ಆಡಳಿತ ಮಂಡಳಿ ಮತ್ತು ಯಜಮಾನರು, ಗೌಡರು, ಚಾಕರಿದಾರರಾದಿಯಾಗಿ ಘಂಟೆ ಪೂಜಾರಿಯವರನ್ನು ಮತ್ತು ಪೂಜಾರಿಯವರನ್ನು ಅವರವರ ಮನೆಗಳಿಗೆ ಸಕಲ ಗೌರವಗಳೊಂದಿಗೆ ಕರೆದುಕೊಂಡು ಹೋಗಿ ಬಿಟ್ಟು ಬರುತ್ತಾರೆ. ಇಲ್ಲಿಗೆ ಶಕ್ತಿ ಉತ್ಸವದ ಎಲ್ಲ ಕಾರ್ಯಗಳು ಮುಗಿದಂತಾಗುತ್ತದೆ.

ಅಧ್ಯಾಯ 02

ಉಪಸಂಹಾರ

ಅಧ್ಯಾಯ–07

ಸಮಾರೋಪ

ಜನಾಂಗೀಯ ಸಂಸ್ಕೃತಿಯ ಅಧ್ಯಯನವು ನಮ್ಮ ಪಾರಂಪರಿಕ ಸಾಂಸ್ಕೃತಿಕ ಆವರಣದಲ್ಲಿ ಬದುಕುತ್ತಿರುವ ತಿಗಳರಲ್ಲಿ ಅವರ ನೈಜ ಸಂಸ್ಕೃತಿಯನ್ನು ಚಿತ್ರಿಸುವುದಕ್ಕೆ ಈ ಬಗೆಯ ಅಧ್ಯಯನ ಇಂದಿಗೂ ಪ್ರಸ್ತುತವೆನಿಸಿದೆ. ಹುಟ್ಟಿನಿಂದ ಸಾವಿನವರೆವಿಗೆ ಜೀವನ ಚಕ್ರದ ಮುಖ್ಯ ಘಟ್ಟಗಳಲ್ಲಿ ಇವರು ಅನುಸರಿಸುವ ಸಂಪ್ರದಾಯ ಆಚರಣೆಗಳು ವೈಶಿಷ್ಟ್ಯ ಪೂರ್ಣವಾಗಿದ್ದು ಅವರ ಸಂಸ್ಕೃತಿಯ ಪ್ರತೀಕವಾಗಿದೆ.

ಹಲವು ಧರ್ಮಗಳ ದೇಗುಲವಾದ ಹಲವು ಜಾತಿಗಳ ಶಾಂತಿಯ ತೋಟವಾದ ಕರ್ನಾಟಕದಲ್ಲಿ ಬೀಡು ಬಿಟ್ಟಿರುವ ತಿಗಳರು ಅಚ್ಚಕನ್ನಡಿಗರೇ ಆಗಿದ್ದಾರೆ. ಇವರು ತಮ್ಮದೇ ಆದ ಜಾತಿ ಅಥವಾ ಭಾಷೆಯ ದ್ವೀಪವನ್ನು ರಚಿಸಿಕೊಳ್ಳುವ ಪರಿಪಾಠದಿಂದ ದೂರ ಉಳಿದು ಇಲ್ಲಿ ಅಚ್ಚ ಕನ್ನಡಿಗರಾಗಿಯೇ ಉಳಿದಿದ್ದಾರೆ. ಆಧುನಿಕತೆಗೆ ಅನುಗುಣವಾಗಿ ಬದಲಾವಣೆಗೆ ಪರಿತಪಿಸುತ್ತಾ ತಾವು ಹಿಂದಿನಿಂದಲೂ ರೂಢಿಸಿಕೊಂಡು ಬಂದಂತಹ ಸಂಪ್ರದಾಯಗಳನ್ನ ಬಿಡದಂತೆ ಚಾಚೂ ತಪ್ಪದೆ ಅನುಸರಿಸಿಕೊಂಡು ಬರುತ್ತಿದ್ದಾರೆ.

ಪ್ರತಿಯೊಂದು ಸಮಾಜವು ಪರಿವರ್ತನಾ ಶೀಲವಾದದ್ದು. ಆಧುನಿಕತೆಯ ಬದಲಾವಣೆಯ ಗಾಳಿ ಬೀಸುವಿಕೆ ದಿನದಿಂದ ದಿನಕ್ಕೆ ಬದಲಾಗುತ್ತಿರುವುದನ್ನು ಕಾಣಬಹುದು. ನಾಗರೀಕ ಪ್ರಪಂಚದಿಂದ ದೂರವಿದ್ದು, ತನ್ನದೇ ಆದ ಹೊಲ, ಗದ್ದೆ, ತೋಟಗಳ ಬಳಿ ಮನೆ ಕಟ್ಟಿಕೊಂಡು ಏಕಾಂಗಿಗಳಾಗಿ ಸದಾ ದುಡಿಮೆಯ ಕಾಯಕದಲ್ಲಿ ಬದುಕುತ್ತಿದ್ದ ತಿಗಳರು ಇದೀಗ ಪರಿವರ್ತನೆಯ ಹಾದಿ ಹಿಡಿದಿದ್ದಾರೆ. ಇವರ ಜೀವನದಲ್ಲಿ ಆಧುನಿಕ ಪರಿಸರದ ಗಾಳಿ ಬೀಸುತ್ತಿರುವುದರಿಂದ ನೂರಾರು, ಸಾವಿರ ವರ್ಷಗಳಿಂದ ಬೇರು ಬಿಟ್ಟುಕೊಂಡಿದ್ದ

ಅವರ ಸಂಸ್ಕೃತಿ ಆಚಾರ, ವಿಚಾರ ಸ್ವಲ್ಪ ಮಟ್ಟಿಗೆ ಸಡಿಲಗೊಂಡು ಅವರ ಆಚಾರ, ವಿಚಾರ, ಸಂಸ್ಕಾರಗಳಲ್ಲಿ ಆಗಾಧ ಬದಲಾವಣೆಗಳು ಆಗುತ್ತಿರುವುದನ್ನು ಕಾಣಬಹುದು.

ಎರಡು ಶತಮಾನಗಳಿಂದಿಚೆಗೆ ಸಾಮಾಜಿಕ ಮಾನವಶಾಸ್ತ್ರ ಉಗಮದ ನಂತರ ನಾಗರೀಕ ಜಗತ್ತಿನ ಮನುಷ್ಯ ಜೀವನ ಕ್ರಮವನ್ನು ಅರ್ಥಮಾಡಿಕೊಳ್ಳಬೇಕು ಎಂದಾಯಿತು ಹಾಗೆ ಅವರ ಜೀವನವನ್ನು ಅರಿಯಬೇಕಾಗದರೆ ಅವರು ವಾಸಿಸುವ ನೆಲೆಗಳಿಗೆ ಹೋಗಬೇಕು ಎಂಬುದು ಮನಶಾಸ್ತ್ರಜ್ಞರ ಮನಸ್ಸಿಗೆ ಬಂತು ಹೀಗೆ ಭಾರತದ ಪ್ರತಿಯೊಂದು ಬುಡಕಟ್ಟು ಮತ್ತು ಜನಾಂಗಗಳ ಕ್ರಮ ಆರಂಭವಾಯಿತು. ಪ್ರತಿಯೊಂದು ಬುಡಕಟ್ಟು ಮತ್ತು ಜನಾಂಗಗಳ ಸಂಸ್ಕೃತಿಯನ್ನು ಹಂತ ಹಂತವಾಗಿ ಸಂಶೋಧಿಸುವತ್ತಾ ಹೋದಂತೆ ಜನಾಂಗಗಳ ಮತ್ತು ಬುಡಕಟ್ಟುಗಳ ನಡುವೆ ಸಾಮ್ಯತೆಗಳು ಕಂಡು ಬಂದರೂ ಕೆಲವು ವ್ಯತ್ಯಾಸಗಳು ಸಂಪ್ರದಾಯದಲ್ಲಿ ತಮ್ಮದೇ ಆದಂತಹ ವೈಶಿಷ್ಟ್ಯಗಳನ್ನು ಒಳಗೊಂಡಿರುವುದು ಕಂಡು ಬರುತ್ತದೆ. ನನ್ನ ಅಧ್ಯಯನವು ಕೂಡ ಅದೇ ಹಾದಿಯಲ್ಲಿದೆ.

ತಿಗಳರು ಒಂದು ಸಾಂಸ್ಕೃತಿಕ ಅಧ್ಯಯನವನ್ನು ಆರಿಸಿಕೊಂಡು ಅವರು ವಾಸಿಸುವ ಭೌಗೋಳಿಕ ಪರಿಸರ, ಊಟ, ಐತಿಹ್ಯ, ಜನಾಂಗದ ಹಿನ್ನೆಲೆ, ಉಪಜಾತಿಗಳು, ಅವರ ಸಾಮಾಜಿಕ ವ್ಯವಸ್ಥೆ, ಜೀವನ ವಿಧಾನ, ಸಂಪ್ರದಾಯ, ನಂಬಿಕೆಗಳು, ಧರ್ಮ ಮತ್ತು ಆಚರಣೆಗಳು, ಜನಪದ ಕಲೆ ಮತ್ತು ಸಾಹಿತ್ಯ ಅವುಗಳಲ್ಲಿ ಕಂಡುಬರುವ ಸಾಂಸ್ಕೃತಿಕ ವೈಶಿಷ್ಟ್ಯ ಮತ್ತು ವೈವಿದ್ಯತೆಯನ್ನು ಸಂಶೋಧಿಸಿದ್ದೇನೆ. ಜನರಲ್ಲಿ ಕಂಡು ಬರುವ ನಂಬಿಕೆ ಸಂಪ್ರದಾಯಗಳ ಹಿನ್ನಲೆಯಲ್ಲಿರುವ ವೈಜ್ಞಾನಿಕ ಚಿಂತನೆಯನ್ನು ಗುರುತಿಸುವ ಯತ್ನವನ್ನು ಮಾಡಿದ್ದೇನೆ.

ಜಾತಿ ಸಮುದಾಯಗಳ ಕಾಲಾನುಕಾಲದ ಆದರ್ಶಗಳನ್ನು ಅವರ ಸರಳ ಬದುಕಿನ ನಿಯಮಗಳನ್ನು ಇದೀಗ ಖಚಿತವಾದ ಅಧ್ಯಯನಕ್ಕೆ ಒಳಪಡಿಸಬೇಕಾಗಿದೆ. ಅಧ್ಯಯನಕ್ಕೆ

ಯಾಕೆ ಒಳಪಡಿಸಬೇಕು? ಅದರ ಅಗತ್ಯವೇನು? ಎಂಬ ಕಾರಣಕ್ಕಾಗಿಯೇ ಈ ಕಿರು ಪ್ರಬಂಧದಲ್ಲಿ ಪ್ರಮುಖ ಜಾತಿಗಳಲ್ಲಿ ಒಂದಾದ ತಿಗಳ ಜಾತಿ ಸಮುದಾಯಗಳಲ್ಲಿ ಇರುವ ಸಾಂಸ್ಕೃತಿಕ ಆಚರಣೆಗಳನ್ನು ಅದರ ಪ್ರಾಮುಖ್ಯತೆಯನ್ನು ಸ್ಥೂಲವಾಗಿ ತಿಳಿಸುವ ಕಾರಣಕ್ಕಾಗಿ ಜನಾಂಗೀಯ ಅಧ್ಯಯನದಲ್ಲಿ ತಿಗಳ ಜನಾಂಗ ಅಧ್ಯಯನವನ್ನು ಒಂದು ವಿಷಯದ ಶಿಸ್ತಾಗಿ ಕೈಗೊಳ್ಳಬೇಕಾಗಿದೆ ಇದರಿಂದ ಜನಾಂಗವನ್ನು ಸಮರ್ಪಕವಾಗಿ ಸಮರ್ಥವಾದ ರೀತಿಯಲ್ಲಿ ಮತ್ತು ವೈಜ್ಞಾನಿಕವಾಗಿ ಅವರ ಮೂಲ ವಿಕಾಸ, ನೆಲೆಯನ್ನು ಅರಿಯಲು ಸಹಾಯಕವಾಗಿದೆ. ಇದು ಇವತ್ತಿನ ಸಂದರ್ಭಕ್ಕೆ ಬಹಳ ಸೂಕ್ತವಾಗಿದೆ.

ಹಲವು ಸಮುದಾಯಗಳಿರುವ ನಮ್ಮ ದೇಶದಲ್ಲಿ ಇಂತಹ ಅಧ್ಯಯನವು ಬಹಳ ಅಗತ್ಯವಾಗಿದೆ. ತಿಗಳರನ್ನು ಕುರಿತಂತೆ ಅವರ ಜೀವನ ವಿಧಾನ, ಸಂಸ್ಕೃತಿಯನ್ನು ಕುರಿತು ಈ ವರೆಗೆ ಯಾವುದೇ ಅಧ್ಯಯನ ನಡೆದಿರುವುದಿಲ್ಲ ಪ್ರಸ್ತುತ ಅಧ್ಯಯನ ಮತ್ತು ಸಂಶೋಧನೆ ಈ ದಿಕ್ಕಿನಲ್ಲಿ ಉಪಯುಕ್ತವಾಗಿದೆ ಎಂಬುದು ನನ್ನ ಭಾವನೆ.

ಗ್ರಂಥಸೂಚಿ

ಅನುಬಂಧ

ಛಾಯಾಚಿತ್ರಗಳು

ಗ್ರಂಥ ಸೂಚಿ

1) ಕವಿತಾಕೃಷ್ಣ – ಕರ್ನಾಟಕದ ತಿಗಳುರು
ಪ್ರಕಾಶಕರು : ಟಿ. ಆರ್.ಗೋವಿಂದಯ್ಯ – 1984

2) ಲಕ್ಷ್ಮಣ್.ಕೆ – ತಿಗಳ ಜನಾಂಗದ ಇತಿಹಾಸ ಮತ್ತು ಕರಗ ಶಕ್ತ್ಯೋತ್ಸವ
ಪ್ರಕಾಶಕರು : ಶ್ರೀಮತಿ ಸುಶೀಲ ಲಕ್ಷ್ಮಣ್ – 1999

3) ಪ್ರಶಾಂತ್ ಹೆಚ್.ಡಿ – ಜನ ಸಮುದಾಯ ಸಂಪುಟ
ಕರ್ನಾಟಕ ರಾಜ್ಯ ಕೋಶ 4
ಪ್ರ.ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ 2000

4) ರಾಮಚಂದ್ರೇಗೌಡ ಹಿ.ಶಿ. – ಜಾನಪದ : ಸಾಂಸ್ಕೃತಿಕ ಆಯಾಮಗಳೂ
ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು – 1998

5) ಲಲಿತ ಎ.ಸಿ. – ಕಾಡು ಕುರುಬರು ಮತ್ತು ಜೇನು ಕುರುಬರ ಸಂಸ್ಕೃತಿ
ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು – 93

6) ಚಿಕ್ಕಣ್ಣ ಎಣ್ಣೆ ಕಟ್ಟೆ – ತುಮಕೂರು ಜಿಲ್ಲೆಯ ಜಾನಪದೀಯ ಅಧ್ಯಪದಿಯ ಅಧ್ಯಯನ
ಪ್ರಕಟಣೆ: ಗಡಿನಾಡು ಜಾನಪದ ಸಂಪರ್ಕ ಕೇಂದ್ರ
ಶಿರಾ – 2001

7) ಲಕ್ಕಪ್ಪಗೌಡ ಹೆಚ್.ಜೆ – ಕರ್ನಾಟಕ ಬುಡಕಟ್ಟುಗಳು ಸಂಪುಟ – 1
ಪ್ರಕಟಣೆ: ಜಾನಪದ ಮತ್ತು ಯಕ್ಷಗಾನ ಅಕಾಡೆಮಿ 1998

8) ಶಂಕರನಾರಾಯಣ.ತಿ.ನಂ. – ಜಾನಪದ ಸಮೀಕ್ಷೆ: ವಿಶ್ಲೇಷಣೆ
ಪ್ರಕಟಣೆ: ಪ್ರಸಾರಾಂಗ ಮೈಸೂರು ವಿಶ್ವವಿದ್ಯಾನಿಲಯ 1982

9) ಯೋಗೀಶ್. ಡಿ. ಎನ್. – ಜಯಮಂಗಲಿ
ಪ್ರಕಟಣೆ: ಕನ್ನಡ ಸಾಹಿತ್ಯ ಪರಿಷತ್ ಬೆಂಗಳೂರು – 2002

10) ರಾಜೇಂದ್ರ ಡಿ.ಕೆ ಮತ್ತು ನೀಲೇಗೌಡ – ಜಾನಪದಸಂಭವನೆ
ಪ್ರಕಟಣೆ: ಮನೋಹರ ಸ್ಮಾರಕ ಗ್ರಂಥಮಾಲೆ, ಧಾರವಾಡ 1990

11) ಯಾದವಾಡ ಎಸ್.ಪಿ. – ಪ್ರಗತಿ ಶೀಲ ಭಾರತದಲ್ಲಿ ಶಿಕ್ಷಣ
ಪ್ರಕಟಣೆ: ವಿದ್ಯಾನಿಧಿ ಪ್ರಕಾಶನ, ಗದಗ 1999–2000

12) ವಿ.ಹನುಮಂತರಾಯಪ್ಪ – ಭಾರತದ ತಿಗಳ ಕ್ಷತ್ರಿಯ ವಂಶ ಮತ್ತು ಸಂಸ್ಕೃತಿ
ಪ್ರಕಟಣೆ: ಬೆಂ. ಉ. ತಾಲ್ಲೂಕು ತಿಗಳರ ಕ್ಷತ್ರಿಯ ಮಹಾ ಸಭಾ 2015

ವಕ್ತೃಗಳ ವಿವರ

ಕ್ರ. ಸಂ.	ಹೆಸರು	ವಯಸ್ಸು	ಸ್ಥಳ	ವೃತ್ತಿ	ಜಾತಿ
1)	ಎಂ. ಆಂಜನೇಯ	60	ತುಮಕೂರು	ನಿ. ಪ್ರಾಧ್ಯಾಪಕರು	ತಿಗಳರು
2)	ಪ್ರೆಸ್. ರಾಜಣ್ಣ	55	ತುಮಕೂರು	ಪತ್ರಿಕಾ ಸಂಪಾದಕರು	ತಿಗಳರು
3)	ಹುಚ್ಚಪ್ಪ	40	ಹೊಸಪಾಳ್ಯ	ವ್ಯವಸಾಯ	ತಿಗಳರು
4)	ಗೋವಿಂದಯ್ಯ	60	ಎಸ್.ಕೊಡಗೀಹಳ್ಳಿ	ವ್ಯವಸಾಯ	ಒಕ್ಕಲಿಗರು
5)	ರೇವಣ್ಣ ಸಿದ್ದಯ್ಯ	40	ತುಮಕೂರು	ಅ.ಕ.ತಿ.ಕ್ಷೇ.ಸಂ. ಅಧ್ಯಕ್ಷರು	ತಿಗಳರು
6)	ಧರ್ಮಯ್ಯ	70	ಹೊಸಪಾಳ್ಯ	ವ್ಯವಸಾಯ	ತಿಗಳರು
7)	ಶೆಟ್ಟಳ್ಳಪ್ಪ	70	ಹುರುಳಿತೋಟ	ವಿ. ನಿ. ಸಹಾಯಕರು	ತಿಗಳರು
8)	ಮುದ್ರೆ ಚಿಕ್ಕ ಸಿದ್ದಯ್ಯ	55	ಹೊಸಪಾಳ್ಯ	ವ್ಯವಸಾಯ	ತಿಗಳರು
9)	ವೆಂಕಟರಾಮಯ್ಯ	50	ಪೆಮ್ಮನಹಳ್ಳಿ	ವ್ಯವಸಾಯ	ಪ. ಜಾತಿ
10)	ದೊಡ್ಡ ನರಸಯ್ಯ	60	ಹೊಸಪಾಳ್ಯ	ವ್ಯವಸಾಯ	ತಿಗಳರು
11)	ಭೀಮಯ್ಯ	70	ಹೊಸಪಾಳ್ಯ	ವ್ಯವಸಾಯ	ತಿಗಳರು
12)	ರಾಜಣ್ಣ	40	ಊರ್ಡಿಗೆರೆ	ಉಪನ್ಯಾಕರು	ತಿಗಳರು
13)	ನಾರಾಯಣ ಸ್ವಾಮಿ	45	ತುಮಕೂರು	ವಕೀಲರು	ತಿಗಳರು
14)	ದೊಡ್ಡ ಸಿದ್ದಮ್ಮ	75	ಹೊಸಪಾಳ್ಯ	ಹೂವಿನ ವ್ಯಾಪಾರ	ತಿಗಳರು
15)	ಪಾರ್ವತಮ್ಮ	70	ಹೊಸಪಾಳ್ಯ	ವ್ಯವಸಾಯ	ತಿಗಳರು
16)	ಶಾಂತಮ್ಮ	35	ಹೊಸಪಾಳ್ಯ	ವ್ಯವಸಾಯ	ತಿಗಳರು
17)	ಜಯಮ್ಮ	45	ಹೊಸಪಾಳ್ಯ	ವ್ಯವಸಾಯ	ತಿಗಳರು
18)	ರುದ್ರಮ್ಮ	40	ಹೊಸಪಾಳ್ಯ	ವ್ಯವಸಾಯ	ತಿಗಳರು
19)	ಹೊನ್ನಮ್ಮ	45	ಹೊಸಪಾಳ್ಯ	ವ್ಯವಸಾಯ	ತಿಗಳರು
20)	ಸಾಕಮ್ಮ	40	ಹೊಸಪಾಳ್ಯ	ವ್ಯವಸಾಯ	ತಿಗಳರು
21)	ಪಾಂಡು	55	ಕನ್ನಿದೊಡ್ಡಿ (ಚನ್ನಪಟ್ಟಣ)	ವ್ಯವಸಾಯ	ತಿಗಳರು



ತಿಗಳರ ಕುಲ ದೇವರು - ಶ್ರೀ ಅಗ್ನಿಬನ್ನಿರಾಯಸ್ವಾಮಿ



ತಿಗಳರ ವಿಶೇಷ ಆಚರಣೆ – ಹೂವಿನ ಕರಗ ಉತ್ಸವ



೮೦೦ಕ್ಕೂ ಹೆಚ್ಚಿನ ವರ್ಷದ ಪುರಾತನ ಶ್ರೀ ಧರ್ಮರಾಯಸ್ವಾಮಿ ದೇವಸ್ಥಾನ, ಬೆಂಗಳೂರು



ಅರಿಶಿಣ-ಕುಂಕುಮ ನೀಡುವುದು



ಬಳೆಶಾಸ್ತ್ರ



ಚಪ್ಪರಶಾಸ್ತ್ರ



ಸೋದರಮಾವನಿಂದ ಕಾಲುಂಗುರ ಧಾರಣೆ



ಅರುಣೆಶಾಸ್ತ್ರ ಮತ್ತು ಧಾರೆಕಂಬಶಾಸ್ತ್ರ



ವಧುವಿಗೆ ಅರಿಶಿಣಶಾಸ್ತ್ರ



ವರನಿಗೆ ಅರಿಶಿಣಶಾಸ್ತ್ರ



ಶಾಸ್ತ್ರದ ಭತ್ತ ಕುಟ್ಟುವುದು



ಶಾಸ್ತ್ರದ ನೀರು ತರುವುದು



ಉಪ್ಪು ಮತ್ತು ಅಕ್ಕಿ ಮುಟ್ಟಿಸಿ ಪ್ರಮಾಣ ಮಾಡಿಸುವುದು



ಹಾಲು-ಎಲೆ ಶಾಸ್ತ್ರ




ವಧುವಿಗೆ ಬಾಸಿಂಗ ಕಟ್ಟುವುದು



ದೊಡ್ಡವಿಳ್ಯೆಶಾಸ್ತ್ರ



ತುಳಸಿಮಾಲೆ ಧಾರಣೆ



ತಾಳಿಕಟ್ಟುತ್ತಿರುವುದು



ಧಾರೆಮಹೂರ್ತ



ಮನೆತುಂಬಿಸಿಕೊಳ್ಳುವುದು